RNI .KAR/KAN/2009/31934 ಬೆಂಗಳೂರು ಸಂಪುಟ: 16 ಸಂಚಿಕೆ: 108 ಪುಟ: 06 ಮಂಗಳವಾರ 25–03–2025

₹ 3 Mail:mussanje2010@gmail.com www.mussanjenews.com

# ಮುಸ್ಸಂಜೆ

ಪ್ರಭಾವಶಾಲಿ ಕನ್ನಡ ಸಂಜೆ ದಿನ ಪತ್ರಿಕೆ

Managing Editor: N.Veerendra Babu (MBA, LLB)

Executive Editor: L P Babu

Honourary Editor: Venkatesh

ಸುದ್ದಿ, ಜಾಹೀರಾತು ಹಾಗೂ ಪತ್ರಿಕೆಗೆ ಚಂದಾದಾರರಾಗಲು ಸಂಪರ್ಕಿಸಿ: 9448074878



‘ರಶ್ಮಿಕಾ ಮತ್ತು ಅವರ ತಂದೆಗೇ ಸಮಸ್ಯೆಯಿಲ್ಲ ಅಂದ್ಮೇಲೆ ನಿಮಗ್ಯಾಕೆ’

ಮಗಳಿಗೆ ಸಾಂಪ್ರದಾಯಿಕ ಹೆಸರಿಟ್ಟ ನೇಹಾ ಗೌಡ ↘ ಪುಟ 6

# ಹನಿಟ್ರ್ಯಾಪ್; ಗೃಹ ಇಲಾಖೆಗೆ ದೂರು


## ನನ್ನ ವಿರುದ್ಧ ಷಡ್ಯಂತ್ರ ನಡೆದಿದ್ದು ನಿಜ; ನ್ಯಾಯಾಧೀಶರ ಹೆಸರು ಪ್ರಸ್ತಾಪ ಮಾಡಿಲ್ಲ: ರಾಜಣ್ಣ

**ತುಮಕೂರು:** ನನ್ನನ್ನು ಹನಿಟ್ರ್ಯಾಪ್ ಮೂಲಕ ಖೆಡ್ಡಾಗೆ ಕೆಡವಲು ಬ್ಲೂ ಜೀನ್ಸ್ ಧರಿಸಿದ್ದ ಹುಡುಗಿ ಬಂದಿದ್ದು ನಿಜ. ಈ ಸಂಬಂಧ ನಾನು ಮಂಗಳವಾರ ಗೃಹ ಇಲಾಖೆಗೆ ದೂರು ನೀಡುತ್ತಿದ್ದೇನೆ. ಈ ಪ್ರಕರಣದಲ್ಲಿ ನ್ಯಾಯಾಧೀಶರ ಹೆಸರನ್ನು ನಾನು ಎಲ್ಲೂ ತಂದಿಲ್ಲ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನಗೆ ಕಾರ್ಯಕ್ರಮಗಳ ನಿಮಿತ್ತ ದೂರು ನೀಡಲು ಬಿಡುವು ಇರಲಿಲ್ಲ. ಈಗ ಬಿಡುವು ಮಾಡಿಕೊಂಡು ದೂರು ನೀಡಲು ಮುಂದಾಗಿದ್ದೇನೆ ಎಂದರು.

ಹನಿಟ್ರ್ಯಾಪ್ ಮಾಡಲು ಎರಡು ಬಾರಿ ಬೇರೆ ಬೇರೆ ಹುಡುಗಿಯರುಬಂದಿದ್ದರು. ಅದರಲ್ಲಿ ಒಬ್ಬಳು ಬ್ಲೂ ಜೀನ್ಸ್ ಧರಿಸಿದ್ದಳು. ಬಂದವರು ವಕೀಲರು ಎಂದು ಹೇಳಿಕೊಂಡಿದ್ದರು ಎಂದು ಹೇಳಿದರು.

ಎರಡು ಬಾರಿ ಒಬ್ಬ ಹುಡುಗ ಬಂದಿದ್ದ. ಒಬ್ಬಳು ಹುಡುಗಿ 2 ಸಲ ಬಂದಿದ್ದಳು. ಮೊದಲ ಬಾರಿ ಬಂದಾಗ ಯಾರು ಎಂದು ಹೇಳಿರಲಿಲ್ಲ. ‘ಸರ್, ನಿಮ್ಮತ್ರ ಬಹಳ ಪರ್ಸನಲ್ಲಾಗಿ ಗುಟ್ಟಾಗಿ ಮಾತನಾಡಬೇಕು’ ಎಂದಿದ್ದಳು. ಎರಡನೇ ಸಲ ಬಂದಾಗ, ‘ಹೈಕೋರ್ಟ್ ವಕೀಲೆ’



ಎಂದು ಹೇಳಿಕೊಂಡಿದ್ದಳು ಎಂದು ಹೇಳಿದರು.

ಹನಿಟ್ರ್ಯಾಪ್ ನಡೆಸಲು ಬಂದವರು ನನ್ನ ವಿರುದ್ಧ ನಡೆಸಿದ ಷಡ್ಯಂತ್ರಗಳ ಬಗ್ಗೆ ಪೂರ್ಣವಾದ ವಿವರಗಳೊಂದಿಗೆ ಮೂರು ಪುಟ ಗಳಷ್ಟು ದೂರನ್ನು ನನ್ನ ಕೈಯಾರೆ ಬರೆದಿದ್ದೇನೆ.ಆ ದೂರನ್ನು ಇಂದು ಸಂಜೆ ವೇಳೆಗೆ ಗೃಹಸಚಿವರಿಗೇ ನೀಡುತ್ತೇನೆ ಎಂದು ತಿಳಿಸಿದರು. ಗೃಹ ಸಚಿವರು ಎಲ್ಲೇ ಇದ್ದರೂ ನಾನೇ ಹುಡುಕಿಕೊಂಡು ಹೋಗಿ ದೂರು ನೀಡಿ ಬರುತ್ತೇನೆ ಆ ನಂತರವೇ ಅವರು ಕ್ರಮ ಕೈಗೊಳ್ಳಲಿ. ಈ ಸಂಬಂಧ ಮುಖ್ಯಮಂತ್ರಿ ಅವರನ್ನು ಕೂಡ ಭೇಟಿ ಮಾಡಿ ಸುಮಾರು 3 ತಾಸುಗಳ ಕಾಲ ಚರ್ಚಿಸಿದ್ದೇನೆ. ಅವರ ನಿರ್ದೇಶನದ ಮೇರೆಗೆ ದೂರು ನೀಡುತ್ತಿದ್ದೇನೆ ಎಂದರು.

ನಾನು ಈ ಹಿಂದೆ ಹನಿಟ್ರ್ಯಾಪ್ ಸಂಬಂಧ ಹೇಳಿಕೆ ನೀಡಿದ್ದು ಸತ್ಯ. ಆ ವೇಳೆ ದೊಡ್ಡ ದೊಡ್ಡ ರಾಜಕಾರಣಿಗಳನ್ನು, ನಾಯಕರನ್ನು ಹನಿಟ್ರ್ಯಾಪ್‌ನಲ್ಲಿ ಸಿಲುಕಿಸಲು ಪ್ರಯತ್ನಿಸಲಾಗುತ್ತಿದೆ. ಸುಮಾರು 48ಕ್ಕೂ ಹೆಚ್ಚು ಮಂದಿ ವಿರುದ್ಧ ಇಂತಹ ಷಡ್ಯಂತ್ರನಡೆದಿದೆ ಎಂದು ಹೇಳಿದ್ದೆ, ಆ ಸಂದರ್ಭದಲ್ಲಿ ನ್ಯಾಯಾಧೀಶರ ಹೆಸರುಗಳನ್ನು ಪ್ರಸ್ತಾಪ ಮಾಡಿರಲಿಲ್ಲ ಎಂದು ರಾಜಣ್ಣ ಸ್ಪಷ್ಟನೆ ನೀಡಿದರು.ನ್ಯಾಯಾಧೀಶರನ್ನ ಹನಿಟ್ರ್ಯಾಫ್ ಮಾಡಲಾಗಿದೆ ಎಂದು ಹೇಳಿಲ್ಲ . ಹನಿಟ್ರ್ಯಾಪ್ ಬಗ್ಗೆ ಸುಪ್ರೀಂಕೋರ್ಟ್ ಗೆ ಜಾರ್ಖಂಡ್ ಮೂಲದ ವ್ಯಕ್ತಿ ಪಿಐಎಲ್ ಹಾಕಿದ್ದಾರೆ. ಜಡ್ಜ್ ಗಳ ಮೇಲೆ ಹನಿಟ್ರ್ಯಾಪ್ ಆಗಿದೆ ಅನ್ನೋದು ಸುಳ್ಳು ವದಂತಿ ಎಂದು ಸ್ಪಷ್ಟಪಡಿಸಿದರು.

ಹನಿಟ್ರ್ಯಾಪ್ ಯತ್ನ ವಿಚಾರ ಹೈಕಮಾಂಡ್ ಗಮನಕ್ಕೂ ಹೋಗಿದೆ. ಮಾರ್ಚ್ 30ರ ನಂತರ ದೆಹಲಿಗೆ ಹೋಗುತ್ತೇನೆ ಹೈಕಮಾಂಡ್ ನಾಯಕರನ್ನ ಭೇಟಿಯಾಗುತ್ತೇನೆ ಎಂದರು.

## ಇದೊಂದು ಹಗಲುದರೋಡೆ; ಸರಕಾರ ಇದಕ್ಕೆ ಉತ್ತರ ಕೊಡಲಿ

**ಬೆಂಗಳೂರು:** ಬೆಸ್ಕಾಂ ಮತ್ತು ಇತರ ಎಸ್ಕಾಂಗಳ ಸ್ಮಾರ್ಟ್ ಮೀಟರ್ ಟೆಂಡರ್‌ನಲ್ಲಿ ಸುಮಾರು 15,568 ಕೋಟಿ ರೂಪಾಯಿಯ ಬೃಹತ್ ಪ್ರಮಾಣದ ಅವ್ಯವಹಾರ ನಡೆದಿದೆ ಎಂದು ಮಾಜಿ ಉಪಮುಖ್ಯಮಂತ್ರಿ ಹಾಗೂ ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ್ ಅವರು ಆರೋಪಿಸಿದ್ದಾರೆ.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಇಂದು ಮಾತನಾಡಿದ ಅವರು, ಈ ಅವ್ಯವಹಾರದ ಗಾತ್ರ ಇನ್ನೂ ದೊಡ್ಡದೇ ಇದೆ ಎಂದು ದೂರಿದರು. ಎಸ್ಕಾಂಗಳು ಕೆಇಆರ್‌ಸಿ ನಿಯಮಗಳಿಗೆ ಬದ್ಧವಾಗಿರಬೇಕು. ಕೆಇಆರ್ ಸಿ ನಿಯಮಗಳಲ್ಲಿ ಸ್ಮಾರ್ಟ್ ಮೀಟರ್ ಕಡ್ಡಾಯ ಎಂದು ಎಲ್ಲೂ ಹೇಳಿಲ್ಲ ಎಂದು ವಿವರಿಸಿದರು. ತಾತ್ಕಾಲಿಕ ಸಂಪರ್ಕಕ್ಕೆ ಮಾತ್ರ ಸ್ಮಾರ್ಟ್ ಮೀಟರ್ ಕಡ್ಡಾಯ ಮಾಡಬಹುದೇ ಹೊರತು ಖಾಯಂ ಗ್ರಾಹಕರು, ಹೊಸ ಗ್ರಾಹಕರಿಗೆ ಈ ಸ್ಮಾರ್ಟ್ ಮೀಟರನ್ನು ಕಡ್ಡಾಯ ಮಾಡುವಂತಿಲ್ಲ ಎಂದರು. ಪವರ್ ಪಾಯಿಂಟ್ ಪ್ರದರ್ಶನವನ್ನೂ ನೀಡಿದರು. ಸೆಂಟ್ರಲ್ ಇಲೆಕ್ಟ್ರಿಸಿಟಿ ಅಥಾರಿಟಿ ನಿಯಮಾವಳಿ ಪ್ರಕಾರವೂ ಸ್ಮಾರ್ಟ್ ಮೀಟರ್ ಕಡ್ಡಾಯವಲ್ಲ ಎಂದು ತಿಳಿಸಿದರು.




ಕೆಟಿಪಿಪಿ ಕಾಯ್ದೆಯಡಿ ಬಿಡ್ ಕೆಪ್ಯಾಸಿಟಿಯನ್ನು ಟೆಂಡರ್ ನಲ್ಲಿ ತಿಳಿಸಿಲ್ಲ. ಅದು 6,800 ಕೋಟಿ ಇರಬೇಕಿತ್ತು. ಬಿಡ್ಡಿಂಗ್ ಸಾಮರ್ಥ್ಯ ಇಲ್ಲದಿರುವುದೇ ಮೊದಲ ಹಗರಣ ಎಂದು ಆಕ್ಷೇಪಿಸಿದರು.

ಕೆಟಿಪಿಪಿ ಕಾಯ್ದೆ ಪ್ರಕಾರ ವ್ಯವಹಾರವು 1,920 ಕೋಟಿ ಇರಬೇಕಾಗಿತ್ತು. ಟೆಂಡರ್ ನಲ್ಲಿ ಬರೀ 107 ಕೋಟಿ ಪುಟ 2



ಹಾವೇರಿ ಜಿಲ್ಲೆ ಕಂಚಾರಗಟ್ಟಿಯ ನರಸೀಪುರದ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಗುರುಪೀಠದ ಶ್ರೀ ಶಾಂತಭೀಷ್ಮ ಚೌಡಯ್ಯ ಸ್ವಾಮೀಜಿ ಹಾಗೂ ಮಾಜಿ ಸಚಿವ ಪ್ರಮೋದ್ ಮಧ್ವರಾಜ್ ಅವರು ಡಿಸಿಎಂ ಡಿ ಕೆ ಶಿವಕುಮಾರ್ ಅವರನ್ನು ಸದಾಶಿವನಗರ ನಿವಾಸದಲ್ಲಿ ಮಂಗಳವಾರ ಭೇಟಿಯಾಗಿ ಸಮಾಲೋಚನೆ ನಡೆಸಿದರು.

## ಆಡಳಿತ- ವಿಪಕ್ಷದವರ ಫೋನ್ ಕೂಡ ಟ್ಯಾಪಿಂಗ್

ಬೆಂಗಳೂರು: ವಿಪಕ್ಷನಾಯಕರ ಫೋನ್ ಅಷ್ಟೆ ಅಲ್ಲ, ಆಡಳಿತ ಪಕ್ಷದವರ ಫೋನ್ ಕೂಡ ಟ್ಯಾಪಿಂಗ್ ಆಗುತ್ತಿದೆ ಎಂದು ಮಾಜಿ ಸಚಿವ ಶ್ರೀರಾಮುಲು ಆರೋಪಿಸಿದರು. ಮಾಧ್ಯಮಗಳ ಜೊತೆ ಮಾತನಾಡಿದ



ಶ್ರೀರಾಮುಲು, ಕೇವಲ ವಿಪಕ್ಷ ನಾಯಕರ ಫೋನ್ ಅಷ್ಟೆ ಕದ್ದಾಲಿಕೆ ಮಾಡುತ್ತಿಲ್ಲ. ಆಡಳಿತ ಪಕ್ಷದವರ ಫೋನ್ ಕೂಡ ಕದ್ದಾಲಿಕೆ ಆಗುತ್ತಿದೆ. ಕುರ್ಚಿ ಉಳಿಸಿಕೊಳ್ಳಲು ಫೋನ್ ಟ್ಯಾಪಿಂಗ್ ನಡೆಯುತ್ತಿದೆ ಎಂದು ಕಿಡಿಕಾರಿದರು.

ಸಿಟಿ ಫ್ಯಾಕ್ಟರಿ ಕುರಿತು ಸಮಗ್ರ ತನಿಖೆಯಾಗಕು. ಹನಿಟ್ರ್ಯಾಪ್ ಕೇಸ್ ಸಿಬಿಐ ತನಿಖೆ ಆಗಬೇಕು. ಹನಿಟ್ರ್ಯಾಪ್ ಮಾಡಿದ ಆರೋಪಿಗಳನ್ನ ಪತ್ತೆ ಹಚ್ಚಲಿ ಎಂದು ಶ್ರೀರಾಮುಲು ಆಗ್ರಹಿಸಿದರು.

## ಲಕ್ಷ ಕೋಟಿ ಬಜೆಟ್ ಮಂಡಿಸಿದ ದೆಹಲಿ ಸಿಎಂ

**ನವದೆಹಲಿ:** ಸುದೀರ್ಘಅವಧಿಯ ನಂತರ ದೆಹಲಿ ಗದ್ದುಗೆ ಹಿಡಿದಿರುವ ಭಾರತೀಯ ಜನತಾಪಕ್ಷ ಒಂದು ಲಕ್ಷ ಕೋಟಿ ಮೊತ್ತದ ತನ್ನ ಚೊಚ್ಚಲ ಬಜೆಟ್ ಮಂಡಿಸಿದೆ.

ದೆಹಲಿ ಮಟ್ಟಕ್ಕೆ ಇದೊಂದು ದೊಡ್ಡ ಮೊತ್ತದ ಐತಿಹಾಸಿಕ ಬಜೆಟ್ ಆಗಿದ್ದು, ಮಂಗಳವಾರ 2025–26ನೇ ಸಾಲಿನ ಬಜೆಟ್ ಅನ್ನು ಮುಖ್ಯಮಂತ್ರಿ ಹಾಗೂ ಹಣಕಾಸು ಸಚಿವರಾಗಿರುವ ರೇಖಾ ಗುಪ್ತಾ ಮಂಡಿಸಿದರು.

ವಿಧಾನಸಭೆಯಲ್ಲಿ ಬಜೆಟ್ ಮಂಡನೆ ವೇಳೆ ಮಾತನಾಡಿದ ಅವರು, "ಇದೊಂದು ಐತಿಹಾಸಿಕ ದಿನ. ದೆಹಲಿಯ ಜನರು ಮತ್ತು ದೇಶ ನಮ್ಮ ಸರ್ಕಾರ ಹೇಗೆ ಕೆಲಸ ಮಾಡುತ್ತದೆ ಎಂದು ನೋಡಲು ಕಾಯುತ್ತಿದ್ದಾರೆ. ಈ ಬಜೆಟ್ ಕೇವಲ ಸರ್ಕಾರದ ಖರ್ಚು ವೆಚ್ಚವನ್ನು ಪ್ರದರ್ಶಿಸುವುದಿಲ್ಲ. ಇದು ವಿಕಸಿತ ದೆಹಲಿಗೆ ಮಾರ್ಗ. ನಗರದ ಭವಿಷ್ಯಕ್ಕೆ ತಿರುವು ನೀಡಲಿದೆ" ಎಂದು ಹೇಳಿದರು.

ಹಿಂದಿನ ಎಎಪಿ ಸರ್ಕಾರದ ವಿರುದ್ಧ ವಾಗ್ದಾಳಿ



ನಡೆಸಿದ ಅವರು, "ಕಳೆದ 10 ವರ್ಷದಿಂದ ದೆಹಲಿಯ ಜನರು ಅಭಿವೃದ್ಧಿಯಿಂದ ವಂಚಿತರಾಗಿರುವುದು ದುರದೃಷ್ಟಕರ" ಎಂದರು.

ಬಜೆಟ್‌ನಲ್ಲಿ ರಸ್ತೆ, ನೀರು, ವಿದ್ಯುತ್ ಸಂಪರ್ಕ ಸೇರಿದಂತೆ 10 ಪ್ರಮುಖ ಕ್ಷೇತ್ರಗಳನ್ನು ಗುರಿಯಾಗಿಸಲಾಗಿದ್ದು, ದೆಹಲಿ–ಎನ್‌ಸಿಆರ್ ಒಳಗೆ ಸಾರಿಗೆ ಸುಧಾರಣೆಗೆ 1,000 ಕೋಟಿ ಹಂಚಿಕೆ ಮಾಡಲಾಗಿದೆ ಎಂದು ಹೇಳಿದರು.

ಯಮುನಾ ನದಿ ಸ್ವಚ್ಛತಾ ಕಾರ್ಯಕ್ರಮಕ್ಕೆ 500 ಕೋಟಿ, ಅರ್ಹ ಮಹಿಳೆಯರಿಗೆ ಮಾಸಿಕ ಪುಟ 2

## ಮೂವರು ನಕ್ಸಲರ ಎನ್‌ಕೌಂಟರ್

**ದಂತೇವಾಡ:** ಛತ್ತೀಸ್ ಗಢದ ದಂತೇವಾಡ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ನಡೆಸಿದ ಎನ್ ಕೌಂಟರ್ ನಲ್ಲಿ ಮೂವರು ನಕ್ಸ ಲರು ಹತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ದಾಂತೇವಾಡ ಮತ್ತು ಬಿಜಾಪುರ ಜಿಲ್ಲೆಗಳ ಗಡಿಯಲ್ಲಿರುವ ಅರಣ್ಯದಲ್ಲಿ ಬೆಳಿಗ್ಗೆ 8 ಗಂಟೆ ಸುಮಾರಿಗೆ ಭದ್ರತಾ ಸಿಬ್ಬಂದಿಯ ತಂಡವು ನಕ್ಸ ಲೀಯ ವಿರೋಧಿ ಕಾರ್ಯಾಚರಣೆಯಲ್ಲಿ ತೊಡಗಿದ್ದಾಗ ಗುಂಡಿನ ಚಕಮಕಿ ಪುಟ 2

## ಸಂಸದರ ವೇತನ, ಭತ್ಯೆ ಹಾಗೂ ಪಿಂಚಣಿ ಏರಿಕೆ

**ನವದೆಹಲಿ:** ಲೋಕಸಭೆ ಮತ್ತು ರಾಜ್ಯಸಭಾ ಸಂಸದರ ವೇತನವನ್ನು ಕೇಂದ್ರ ಸರ್ಕಾರ ಹೆಚ್ಚಿಸಿದೆ. ಸಂಸದರ ವೇತನದ ಹೊರತಾಗಿ, ಮಾಜಿ ಸಂಸತ್ ಸದಸ್ಯರ ಭತ್ಯೆಗಳು ಮತ್ತು ಪಿಂಚಣಿಯನ್ನು ಸಹ ಹೆಚ್ಚಿಸಲಾಗಿದೆ. ಈ ಹೆಚ್ಚಳವು ಏಪ್ರಿಲ್ 1, 2023 ರಿಂದ ಜಾರಿಗೆ ಬರಲಿದೆ. ಸಂಸದೀಯ ವ್ಯವಹಾರಗಳ ಸಚಿವಾಲಯ ಸೋಮವಾರ ಗೆಜೆಟ್ ಅಧಿಸೂಚನೆಯನ್ನು ಹೊರಡಿಸಿದೆ. ಅಧಿಸೂಚನೆಯ ಪ್ರಕಾರ, ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರ ಪುಟ 2

## ಲಾರಿ ಬ್ರೇಕ್ ಫೇಲ್; ತಪ್ಪಿದ ಬಾರಿ ಅನಾಹುತ

**ಕಾರವಾರ:** ಗ್ಯಾಸ್ ಸಿಲಿಂಡರ್ ತುಂಬಿದ್ದ ಲಾರಿ ಬ್ರೇಕ್ ಫೇಲ್ ಆಗಿ ಮರಕ್ಕೆ ಡಿಕ್ಕಿಯಾದ ಘಟನೆ ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ–ಹಳಿಯಾಳ ರಸ್ತೆಯ ಆಲೂರು ಬಳಿ ಸಂಭವಿಸಿದೆ. ನಿಪ್ಪಾಣಿಯಿಂದ ದಾಂಡೇಲಿಗೆ ತೆರಳುತ್ತಿದ್ದ, ಗ್ಯಾಸ್ ಸಿಲಿಂಡರ್ ತುಂಬಿದ್ದ ಲಾರಿ ಬ್ರೇಕ್ ಫೇಲ್ ಪುಟ 2

## ಕ್ಷಮೆ ಯಾಚಿಸಲ್ಲ; ಸಮನ್ಸ್ ಜಾರಿ

**ಮುಂಬೈ(ಮಹಾರಾಷ್ಟ್ರ):** ಸ್ಟಾಂಡ್ ಅಪ್ ಕಾಮಿಡಿ ಕಾರ್ಯಕ್ರಮದಲ್ಲಿ ಮಹಾರಾಷ್ಟ್ರ ಡಿಸಿಎಂ ಏಕನಾಥ್ ಶಿಂಧೆ



ಅವರ ಕುರಿತು ಮಾಡಿರುವ ಟೀಕೆಗೆ, ಕ್ಷಮೆ ಯಾಚಿಸುವುದಿಲ್ಲ ಎಂದು ಕಮೇಡಿಯನ್ ಕುನಾಲ್ ಕಮ್ರಾ ಮತ್ತೊಮ್ಮೆ ಸ್ಪಷ್ಟಪಡಿಸಿದ್ದಾರೆ.

ತಮ್ಮ ಹೇಳಿಕೆ ಕುರಿತು ಉದ್ಭವಿಸಿದ ವಿವಾದ, ಕಾರ್ಯಕ್ರಮದ ಚಿತ್ರೀಕರಣ ನಡೆದ ಹೊಟೇಲ್ ಮೇಲಿನ ದಾಳಿ ಹಾಗು ಎಚ್ಚರಿಕೆಗೆ ನಾನು ಹೆದರುವುದಿಲ್ಲ. ನಾನು ಬಚ್ಚಿ ಕುಳಿತುಕೊಳ್ಳುವುದಿಲ್ಲ, ಸಾಯಲೂ ಸಿದ್ಧನಿದ್ದೇನೆ ಎಂದು ಹೇಳಿದ್ದಾರೆ.


ಈ ನಡುವೆ, ಮುಂಬೈ ಪೊಲೀಸರು ಕಮ್ರಾಗೆ ಸಮನ್ಸ್ ಜಾರಿ ಮಾಡಿದ್ದು, ಹೇಳಿಕೆ ದಾಖಲಿಸಲು ಹಾಜರಾಗುವಂತೆ ಸೂಚಿಸಿದ್ದಾರೆ. ಪುಟ 2

## ಶಿಕ್ಷಣ ವ್ಯವಸ್ಥೆ ಆರ್‌ಎಸ್‌ಎಸ್‌ಗೆ ಸಿಕ್ಕರೆ ದೇಶ ಸರ್ವನಾಶ

**ನವದೆಹಲಿ:** "ಶಿಕ್ಷಣ ವ್ಯವಸ್ಥೆಯನ್ನು ಆರ್‌ಎಸ್ ಎಸ್ ತನ್ನ ನಿಯಂತ್ರಣಕ್ಕೆ ಪಡೆದರೆ ದೇಶ ಸರ್ವ ನಾಶವಾಗುತ್ತದೆ" ಎಂದು ಲೋಕಸಭೆ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ ಟೀಕಿಸಿದ್ದಾರೆ.

ರಾಷ್ಟ್ರೀಯ ಶಿಕ್ಷಣ ನೀತಿ(ಎನ್‌ಇಪಿ) ವಿರೋಧಿಸಿ 'ಇಂಡಿ' ಕೂಟದ ಭಾಗವಾಗಿರುವ ವಿದ್ಯಾರ್ಥಿ ಸಂಘಟನೆ ದೆಹಲಿಯ ಜಂತರ್ ಮಂತರ್‌ನಲ್ಲಿ ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

"ಇಂಡಿಯಾ ಮೈತ್ರಿಕೂಟದ ಸದಸ್ಯರಲ್ಲಿ ಸಿದ್ಧಾಂತಗಳು ಮತ್ತು ನೀತಿಗಳಲ್ಲಿ ಸ್ವಲ್ಪ ಮಟ್ಟದ ವ್ಯತ್ಯಾಸಗಳು ಇರಬಹುದು. ಆದರೆ, ಯಾವುದೇ ಕಾರಣಕ್ಕೂ ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ರಾಜಿ ಮಾಡಿಕೊಳ್ಳುವುದಿಲ್ಲ" ಎಂದು ಸ್ಪಷ್ಟಪಡಿಸಿದರು.



"ಒಂದು ಸಂಘಟನೆ ದೇಶದ ಭವಿಷ್ಯ ಮತ್ತು ಶಿಕ್ಷಣ ವ್ಯವಸ್ಥೆಯನ್ನು ನಾಶಪಡಿಸಲು ಬಯಸುತ್ತಿದೆ. ಆ ಸಂಘಟನೆಯ ಹೆಸರು ರಾಷ್ಟ್ರೀಯ ಸ್ವಯಂ ಸೇವಕ ಸಂಘ. ಒಂದು ವೇಳೆ ಶಿಕ್ಷಣ ವ್ಯವಸ್ಥೆ ಇವರ ಕೈಗೆ ಸಿಕ್ಕರೆ, ಈ ದೇಶ ಸರ್ವನಾಶವಾಗುತ್ತದೆ. ಇದು ಈಗಾಗಲೇ ನಿಧಾನವಾಗಿ ನಡೆಯುತ್ತಿದೆ. ಮುಂದೆ ದೇಶದಲ್ಲಿ ಯಾರಿಗೂ ಉದ್ಯೋಗವೇ ಸಿಗುವುದಿಲ್ಲ, ಅಲ್ಲಿಗೆ ದೇಶದ ಕಥೆ ಮುಗಿದಂತೆ" ಎಂದು ಗಾಂಧಿ ವಾಗ್ದಾಳಿ ನಡೆಸಿದರು.

"ಭಾರತದ ವಿಶ್ವವಿದ್ಯಾಲಯಗಳ ಕುಲಪತಿಗಳು ಆರ್‌ಎಸ್ ಎಸ್‌ನ ಹಿಡಿತದಲ್ಲಿದ್ದಾರೆ ಎಂಬುದನ್ನು ವಿದ್ಯಾರ್ಥಿ ಸಂಘಟ ನೆಗಳು ವಿದ್ಯಾರ್ಥಿಗಳಿಗೆ ತಿಳಿಸಲೇಬೇಕು. ಪುಟ 2

## ‘ಆತ ಸುಪಾರಿ ಪಡೆದು ಮಾತನಾಡಿದಂತಿದೆ’

**ಮುಂಬೈ(ಮಹಾರಾಷ್ಟ್ರ):** "ಆತ ಸುಪಾರಿ (ಒಪ್ಪಂದ) ಪಡೆದು ಮಾತನಾಡಿದಂತಿದೆ. ಟೀಕೆಗಳನ್ನು ಮಾಡುವಾಗ ಸಭ್ಯತೆ ಕಾಯ್ದುಕೊಳ್ಳಬೇಕು. ಇಲ್ಲದೇ ಹೋದಲ್ಲಿ ಅದು ಕ್ರಿಯೆಗೆ ತಕ್ಕ ಪ್ರತಿಕ್ರಿಯೆಗೆ ಕಾರಣವಾಗಬಹುದು" ಎಂದು



ಮಹಾರಾಷ್ಟ್ರ ಡಿಸಿಎಂ ಏಕನಾಥ ಶಿಂಧೆ ಎಚ್ಚರಿಸಿದ್ದಾರೆ. ಸ್ಟಾಂಡ್‌ಅಪ್ ಕಾಮಿಡಿ ಕಾರ್ಯಕ್ರಮದಲ್ಲಿ ತಮ್ಮನ್ನು ಟೀಕಿಸಿದ್ದ ಕಮೇಡಿಯನ್ ಕುನಾಲ್ ಕಾಮ್ರಾ ವಿರುದ್ಧ ಇದೇ ಮೊದಲ ಬಾರಿ ಮಾತನಾಡಿರುವ ಅವರು, "ಈ ರೀತಿಯ ಆರೋಪಗಳಿಗೆ ನಾನು ಪ್ರತಿಕ್ರಿಯಿಸುವುದಿಲ್ಲ. ಇದಕ್ಕೆ ತಮ್ಮ ಕೆಲಸದ ಮೂಲಕವೇ ಸೂಕ್ತ ಉತ್ತರ ನೀಡುತ್ತೇನೆ. ಅಭಿವ್ಯಕ್ತಿ ಸ್ವಾತಂತ್ರ್ಯವಿದೆ ಎಂದ ಮಾತ್ರಕ್ಕೆ ಹೇಗೆ ಬೇಕೋ ಹಾಗೆ ಮಾತನಾಡುವುದಲ್ಲ. ಅದಕ್ಕೆ ಮಿತಿಯೂ ಇದೆ" ಎಂದು ತಿರುಗೇಟು ಕೊಟ್ಟರು. ಪುಟ 2

## ಸ್ಮಾರ್ಟ್ ಮೀಟರ್: ಟೆಂಡರ್‌ನಲ್ಲಿ ಭಾರೀ ಭ್ರಷ್ಟಾಚಾರ

ಬೆಂಗಳೂರು; ಕಳೆದ ಎರಡು ವರ್ಷಗಳಲ್ಲಿ ಕಾಂಗ್ರೆಸ್ ಸರ್ಕಾರ ಅತ್ಯಂತ ದುರಾಡಳಿತ ನಡೆಸುತ್ತಿದ್ದು, ರಾಜ್ಯದ ಜನತೆ ಸಂಪೂರ್ಣ ಬೇಸತ್ತಿದ್ದಾರೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರ ಸ್ವಾಮಿ ಹೇಳಿದರು.

ಪಕ್ಷದ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ಯುತ್ ಇಲಾಖೆಯಲ್ಲಿ ಸ್ಮಾರ್ಟ್ ಮೀಟರ್ ಸ್ಥಾಪನೆಯಲ್ಲಿ ಬಾರೀ ಪ್ರಮಾಣದ ಭ್ರಷ್ಟಾಚಾರ ನಡೆದಿದೆ,ಸಿಂಗಲ್ ಫೇಸ್ ಸ್ಮಾರ್ಟ್ ಮೀಟರ್ ಅಳವಡಿಕೆಗೆ ಮಾರುಕಟ್ಟೆ ದರ 900ರೂಪಾಯಿ ಇದ್ದು ಆದರೆ ನಮ್ಮ ರಾಜ್ಯದಲ್ಲಿ ಒಂಬತ್ತು ಸಾವಿರ ರೂಪಾಯಿ ದರ ತೆಗೆದುಕೊಳ್ಳಲಾಗುತ್ತದೆ,

ಎಲ್ಲ ರಾಜ್ಯಗಳಲ್ಲಿ ಮೀಟರ್ ಅಳವಡಿಕೆ ಒಂದೇ ದರವಿದೆ,ಪ್ರತಿ ತಿಂಗಳಿಗೆ ಸೇವೆಯ ದರವಾಗಿ 53ರೂಪಾಯಿ ತೆಗೆದುಕೊಳ್ಳಲಾಗುತ್ತದೆ ಆದರೆ ನಮ್ಮ ರಾಜ್ಯದಲ್ಲಿ 71ರೂಪಾಯಿ ಸೇವೆಯ ದರವಾಗಿ ತೆಗೆದುಕೊಳ್ಳಲಾಗುತ್ತದೆ.



ಛತೀಸ್ ಘಡದಲ್ಲಿ ಉಚಿತವಾಗಿ ಮೀಟರ್ ಅಳವಡಿಸಲಾಗುತ್ತದೆ, ಮೀಟರ್ ಅಳವಡಿಕೆಯಲ್ಲಿ ಅನುಭವವಿಲ್ಲದ ಕಂಪನಿಗೆ ಟೆಂಡರ್ ನೀಡಲಾಗುತ್ತದೆ. ಟೆಂಡರ್ ಕರೆಯುವ ಮುನ್ನ ಸಾರ್ವಜನಿಕವಾಗಿ ಬಿಡ್ ಕರೆಯದೇ ಸ್ವೇಚ್ಛಚಾರವಾಗಿ ನಡೆದುಕೊಂಡು 18500ಕೋಟಿ ರೂಪಾಯಿ ನಷ್ಟ ಉಂಟು ಮಾಡಿದ್ದಾರೆ ಎಂದು ಆರೋಪಿಸಿದರು.

ಸ್ಮಾರ್ಟ್ ಮೀಟರ್ ಅಳವಡಿಕೆ ಕುರಿತು ಪುನ; ಟೆಂಡರ್ ಕರೆದು ಪಾರದರ್ಶಕವಾಗಿ ಸ್ಮಾರ್ಟ್ ಮೀಟರ್ ಅಳವಡಿಸಬೇಕು.

ನಿಯಮಗಳನ್ನು ಗಾಳಿಗೆ ತೂರಿ ಈ ರೀತಿ ನಡೆದುಕೊಂಡಿರುವುದು ಸರಿಯಲ್ಲ ,ಬಿಜೆಪಿ ರಾಜ್ಯಾಧ್ಯಕ್ಷರ ಗಮನಕ್ಕೆ ತಂದು ಬಾರೀ ಪ್ರಮಾಣದಲ್ಲಿ ಹೋರಾಟ ನಡೆಸಲಾಗುವುದು ಎಂದರು.

## ಮೇಕೆದಾಟು: ಕರ್ನಾಟಕದ ವಿರುದ್ಧ ಕಾನೂನು ಹೋರಾಟದ ಎಚ್ಚರಿಕೆ ನೀಡಿದ ತಮಿಳುನಾಡು

**ಚೆನ್ನೈ:** ಮೇಕೆದಾಟು ಅಣೆಕಟ್ಟು ಯೋಜನೆಗೆ ಕರ್ನಾಟಕ ಸರ್ಕಾರ ಅನುಮತಿ ಕೋರಿದ ಬೆನ್ನಲ್ಲೇ, ಕಾವೇರಿ ನದಿಗೆ ಜಲಾಶಯ ನಿರ್ಮಿಸುವ ಯೋಜನೆಗೆ ಯಾವ ಕಾರಣಕ್ಕೂ ಅವಕಾಶ ನೀಡುವುದಿಲ್ಲ ಎಂದು ತಮಿಳುನಾಡು ಸರ್ಕಾರ ಹೇಳಿದೆ. ಮೇಕೆದಾಟು ಯೋಜನೆಯನ್ನು ತಡೆಯುವುದಕ್ಕಾಗಿ ಕಾನೂನು ಕ್ರಮ ಸೇರಿದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ಸರ್ಕಾರ ಕೈಗೊಳ್ಳುತ್ತಿದೆ



ಎಂದು ತಮಿಳುನಾಡು ಜಲಸಂಪನ್ಮೂಲ ಸಚಿವ ದೊರೈ ಮುರುಗನ್ ಹೇಳಿದ್ದಾರೆ. 2025–2026ರ ನೀತಿ ಟಿಪ್ಪಣಿಯನ್ನು ತಮಿಳುನಾಡು ವಿಧಾನಸಭೆಯಲ್ಲಿ ಮಂಡಿಸಿದ ಮುರುಗನ್, ಮೇಕೆದಾಟು ಯೋಜನೆ ಸಂಬಂಧ ಕರ್ನಾಟಕವು ಇನ್ನೂ ಅಂತಿಮ ಡಿಪಿಆರ್ ಸಲ್ಲಿಸಿಲ್ಲ ಪುಟ 2

# ಅರ್ಜಿ ಕರೆಯದೆ ರಾಜ್ಯೋತ್ಸವ ಪ್ರಶಸ್ತಿ ನೀಡಲು ಚಿಂತನೆ: ಸಚಿವ ತಂಗಡಗಿ

**ಬೆಂಗಳೂರು:** ಕನ್ನಡ ರಾಜ್ಯೋತ್ಸವ ಪ್ರಶಸ್ತಿಯನ್ನು ಇನ್ಮುಂದೆ ಅರ್ಜಿಯನ್ನು ಸ್ವೀಕರಿಸದೆ, ಸಾಧನೆಯನ್ನು ಗುರುತಿಸಿ ಅರ್ಹರಿಗೆ ಪ್ರಶಸ್ತಿ ನೀಡುವ ಅಗತ್ಯವಿದೆ ಎಂದು ಕನ್ನಡ ಮತ್ತು ಸಂಸ್ಕೃತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವ ಶಿವರಾಜ್ ಎಸ್.ತಂಗಡಗಿ ಅವರು ಅಭಿಪ್ರಾಯಪಟ್ಟರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ರವೀಂದ್ರ ಕಲಾಕ್ಷೇತ್ರದಲ್ಲಿ ಸೋಮವಾರ ಆಯೋಜಿಸಿದ್ದ ಸಾಹಿತ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಶಸ್ತಿ ವಿತರಣೆ ಮಾಡಿ ಅವರು ಮಾತನಾಡಿದರು.

ಪ್ರಶಸ್ತಿಗಳು ಕೇಳಿ ಪಡೆಯುವಂತೆ ಆಗಬಾರದು. ಅರ್ಹರನ್ನು ಗುರುತಿಸಿ, ಅವರ ಮನೆ ಬಾಗಿಲಿಗೆ ಪ್ರಶಸ್ತಿ ನೀಡಿ ಗೌರವಿಸುವಂತೆ ಆಗಬೇಕು. ಇದರಿಂದ ಪ್ರಶಸ್ತಿಯ ಮೌಲ್ಯ ಹೆಚ್ಚಾಗಲಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರೊಂದಿಗೂ ಚರ್ಚೆ ನಡೆಸುತ್ತೇನೆ ಎಂದು ತಿಳಿಸಿದರು.

ರಾಜ್ಯೋತ್ಸವ ಪ್ರಶಸ್ತಿಗಾಗಿ ಅರ್ಜಿ ಆಹ್ವಾನಿಸಲಾಗುತ್ತಿತ್ತು. ನಾನು ಜಿಲ್ಲಾ ಪ್ರವಾಸಕ್ಕೆ ಹೋದರೆ ಅರ್ಜಿ ಹಾಗೂ ದಾಖಲೆಗಳನ್ನು ಇಟ್ಟುಕೊಳ್ಳಲು ಜೊತೆಯಲ್ಲಿ ಹೆಚ್ಚುವರಿ ಕಾರನ್ನು ತೆಗೆದುಕೊಂಡು ಹೋಗುವ ಪರಿಸ್ಥಿತಿ ಇದೆ. ಕಳೆದ ಬಾರಿ ಅರ್ಜಿ ಹಾಕದ ಅಂದಾಜು 25ಕ್ಕೂ ಹೆಚ್ಚು ಮಂದಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಉದಾಹರಣೆಗೆ ಕೊಪ್ಪಳ ಜಿಲ್ಲೆಯ ವೃದ್ಧೆ ಹುಚ್ಚವ್ವ ಎಂಬುವರು ತಮ್ಮ ಕೋಟ್ಯಂತರ ಬೆಲೆಬಾಳುವ ಎರಡು ಎಕರೆ ಜಾಗವನ್ನು ಶಾಲೆಗೆಂದು ನೀಡಿ ಔದಾರ್ಯತೆ ಮೆರೆದಿದ್ದರು. ಇಂತಹವರನ್ನು ಗುರುತಿಸಿ ಪ್ರಶಸ್ತಿ ನೀಡಿದ ತೃಪ್ತಿ ಇದೆ ಎಂದರು.




ಸಾರ್ವಜನಿಕವಾಗಿ ಚರ್ಚೆ ನಡೆಯಲಿ:

ಅರ್ಜಿ ಸ್ವೀಕರಿಸದೆ ಪ್ರಶಸ್ತಿ ನೀಡುವ ವಿಚಾರಕ್ಕೆ ಸಂಬಂಧಿಸಿದಂತೆ ನಾಡಿನ ಸಾಹಿತಿಗಳು ಸಮ್ಮತಿಸಿದ್ದು, ಈ ಬಗ್ಗೆ ಇನ್ನಷ್ಟು ಉತ್ತಮ ಸಲಹೆಗಳು ಬರಲಿ. ಈ ವಿಚಾರ ಸಾರ್ವಜನಿಕವಾಗಿ ಚರ್ಚೆಯಾಗಲಿ. ಇನ್ನು ಪ್ರಶಸ್ತಿ ನೀಡಿಕೆ ವಿಷಯದಲ್ಲಿ ನಮ್ಮ ಸರ್ಕಾರ ಸಮಾಜಿಕ ನ್ಯಾಯವನ್ನು ಪರಿಪಾಲನೆ ಮಾಡುತ್ತಿದೆ. ಅದನ್ನೇ ಮುಂದೆಯೂ ಕೂಡ ಮುಂದುರೆಸಲಾಗುವುದು ಎಂದು ಹೇಳಿದರು.

ಇನ್ನು ಈ ಹಿಂದೆ ಅಧಿಕಾರದಲ್ಲಿದ್ದ ಸರ್ಕಾರ ಮೂರು ವರ್ಷ ಯಾವುದೇ ಪ್ರಶಸ್ತಿ ನೀಡದೆ, ಕೈ ಬಿಟ್ಟಿತ್ತು. ನಾವು ಅಧಿಕಾರಕ್ಕೆ ಬಂದ ಕೂಡಲೇ 25 ವಿಭಾಗದಲ್ಲಿ 75 ಸಾಧಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗಿದೆ. ಅಲ್ಲದೆ, ವಿವಿಧ ಅಕಾಡೆಮಿ ಮತ್ತು ಪ್ರಾಧಿಕಾರಗಳಿಗೆ ಅಧ್ಯಕ್ಷರು ಹಾಗೂ ನಿರ್ದೇಶಕರನ್ನು ನೇಮಕ ಮಾಡುವ ಮೂಲಕ ಅಕಾಡೆಮಿಗಳಿಗೆ ಶಕ್ತಿ ತುಂಬುವ ಕೆಲಸ ಆಗಿದೆ.

ಪರಿಣಾಮ ಬೆಂಗಳೂರಿಗೆ ಮಾತ್ರ ಸಿಮೀತವಾಗಿದ್ದ ಅಕಾಡೆಮಿ ಮತ್ತು ಪ್ರಾಧಿಕಾರಗಳ ಕಾರ್ಯಕ್ರಮಗಳು ರಾಜ್ಯಾದ್ಯಂತ ನಡೆಯುತ್ತಿವೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿ ಡಾ.ಹಂಪ ನಾಗರಾಜಯ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಇಲಾಖೆ ನಿರ್ದೇಶರಾದ ಗಾಯತ್ರಿ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

# ಯೋಗ ಕೇವಲ ಆಸನವಲ್ಲ, ಮಾನಸಿಕ ಸ್ಥಿಮಿತ ಕೂಡ ಯೋಗ

**ಬೆಂಗಳೂರು:** ಯೋಗ ಎಂದರೆ ಕೇವಲ ಆಸನವಲ್ಲ. ದಿನದ 24 ಗಂಟೆ, ವರ್ಷದ 365 ದಿನಗಳ ಕಾಲ ಮನಸನ್ನು ಸಂಯಮದಲ್ಲಿಟ್ಟುಕೊಳ್ಳುವುದು ಕೂಡ ಯೋಗ ಎಂದು ಬಿಹಾರ ಸ್ಕೂಲ್ ಆಫ್ ಯೋಗ ವಿಶ್ವ ಪೀಠದ ನಿರಂಜನಾನಂದ ಸರಸ್ವತಿ ಸ್ವಾಮೀಜಿ ಹೇಳಿದ್ದಾರೆ.

ವೇದಾಂತ ಭಾರತಿ ಮತ್ತು ರಾಮಕೃಷ್ಣ ಮಠದಿಂದ ಬೆಂಗಳೂರಿನ ಬಸವನಗುಡಿಯ ರಾಮಕೃಷ್ಣ ಮಠದ ಸ್ವಾಮಿ ವಿವೇಕಾನಂದ ಶತಮಾನೋತ್ಸವ ಸಭಾಂಗಣದಲ್ಲಿ "ಭಾರತೀಯ ಸಂಸ್ಕೃತಿ ಬಗ್ಗೆ ಆದಿ ಶಂಕರಾಚಾರ್ಯರ ಬೋಧನೆಗಳ ಪರಿಣಾಮ" ಕುರಿತು ಭಕ್ತ ವೃಂದಕ್ಕೆ ಉಪನ್ಯಾಸ ನೀಡಿದ ಅವರು, ಸಂತರು, ಯೋಗಿಗಳು ದೈನಂದಿನ ಬದುಕಿನಲ್ಲಿ ಯೋಗದ ಮಹತ್ವ ಮತ್ತು ಯೋಗ ತತ್ವಗಳನ್ನು ಬೋಧಿಸಿದ್ದಾರೆ. ಇದರಿಂದ ಪ್ರೇರಣೆ ಪಡೆದ 60 ವರ್ಷಗಳಿಂದ ಯೋಗ ಕಲಿಯುವ, ಕಲಿಸುವ ಕಾಯಕದಲ್ಲಿ ನಿರತವಾಗಿದ್ದೇನೆ. ಸನಾತನ ಧರ್ಮ ಸಂರಕ್ಷಣೆಯಲ್ಲಿ ಆದಿ ಶಂಕರಾಚಾರ್ಯರ ಕೊಡುಗೆ ಅನನ್ಯ, ಧರ್ಮ ಸಂರಕ್ಷಣೆಯಲ್ಲಿ ಮಹತ್ವದ ಪಾತ್ರ ವಹಿಸಿರುವ ಅವರು ಸದಾ ಸ್ಮರಣೀಯರು ಎಂದು ಹೇಳಿದರು.

ಮೈಸೂರಿನ ಕೆ.ಆರ್. ನಗರದ ಯೆಡತೊರೆ ಮಠದ ಯೋಗಾನಂದೇಶ್ವರ ಸರಸ್ವತಿ ಮಠದ ಡಾ. ಶಂಕರ ಭಾರತಿ ಮಹಾ ಸ್ವಾಮೀಜಿ ಮಾತನಾಡಿ, ಶಂಕರಭಗವತ್ಪಾದರು ಪತಂಗದ ಯೋಗ ಶಾಸ್ತ್ರವನ್ನೂ ಸಹ ಬೋಧಿಸಿದ್ದು, ಇದು ಆಧುನಿಕ ಬದುಕಿಗೂ ಪೂರಕವಾಗಿದೆ. ಧರ್ಮದ ಪುನರುತ್ಥಾನಕ್ಕೆ ಯೋಗ ಅತ್ಯಂತ ಅಗತ್ಯವಾಗಿದೆ. ಭಾರತೀಯ ಸಂಸ್ಕೃತಿಯ ಮೇಲೆ ಇದು ಗಾಢವಾದ ಪ್ರಭಾವ ಬೀರಿದೆ. ಯೋಗ ಶಾಸ್ತ್ರದಿಂದ ಜೀವನದ ಶಾರೀರಿಕ ಆರೋಗ್ಯವಷ್ಟೇ ಅಲ್ಲದೇ ತನ್ಮೂಲಕ ಭಗವಂತನ್ನು ಏಕಾಗ್ರ ಚಿತ್ತದಿಂದ ಧ್ಯಾನಿಸಲು ಮತ್ತು ಏಕಾತ್ಮ ಭಾವನೆಯನ್ನು ಹೊಂದಲು ಇದು ಪ್ರಮುಖ ಸಾಧನವಾಗಿದೆ. ಆಧ್ಯಾತ್ಮಿಕ ಚಿಂತನೆ ಜೊತೆಗೆ ಇಂದ್ರಿಯುಗಳ ನಿಗ್ರಹ ಮಾಡಿಕೊಳ್ಳಲು ಪೂರಕವಾಗಿದೆ ಎಂದು ಹೇಳಿದರು.



ಬೆಂಗಳೂರಿನ ರಾಮಕೃಷ್ಣ ಮಠದ ವಿರೇಶಾನಂದಾಜಿ ಮಹಾರಾಜ್ ಮಾತನಾಡಿ, ಆದಿ ಶಂಕರಾಚಾರ್ಯರ ಬೋಧನೆಗಳಲ್ಲಿ ಧರ್ಮ ಸೂಕ್ಷ್ಮತೆಯ ಒಳನೋಟವಿರುತ್ತದೆ. ಧರ್ಮದ ರಕ್ಷಣೆಯಲ್ಲಿ ಅವರ ಚಿಂತನೆಗಳು, ಬೋಧನೆಗಳು ಅನನ್ಯ. ಆದಿ ಶಂಕರರ ಏಕಾತ್ಮ ಭಾವವು ಸರ್ವಾತ್ಮ ಭಾವವಾಗಿದೆ. ಇದು ಭಾರತಕ್ಕೆ ಮಾತ್ರ ಸೀಮಿತವಲ್ಲ. ಇಡೀ ಮನುಕುಲಕ್ಕೆ ಅತ್ಯಂತ ಅಗತ್ಯವಾಗಿದೆ. ಏಕಾಗ್ರತೆಯಿಂದ ಧ್ಯಾನಿಸಲು ಮತ್ತು ಏಕಾತ್ಮ ಭಾವವನ್ನು ಹೊಂದಲು ಮುಖ್ಯ ಸಾಧನವಾಗಿದೆ. ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರ ಚಿಂತೆನಗಳು ಸಹ ಅತ್ಯಂತ ಶ್ರೇಷ್ಠ ಎಂದು ಹೇಳಿದರು.

## ಆಸ್ಕರ್ ಪ್ರಶಸ್ತಿ ವಿಜೇತ ಚಿತ್ರದ ಸಹ ನಿರ್ದೇಶಕನನ್ನು ಬಂಧಿಸಿದ ಇಸ್ರೇಲ್

**ಜೆರುಸಲೇಂ:** ಆಸ್ಕರ್ ಪ್ರಶಸ್ತಿ ವಿಜೇತ ಸಾಕ್ಷ್ಯಚಿತ್ರ ನೋ ಅದರ್ ಲ್ಯಾಂಡ್‌ನ ಪ್ಯಾಲೆಸ್ತೀನ್ ಸಹ ನಿರ್ದೇಶಕರೊಬ್ಬರನ್ನು ಇಸ್ರೇಲಿ ಸೇನೆಯು ಬಂಧಿಸಿದೆ. ಅವರನ್ನು ಬಂಧಿಸುವ ಮುನ್ನ ಆಕ್ರಮಿತ ಪಶ್ಚಿಮ ದಂಡೆಯಲ್ಲಿ ಇಸ್ರೇಲಿ ವಸಾಹತುಗಾರರು ಅವರ ಮೇಲೆ ಥಳಿಸಿದ್ದಾರೆ ಎಂದು ಅವರ ಇಬ್ಬರು ಸಹ ನಿರ್ದೇಶಕರು ಮತ್ತು ಇತರ ಸಾಕ್ಷಿಗಳು ತಿಳಿಸಿದ್ದಾರೆ.

ಸುಸಿಯಾ ಗ್ರಾಮದಲ್ಲಿ ಬಂಧನಕ್ಕೊಳಗಾದ ಮೂವರು ಪ್ಯಾಲೆಸ್ತೀನೀಯರಲ್ಲಿ ಚಲನಚಿತ್ರ ನಿರ್ಮಾಪಕ ಹಮ್ದಾನ್ ಬಲ್ಲಾಲ್ ಕೂಡ ಒಬ್ಬರು ಎಂದು ವಕೀಲ ಲೇಹ್ ಸೆಮ್ಮೆಲ್ ಹೇಳಿದ್ದಾರೆ. ವೈದ್ಯಕೀಯ ಚಿಕಿತ್ಸೆ ಗಾಗಿ ಅವರನ್ನು ಮಿಲಿಟರಿ ನೆಲೆಯಲ್ಲಿ ಇರಿಸಲಾಗಿದೆ ಎಂದು ಪೊಲೀಸರು ಅವಳಿಗೆ ತಿಳಿಸಿದರು ಮತ್ತು ಅವರೊಂದಿಗೆ ಮಾತನಾಡಲು ಸಾಧ್ಯವಾಗಲಿಲ್ಲ ಎಂದು ಅವರು ತಿಳಿಸಿದ್ದಾರೆ.

ಮತ್ತೊಬ್ಬ ಸಹ–ನಿರ್ದೇಶಕ ಬಾಸೆಲ್ ಆದ್ರಾ ಬಂಧನಕ್ಕೆ ಸಾಕ್ಷಿಯಾಗಿದ್ದು, ಸುಮಾರು ಎರಡು ಡಜನ್ ವಲಸಿಗರು–ಕೆಲವರು ಮುಖವಾಡ ಧರಿಸಿದ್ದರು. ಕೆಲವರು ಬಂದೂಕುಗಳನ್ನು ಹಿಡಿದಿದ್ದರು. ಕೆಲವರು ಇಸ್ರೇಲಿ ಸಮವಸ್ತ್ರದಲ್ಲಿದ್ದರು, ಗ್ರಾಮದ ಮೇಲೆ ದಾಳಿ ನಡೆಸಿದರು ಎಂದು ಹೇಳಿದರು.

ಅಲ್ಲಿಗೆ ಬಂದ ಸೈನಿಕರು ತಮ್ಮ ಬಂದೂಕುಗಳನ್ನು ಪ್ಯಾಲೆಸ್ಟೀನಿಯರತ್ತ ತೋರಿಸಿದರು, ಆದರೆ ವಸಾಹತುಗಾರರು ಕಲ್ಲುಗಳನ್ನು ಎಸೆಯುವುದನ್ನು ಮುಂದುವರಿಸಿದರು. ನಾವು ಆಸ್ಕರ್ ಪ್ರಶಸ್ತಿಯಿಂದ ಹಿಂತಿರುಗಿದ್ದೇವೆ ಮತ್ತು ಪ್ರತಿದಿನ ನಮ್ಮ ಮೇಲೆ ದಾಳಿ ನಡೆಯುತ್ತಿದೆ. ಚಲನಚಿತ್ರವನ್ನು ಮಾಡಿದ್ದಕ್ಕಾಗಿ ಇದು ನಮ್ಮ ಮೇಲೆ ಅವರ ಸೇಡು ಆಗಿರಬಹುದು. ಇದು ಶಿಕ್ಷೆಯಂತೆ ಭಾಸವಾಗುತ್ತಿದೆ ಎಂದು ಅದ್ರಾ ಟಿ ಹೇಳಿದ್ದಾರೆ.

## ವಿಶ್ವಸಂಸ್ಥೆಯಲ್ಲಿ ಕಾಶ್ಮೀರ ವಿಷಯ ಕೆಣಕಿದ 'ಪಾಪಿ'ಸ್ತಾನಕ್ಕೆ ಭಾರತ ತರಾಟೆ

**ನವದೆಹಲಿ:** ಶಾಂತಿಪಾಲನಾ ಸುಧಾರಣೆಗಳ ಕುರಿತು ವಿಶ್ವಸಂಸ್ಥೆಯ ಚರ್ಚೆಯ ಸಂದರ್ಭದಲ್ಲಿ ಜಮ್ಮು ಮತ್ತು ಕಾಶ್ಮೀರ ವಿಷಯವನ್ನು ಮತ್ತೊಮ್ಮೆ ಪ್ರಸ್ತಾಪಿಸಿದ್ದಕ್ಕಾಗಿ ಭಾರತ ಪಾಕಿಸ್ತಾನಕ್ಕೆ ತಿರುಗೇಟು ನೀಡಿದೆ ಮತ್ತು ತಾನು ಅಕ್ರಮವಾಗಿ ಆಕ್ರಮಿಸಿಕೊಂಡಿರುವ ಪ್ರದೇಶದ ಕೆಲವು ಭಾಗಗಳನ್ನು ಖಾಲಿ ಮಾಡುವಂತೆ ನೆರೆಯ ದೇಶಕ್ಕೆ ಎಚ್ಚರಿಕೆ ನೀಡಿದೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿಯನ್ನುದ್ದೇಶಿಸಿ ಮಾತನಾಡಿದ ಭಾರತದ ಖಾಯಂ ಪ್ರತಿನಿಧಿ, ಪರ್ವತನೇನಿ ಹರೀಶ್, ಜಮ್ಮು ಮತ್ತು ಕಾಶ್ಮೀರದ ಬಗ್ಗೆ ಪಾಕಿಸ್ತಾನದ ಪುನರಾವರ್ತಿತ ಉಲ್ಲೇಖವನ್ನು ಅನಗತ್ಯ ಎಂದು ತಳ್ಳಿಹಾಕಿದರು.

ಮತ್ತು ಈ ಪ್ರದೇಶವು ಭಾರತದ ಅವಿಭಾಜ್ಯ ಅಂಗವಾಗಿದೆ. ಇದೆ ಮತ್ತು ಯಾವಾಗಲೂ ಉಳಿಯುತ್ತದೆ ಎಂದು ದೃಢವಾಗಿ ಪುನರುಚ್ಚರಿಸಿದರು. ಭಾರತದ ಕೇಂದ್ರಾಡಳಿತ ಪ್ರದೇಶವಾದ ಜಮ್ಮು ಮತ್ತು ಕಾಶ್ಮೀರದ ಬಗ್ಗೆ ಪಾಕಿಸ್ತಾನದ ಪ್ರತಿನಿಧಿ ಮತ್ತೊಮ್ಮೆ ಅನಗತ್ಯ ಹೇಳಿಕೆಗಳನ್ನು ನೀಡಿದ್ದಾರೆ ಎಂದು ಭಾರತ ಗಮನಿಸಲು ಒತ್ತಾಯಿಸಲಾಗಿದೆ.

ಇಂತಹ ಪುನರಾವರ್ತಿತ ಉಲ್ಲೇಖಗಳು ಅವರ ಕಾನೂನುಬಾಹಿರ ಹಕ್ಕುಗಳನ್ನು ದೃಢೀಕರಿಸುವುದಿಲ್ಲ ಅಥವಾ ಅವರ ರಾಜ್ಯ ಪ್ರಾಯೋಜಿತ ಗಡಿಯಾಚೆಗಿನ ಭಯೋತ್ಪಾದನೆಯನ್ನು ಸಮರ್ಥಿಸುವುದಿಲ್ಲ ಎಂದು ಹರೀಶ್ ಹೇಳಿದರು.

ಭಾರತೀಯ ರಾಯಭಾರಿ ಎನ್.ಟಿ.ಸಿಂಗ್ ರಜಪೂತ್ ಈ ವಿಷಯದ ಬಗ್ಗೆ ದೇಶದ ದೀರ್ಘಕಾಲದ ನಿಲುವನ್ನು ಪುನರುಚ್ಚರಿಸಿದರು, ಜಮ್ಮು ಮತ್ತು ಕಾಶ್ಮೀರವು ಯಾವಾಗಲೂ ಅವಿಭಾಜ್ಯ ಅಂಗವಾಗಿದೆ ಎಂದು ಹೇಳಿದರು.

## ಲಖನೌ ವಿರುದ್ಧ ಗೆದ್ದ ದೆಹಲಿ

**ವಿಶಾಖಪಟ್ಟಣ(ಆಂಧ್ರ ಪ್ರದೇಶ):** ಅಶುತೋಷ್ ಶರ್ಮಾ ಅವರ ಅದ್ಭುತ ಬ್ಯಾಟಿಂಗ್ ನೆರವಿನಿಂದ ಲಖನೌ ಸೂಪರ್ ಜೈಂಟ್ಸ್ ವಿರುದ್ಧ ದೆಹಲಿ ಕ್ಯಾಪಿಟಲ್ಸ್ ರೋಚಕ ಜಯ ದಾಖಲಿಸಿತು. ಈ ಮೂಲಕ ಪ್ರಸಕ್ತ ಐಪಿಎಲ್‌ನಲ್ಲಿ ಶುಭಾರಂಭ ಮಾಡಿತು.

ಸೋಮವಾರ ವಿಶಾಖಪಟ್ಟಣದ ವೈ.ಎಸ್.ರಾಜಶೇಖರ್ ರೆಡ್ಡಿ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆದ ಪಂದ್ಯ ರೋಚಕವಾಗಿತ್ತು. ಟಾಸ್ ಸೋತು ಮೊದಲು ಬ್ಯಾಟಿಂಗ್ ಅವಕಾಶ ಪಡೆದ ಲಖನೌ 20 ಓವರ್‌ಗಳಲ್ಲಿ 8 ವಿಕೆಟ್ ನಷ್ಟಕ್ಕೆ 209 ರನ್‌ಗಳ ಬೃಹತ್ ಗುರಿ ನೀಡಿತು.

ಬಳಿಕ ಬ್ಯಾಟಿಂಗ್ ಆರಂಭಿಸಿದ ದೆಹಲಿ ತಂಡ ಆರಂಭದಲ್ಲೇ ಮುಗ್ಗರಿಸಿತು. ಆರಂಭಿಕರಾಗಿ ಬಂದ ಜೇಕ್ ಫ್ರೇಸರ್ ಮೆಗ್ರುಕ್ (1), ಅಭಿಷೇಕ್ ಪೊರೆಲ್ (0), ಸಮೀರ್ ರಿಜ್ವಿ (4) ರನ್ ಗಳಿಸಿ ಬಂದಷ್ಟೇ ವೇಗವಾಗಿ ಪೆವಿಲಿಯನ್ ಸೇರಿದರು. ಈ ಹಂತದಲ್ಲಿ 7 ರನ್‌ಗಳಿಗೆ ಪ್ರಮುಖ ಮೂವರು ಬ್ಯಾಟರ್‌ಗಳ ವಿಕೆಟ್ ಕಳೆದುಕೊಂಡು ದೆಹಲಿ ಆಘಾತಕ್ಕೊಳಗಾಗಿತ್ತು.

**ಆಪತ್ಬಾಂಧವ ಅಶುತೋಷ್**: ಕೆಳ ಮಧ್ಯಮ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಅಶುತೋಷ್ ಕ್ರೀಸ್‌ನಲ್ಲಿ ಭದ್ರವಾಗಿ ನಿಂತು ತಂಡಕ್ಕೆ ಜಯ ಕೊಂಡೊಯ್ದರು. 31 ಎಸೆತಗಳಲ್ಲಿ 5 ಸಿಕ್ಸರ್, 5 ಬೌಂಡರಿ ನೆರವಿನಿಂದ 66 ರನ್ ಗಳಿಸಿ ತಂಡಕ್ಕೆ ಆಪತ್ಬಾಂಧವರಾದರು.

ಮೊದಲ ಪುಟದಿಂದ

### ಇದೊಂದು ಹಗಲುದರೋಡೆ;

ಎಂದು ನಮೂದಿಸಿದ್ದಾರೆ. ಬ್ಲ್ಯಾಲಿಸ್ಟ್ ಆದ ಕಂಪೆನಿಗೆ ಕೊಡುವುದಕ್ಕೆ ಅವಕಾಶ ಇಲ್ಲ ಎಂದು ತಿಳಿಸಿದ್ದರೂ ಉತ್ತರ ಪ್ರದೇಶದಲ್ಲಿ ಬ್ಲ್ಯಾಕ್ ಲಿಸ್ಟ್ ಆದ ಬಿಸಿಐಟಿಎಸ್ ಅನ್ನು ಪರಿಗಣಿಸಿದ್ದಾರೆ ಎಂದು ದೂರಿದರು. ಈ ಯೋಜನೆಯ ಅಂದಾಜು ವೆಚ್ಚ 571 ಕೋಟಿ ಎಂದು ತಿಳಿಸಿ ನಂತರ ತಿದ್ದುಪಡಿ ಮಾಡಿದ್ದಾರೆ. ಟೆಂಡರ್ ನ ಒಟ್ಟು ಮೊತ್ತ ತಿಳಿಸದೇ ಟೆಂಡರ್ ಕರೆಯಲಾಗಿದೆ ಎಂದು ಟೀಕಿಸಿದರು.

ಕೆಟಿಪಿಪಿ ಕಾಯ್ದೆಯೂ ಇಲ್ಲ; ಕೇಂದ್ರ ಸರಕಾರದ ನಿಯಮಾವಳಿಯನ್ನೂ ಜಾರಿ ಮಾಡಿಲ್ಲ; ಸ್ಮಾರ್ಟ್ ಮೀಟರ್ ತಯಾರಿಸದ, ಅಳವಡಿಸದ, ಡಿಜಿಟಲ್ ಮೀಟರ್ ಅಳವಡಿಸಿದ ವ್ಯಕ್ತಿಯನ್ನು ಪರಿಗಣಿಸಿದ್ದಾರೆ. ರಾಜಶ್ರೀ ಯಾಕೆ ಬಂದಿಲ್ಲ ಎಂದು ಪ್ರಶ್ನಿಸಿದರು. ಮೈಸೂರಿನಲ್ಲಿ ಗರಿಷ್ಠ ಸ್ಮಾರ್ಟ್ ಮೀಟರ್ ತಯಾರಾಗುತ್ತದೆ. ಅರ್ಹರನ್ನು ಹೊರಗಿಟ್ಟು ಬರೀ ಫೋನ್ ತಯಾರಕರನ್ನು ಆಯ್ಕೆ ಮಾಡಿದ್ದಾರೆ ಎಂದು ಆಕ್ಷೇಪಿಸಿದರು. ಕೇಂದ್ರ ಸರಕಾರದ ನಿಯಮಗಳ ಪ್ರಕಾರ 1 ಲಕ್ಷ ಸ್ಮಾರ್ಟ್ ಮೀಟರ್ ಅಳವಡಿಸಿದ ಅನುಭವ ಇರಬೇಕು. ಅದನ್ನು ಬಿಟ್ಟು ಉತ್ಪಾದನೆಯೇ ಮಾಡದ 10 ಲಕ್ಷ ಸಾಮಾನ್ಯ ಮೀಟರ್ ಅಳವಡಿಕೆಯನ್ನೇ ಮಾನದಂಡ ಮಾಡಿದ್ದಾರೆ. ಮೊದಲು ಟ್ರಾನ್ಸ್‌ಫಾರ್ಮರ್, ಫೀಡರ್ ಗಳಿಗೆ ಇದನ್ನು ಅಳವಡಿಸಿ ಸಾಗಾಟದಲ್ಲಿ ಆಗುವ ನಷ್ಟವನ್ನು ತಿಳಿಯಬೇಕಿತ್ತು. ಬಳಿಕ ರಾಜ್ಯದ ಗ್ರಾಹಕರಿಗೆ ಇದನ್ನು ಅಳವಡಿಸಬೇಕಿತ್ತು. ಕೇಂದ್ರದ 3 ಸಾವಿರ ಕೋಟಿಯನ್ನು ಬಳಸಿಲ್ಲ ಎಂದು ತಿಳಿಸಿದರು.ಕಾಂಗ್ರೆಸ್ ಆಳ್ವಿಕೆಯ ಹಿಮಾಚಲ ಪ್ರದೇಶದಲ್ಲಿ, ತೆಲಂಗಾಣ, ಕೇರಳದಲ್ಲಿ ಕಡಿಮೆ ಮೊತ್ತಕ್ಕೆ ಸ್ಮಾರ್ಟ್ ಮೀಟರ್ ಅಳವಡಿಸಿದ್ದಾರೆ. ನಮ್ಮ ರಾಜ್ಯದಲ್ಲಿ ಒಂದೊಂದು ಮೀಟರ್ ಗೆ 17 ಸಾವಿರ ಆಗುತ್ತದೆ. ಅದೇ ಬೇರೆ ರಾಜ್ಯದಲ್ಲಿ ಪ್ರತಿ ಮೀಟರ್ ಗೆ 7,740 ರೂ. ಆಗಲಿದೆ. ಬೆಸ್ಕಾಂ ಮತ್ತಿತರ ಎಸ್ಕಾಂಗೆ ಹೋಲಿಸಿದರೆ ಇದು 9,260 ರೂ. ಹೆಚ್ಚು ಎಂದು ತಿಳಿಸಿದರು.

ಬಿಹಾರದಲ್ಲೂ ಇದೇ ಮಾದರಿಯ ಹಗರಣ ನಡೆದಿದ್ದು, ಐಎಎಸ್ ಅಧಿಕಾರಿ, ಸಚಿವರು ಬಂಧಿತರಾಗಿದ್ದಾರೆ ಎಂದು ಗಮನ ಸೆಳೆದರು. ಸ್ಮಾರ್ಟ್ ಮೀಟರ್, ಸಾಫ್ಟ್‌ವೇರ್, ಔಟ್‌ಲೆಟ್, ಸಿಬ್ಬಂದಿ ಸಂಬಳವನ್ನು ವೆಚ್ಚವಾಗಿ ತೋರಿಸಿದ್ದಾರೆ ಎಂದರು. ಕೆಟಿಪಿಪಿ ಕಾಯ್ದೆಯನ್ನು ಎಲ್ಲ ಹಂತದಲ್ಲೂ ಉಲ್ಲಂಘಿಸಿದ್ದಾರೆ. ಭಂಡತನ, ಧೈರ್ಯದಲ್ಲಿ ಇದನ್ನು ಮಾಡಿದ್ದಾರೆ ಎಂದು ಆರೋಪಿಸಿದರು.

ಇದೊಂದು ಹಗಲುದರೋಡೆ; ಸರಕಾರ ಇದಕ್ಕೆ ಉತ್ತರ ಕೊಡಬೇಕು. ಸ್ಮಾರ್ಟ್ ಮೀಟರ್ ಕಡ್ಡಾಯ ಮಾಡಲು ಕಾನೂನಿಲ್ಲದೇ ಅದನ್ನು ಕಡ್ಡಾಯ ಮಾಡುತ್ತಿದ್ದಾರೆ. ಬ್ಲ್ಯಾಕ್ ಲಿಸ್ಟ್ ಆದವರಿಗೆ ಕೊಡಲಾಗಿದೆ ಎಂದು ದೂರಿದರು. ಸತ್ಯವನ್ನು ಹೇಳಿದ್ದೇವೆ. ಇದು ರಾಜಕೀಯ ಪ್ರೇರಿತ ಅಲ್ಲ ಎಂದು ಸ್ಪಷ್ಟಪಡಿಸಿದರು. ಸರಕಾರ ಕ್ರಮ ಕೈಗೊಳ್ಳದೇ ಇದ್ದಲ್ಲಿ ಸಮರ್ಪಕವಾಗಿ ಬಿಸಿ ಮುಟ್ಟಿಸುವುದಾಗಿ ಎಚ್ಚರಿಸಿದರು.

ಇಂಧನ ಇಲಾಖೆ ಅತಿವೇಗವಾಗಿ ಅಂದರೆ, ಶೇ 30ಕ್ಕೂ ಹೆಚ್ಚು ವೇಗದಲ್ಲಿ ಬೆಳವಣಿಗೆ ಕಾಣುತ್ತಿದೆ. ವಹಿವಾಟು, ಬಳಕೆ, ಉಪಯೋಗ– ಶೇ 50ಕ್ಕೂ ಹೆಚ್ಚು ಇದೇ ಇಲಾಖೆಯದು ಆಗಲಿದೆ ಎಂಬ ನಿರೀಕ್ಷೆಯನ್ನು ವ್ಯಕ್ತಪಡಿಸಿದರು. ವಿದ್ಯುತ್ ಬಳಸಿ ಚಲಾಯಿಸುವ ವಾಹನಗಳೂ ಬಂದಿವೆ. ಬಟ್ಟೆ ಒಗೆಯುವುದು, ಅಡುಗೆ, ಬಿಸಿನೀರು, ಮಿಕ್ಸಿ– ಎಲ್ಲವೂ ವಿದ್ಯುತ್ ಬಳಕೆಯ ಆಧರಿತವಾಗಿವೆ ಎಂದು ಹೇಳಿದರು.

ಇಲಾಖೆಯ ಪ್ರಧಾನ ಕಾರ್ಯದರ್ಶಿ ಗೌರವ್ ಗುಪ್ತ, ಕೆಪಿಟಿಸಿಎಲ್ ಎಂ.ಡಿ. ಪಂಕಜ್ ಪಾಂಡೆ ಮತ್ತು ಬೆಸ್ಕಾಂ ಎಂ.ಡಿ. ಶಿವಶಂಕರ್ ಅವರು ನಿನ್ನೆ ಪತ್ರಿಕಾಗೋಷ್ಠಿ ಮಾಡಿ ಸ್ಮಾರ್ಟ್ ಮೀಟರ್ ವಿಚಾರದಲ್ಲಿ ಏನೂ ತಪ್ಪಾಗಿಲ್ಲ ಎಂದಿದ್ದಾರೆ ಎಂದರು. ಸ್ಮಾರ್ಟ್ ಮೀಟರ್ ಮತ್ತು ಇದರ ಸಾಫ್ಟ್‌ವೇರ್ ವಿಷಯದಲ್ಲಿ ಭ್ರಷ್ಟಾಚಾರದ ಕುರಿತು ದಾಖಲೆಸಮೇತ ತಿಳಿಸುವುದಾಗಿ ಹೇಳಿದರು. ಸದನದಲ್ಲೂ ಈ ವಿಷಯ ಪ್ರಸ್ತಾಪವಾಗಿದೆ ಎಂದರು. ಶಾಸಕ ಎಸ್.ಆರ್ ವಿಶ್ವನಾಥ್ ಅವರೂ ಈ ಬಗ್ಗೆ ಸದನದಲ್ಲಿ ಮಾತನಾಡಿದ್ದಾರೆ ಎಂದು ವಿವರಿಸಿದರು. ಆದರೆ ಸಚಿವರು ಈ ಕುರಿತು ಸ್ಪಷ್ಟ ಉತ್ತರ ನೀಡಿಲ್ಲ ಎಂದು ಟೀಕಿಸಿದರು.

ಶಾಸಕ ಎಸ್.ಆರ್ ವಿಶ್ವನಾಥ್, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್.ಹರೀಶ್ ಮತ್ತು ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ ಅವರು ಭಾಗವಹಿಸಿದ್ದರು.

### ಮೂವರು ನಕ್ಸಲರ ಎನ್‌ಕೌಂಟರ್

ಪ್ರಾರಂಭವಾಯಿತು.ಘಟನಾ ಸ್ಥಳದಿಂದ ಮೂವರು ನಕ್ಸಲರ ಶವಗಳು ಮತ್ತು ಬಂದೂಕುಗಳು ಮತ್ತು ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಅವರು ಹೇಳಿದರು. ಈ ಪ್ರದೇಶದಲ್ಲಿ ಕಾರ್ಯಾಚರಣೆ ಇನ್ನೂ ನಡೆಯುತ್ತಿದೆ ಮತ್ತು ಹೆಚ್ಚಿನ ವಿವರಗಳನ್ನು ನಿರೀಕ್ಷಿಸಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಮಾರ್ಚ್ 20 ರಂದು ಬಿಜಾಪುರ ಮತ್ತು ಕಂಕೇರ್ ಜಿಲ್ಲೆಗಳಲ್ಲಿ ನಡೆದ ಎರಡು ಎನ್‌ಕೌಂಟರ್‌ಗಳಲ್ಲಿ ಭದ್ರತಾ ಪಡೆಗಳು 30 ನಕ್ಸ ಲರನ್ನು ಗುಂಡಿಕ್ಕಿ ಕೊಂದಿದ್ದವು.

### ತಪ್ಪಿದ ಬಾರಿ ಅನಾಹುತ

ಆದ್ದರಿಂದ ಚಾಲಕನ ನಿಯಂತ್ರಣ ತಪ್ಪಿ ಮರಕ್ಕೆ ಡಿಕ್ಕಿಯಾಗಿದೆ. ಲಾರಿಯ ಮುಂಭಾಗ ಸಂಪೂರ್ಣ ನಜ್ಜುಗುಜ್ಜಾಗಿದೆ.

ಅದೃಷ್ಟವಶಾತ್ ಟ್ರಕ್‌ನಲ್ಲಿರುವ ಗ್ಯಾಸ್ ಸಿಲಿಂಡರ್‌ಗಳು ಸೋರಿಕೆಯಾಗಿಲ್ಲ. ಟ್ರಕ್‌ನ ಬಾಗಿಲು ಮುರಿದು ಚಾಲಕನನ್ನು ಸ್ಥಳೀಯರು ರಕ್ಷಣೆ ಮಾಡಿದ್ದಾರೆ. ಚಾಲಕ ವಿನಾಯಕನಿಗೆ ಸಣ್ಣಪುಟ್ಟ ಗಾಯಗಳಾಗಿದ್ದು, ದಾಂಡೇಲಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಸ್ಥಳಕ್ಕೆ ದಾಂಡೇಲಿ ಗ್ರಾಮೀಣ ಠಾಣೆಯ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

### ಹಾಗೂ ಪಿಂಚಣಿ ಏರಿಕೆ

ವೇತನವು ತಿಂಗಳಿಗೆ 1 ಲಕ್ಷ ರೂ.ಗಳಿಂದ 1.24 ಲಕ್ಷ ರೂ.ಗಳಿಗೆ ಏರಿಕೆಯಾಗಿದೆ. ಅದೇ ಸಮಯದಲ್ಲಿ, ದಿನಭತ್ಯೆ 2,000 ರೂ.ಗಳಿಂದ 2,500 ರೂ.ಗಳಿಗೆ ಏರಿಕೆಯಾಗಿದೆ.

ಇದಲ್ಲದೆ, ಮಾಜಿ ಸಂಸದರ ಪಿಂಚಣಿ ಕೂಡ ತಿಂಗಳಿಗೆ 25,000 ರೂ.ಗಳಿಂದ 31,000 ರೂ.ಗಳಿಗೆ ಏರಿಕೆಯಾಗಿದೆ. ಇದಲ್ಲದೆ, ಐದು ವರ್ಷಗಳಿಗಿಂತ ಹೆಚ್ಚಿನ ಸೇವೆಗೆ ಹೆಚ್ಚುವರಿ ಪಿಂಚಣಿಯನ್ನು 2,000 ರೂ.ಗಳಿಂದ 2,500 ರೂ.ಗಳಿಗೆ ಹೆಚ್ಚಿಸಲಾಗಿದೆ. ಸಂಸತ್ತಿನ ಬಜೆಟ್ ಅಧಿವೇಶನದ ಮಧ್ಯದಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇದಕ್ಕೂ ಮೊದಲು, ಸಂಸದರ ವೇತನ ಮತ್ತು ಭತ್ಯೆಗಳಲ್ಲಿ ಬದಲಾವಣೆಗಳನ್ನು ಏಪ್ರಿಲ್ 2018 ರಲ್ಲಿ ಮಾಡಲಾಗಿತ್ತು.

2018 ರಲ್ಲಿ ಸಂಸದರ ಮೂಲ ವೇತನವನ್ನು ತಿಂಗಳಿಗೆ 1 ಲಕ್ಷ ರೂ.ಗೆ ನಿಗದಿಪಡಿಸಲಾಗಿತ್ತು. ಇದರ ಉದ್ದೇಶವೆಂದರೆ ಅವರ ಸಂಬಳ ಹಣದುಬ್ಬರ ಮತ್ತು ಹೆಚ್ಚುತ್ತಿರುವ ಜೀವನ ವೆಚ್ಚಕ್ಕೆ ಅನುಗುಣವಾಗಿರಬೇಕು. 2018 ರ ತಿದ್ದುಪಡಿಗಳ ಪ್ರಕಾರ, ಸಂಸದರು ತಮ್ಮ ಕ್ಷೇತ್ರದಲ್ಲಿ ಕಚೇರಿ ನಡೆಸಲು ಮತ್ತು ಜನರನ್ನು ಭೇಟಿ ಮಾಡಲು 70,000 ರೂ. ಭತ್ಯೆ ಪಡೆಯುತ್ತಾರೆ. ಇದಲ್ಲದೆ, ಅವರು ಕಚೇರಿ ವೆಚ್ಚಕ್ಕಾಗಿ ತಿಂಗಳಿಗೆ 60 ಸಾವಿರ ರೂ. ಮತ್ತು ಸಂಸತ್ತಿನ ಅಧಿವೇಶನದ ಸಮಯದಲ್ಲಿ ದಿನಕ್ಕೆ 2 ಸಾವಿರ ರೂ. ಭತ್ಯೆಯನ್ನು ಪಡೆಯುತ್ತಾರೆ. ಈಗ ಈ ಭತ್ಯೆಗಳನ್ನು ಸಹ ಹೆಚ್ಚಿಸಲಾಗುವುದು.

ಸಂಸದರಿಗೆ ಬೇರೆ ಯಾವ ಸೌಲಭ್ಯಗಳು ಸಿಗುತ್ತವೆ? ಇದಲ್ಲದೆ, ಸಂಸದರು ಪ್ರತಿ ವರ್ಷ ಫೋನ್ ಮತ್ತು ಇಂಟರ್ನೆಟ್ ಬಳಸಲು ಭತ್ಯೆಯನ್ನು ನೀಡಲಾಗುತ್ತದೆ. ಅವರು ತಮ್ಮ ಮತ್ತು ತಮ್ಮ ಕುಟುಂಬಗಳೊಂದಿಗೆ ವರ್ಷದಲ್ಲಿ 34 ಬಾರಿ ಉಚಿತವಾಗಿ ದೇಶೀಯ ವಿಮಾನಗಳಲ್ಲಿ ಪ್ರಯಾಣಿಸಬಹುದು. ಅವರು ಕೆಲಸ ಅಥವಾ ವೈಯಕ್ತಿಕ ಬಳಕೆಗಾಗಿ ಯಾವುದೇ ಸಮಯದಲ್ಲಿ ರೈಲಿನ ಫಸ್ಟ್ ಕ್ಲಾಸ್‌ನಲ್ಲಿ ಪ್ರಯಾಣಿಸಬಹುದು. ಅವರು ರಸ್ತೆಯ ಮೂಲಕ ಪ್ರಯಾಣಿಸಿದರೆ ಇಂಧನ ವೆಚ್ಚವನ್ನೂ ಪಡೆಯುತ್ತಾರೆ. ಸಂಸದರು ಪ್ರತಿ ವರ್ಷ 50 ಸಾವಿರ ಯೂನಿಟ್ ವಿದ್ಯುತ್ ಮತ್ತು 4 ಸಾವಿರ ಕಿಲೋಲೀಟರ್ ನೀರನ್ನು ಉಚಿತವಾಗಿ ಪಡೆಯುತ್ತಾರೆ.

ಸರ್ಕಾರವು ಅವರ ವಾಸ್ತವ್ಯಕ್ಕೆ ವ್ಯವಸ್ಥೆಗಳನ್ನು ಸಹ ಮಾಡುತ್ತದೆ. ದೆಹಲಿಯಲ್ಲಿ ಸಂಸದರಿಗೆ 5 ವರ್ಷಗಳ ಕಾಲ ಬಾಡಿಗೆ ರಹಿತ ಮನೆ. ಅವರು ತಮ್ಮ ಹಿರಿತನಕ್ಕೆ ಅನುಗುಣವಾಗಿ ಹಾಸ್ಟೆಲ್ ಕೊಠಡಿಗಳು, ಅಪಾರ್ಟ್‌ಮೆಂಟ್‌ಗಳು ಅಥವಾ ಬಂಗಲೆಗಳನ್ನು ಪಡೆಯಬಹುದು. ಸರ್ಕಾರಿ ಮನೆಗಳನ್ನು ಪಡೆಯದ ಸಂಸದರು ಪ್ರತಿ ತಿಂಗಳು ಮನೆ ಭತ್ಯೆಯನ್ನು ಪಡೆಯುತ್ತಾರೆ.

### ಸಮನ್ಸ್ ಜಾರಿ

ಮೂಲಗಳ ಪ್ರಕಾರ, ಖಾರ್ ಪೊಲೀಸ್ ಠಾಣೆಯಿಂದ ಅವರು ವಾಸಿಸುವ ನಿವಾಸದ ವಿಳಾಸಕ್ಕೆ ಸಮನ್ಸ್ ನೀಡಲಾಗಿದೆ. ಆದರೆ ಸದ್ಯ ಕಮ್ರಾ ಮುಂಬೈನಲ್ಲಿ ಇಲ್ಲದ ಕಾರಣ ಅವರ ವಾಟ್ಸ್‌ಆ್ಯಪ್‌ಗೆ ಸಮನ್ಸ್ ಕಳುಹಿಸಲಾಗಿದೆ ಎಂದು ತಿಳಿದು ಬಂದಿದೆ. ಈ ಬಗ್ಗೆ ತಮ್ಮ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, "ನನಗೆ ನಿರಂತರವಾಗಿ ಬೆದರಿಕೆ ಕರೆಗಳು ಬರುತ್ತಿವೆ" ಎಂದು ತಿಳಿಸಿದ್ದಾರೆ. ಕಮ್ರಾ ತಮ್ಮ ಸ್ಟಾಂಡ್‌ಅಪ್ ಕಾಮಿಡಿ ಕಾರ್ಯಕ್ರಮದಲ್ಲಿ ಜನಪ್ರಿಯ ಹಿಂದಿ ಸಿನಿಮಾದ ಹಾಡನ್ನು ಮಾರ್ಪಡಿಸಿ, ಶಿಂಧೆ ರಾಜಕೀಯ ಜೀವನದ ಕುರಿತು ಟೀಕಿಸಿದ್ದರು. ಈ ವಿಡಿಯೋ ವೈರಲ್ ಆಗುತ್ತಿದ್ದಂತೆ ಶಿವಸೇನಾ ಕಾರ್ಯಕರ್ತರು ಕಾರ್ಯಕ್ರಮ ಚಿತ್ರೀಕರಣಗೊಂಡ ಯುನಿಕಾಂಟಿನೆಂಟಲ್ ಹೋಟೆಲ್ ಮೇಲೆ ದಾಳಿ ನಡೆಸಿದ್ದರು. ಈ ದಾಳಿಯನ್ನು ಕಮ್ರಾ ಖಂಡಿಸಿದ್ದಾರೆ.

ಮನರಂಜನಾ ಕಾರ್ಯಕ್ರಮ ನಡೆಯುವ ಸ್ಥಳ ಕೇವಲ ಒಂದು ವೇದಿಕೆ. ಅಲ್ಲಿ ಎಲ್ಲಾ ರೀತಿಯ ಕಾರ್ಯಕ್ರಮಗಳ ಪ್ರದರ್ಶನವಾಗುತ್ತದೆ. ನನ್ನ ಕಾಮಿಡಿ ಕಾರ್ಯಕ್ರಮಕ್ಕೂ ಆ ವೇದಿಕೆಗೂ ಯಾವುದೇ ಸಂಬಂಧವಿಲ್ಲ. ನಾನು ಏನು ಹೇಳುತ್ತೇನೆ ಎಂಬುದನ್ನು ನಿಯಂತ್ರಿಸುವ ಶಕ್ತಿ ಯಾರಿಗೂ ಇಲ್ಲ. ಯಾವುದೇ ರಾಜಕೀಯ ಪಕ್ಷಕ್ಕೂ ಇಲ್ಲ ಎಂದಿದ್ದಾರೆ.

ನನಗೆ ಪಾಠ ಕಲಿಸುವುದಾಗಿ ಎಚ್ಚರಿಕೆ ನೀಡಲಾಗುತ್ತಿದೆ. ಆದರೆ, ಎಲ್ಲರಿಗೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವ ಸ್ವಾತಂತ್ರ್ಯವಿದೆ. ಸಾರ್ವಜನಿಕ ಶಕ್ತಿಶಾಲಿಯುತ ವ್ಯಕ್ತಿಯನ್ನು ತಮಾಷೆ ಮಾಡಿದ ಮಾತ್ರಕ್ಕೆ ಈ ಸ್ವಾತಂತ್ರ್ಯವನ್ನು ಬದಲಾಯಿಸಲು ಸಾಧ್ಯವಿಲ್ಲ. ನನಗೆ ತಿಳಿದಿರುವ ಮಟ್ಟಿಗೆ ನಮ್ಮ ನಾಯಕರು ಮತ್ತು ನಮ್ಮ ರಾಜಕೀಯ ವ್ಯವಸ್ಥೆಯನ್ನು ಗೇಲಿ ಮಾಡುವುದು ಕಾನೂನಿಗೆ ವಿರುದ್ಧವಲ್ಲ. ನಾನು ಕಾನೂನಾತ್ಮಕವಾಗಿ ಪೊಲೀಸರು ಮತ್ತು ನ್ಯಾಯಾಲಯದೊಂದಿಗೆ ಸಹಕರಿಸುತ್ತೇನೆ ಎಂದು ಹೇಳಿದ್ದಾರೆ.

### ಸಿಕ್ಕರೆ ದೇಶ ಸರ್ವನಾಶ

ಮುಂಬರುವ ದಿನಗಳಲ್ಲಿ ರಾಜ್ಯಗಳ ವಿಶ್ವವಿದ್ಯಾಲಯಗಳ ಕುಲಪತಿಗಳನ್ನು ಆರ್‌ಎಸ್‌ಎಸ್ ಶಿಫಾರಸಿನ ಮೇಲೆಯೇ ನೇಮಕಾತಿ ಮಾಡುತ್ತಾರೆ. ನಾವಿದನ್ನು ತಡೆಯಬೇಕು" ಎಂದು ಅವರು ಮನವಿ ಮಾಡಿದರು.

ಕಳೆದ ವಾರ ಪ್ರಧಾನಿ ನರೇಂದ್ರ ಮೋದಿ ಸಂಸತ್ತಿನಲ್ಲಿ ಮಹಾ ಕುಂಭಮೇಳದ ಕುರಿತು ಮಾತನಾಡಿರುವುದನ್ನು ಪ್ರಸ್ತಾಪಿಸಿದ ರಾಹುಲ್ ಗಾಂಧಿ, "ಪ್ರಧಾನಿ ದೇಶದಲ್ಲಿರುವ ನಿರುದ್ಯೋಗ ಮತ್ತು ಹಣದುಬ್ಬರದ ಕುರಿತು ಮಾತನಾಡಬೇಕಿತ್ತು. ಆದರೆ ಅವರು ಈ ಕುರಿತು ಒಂದು ಮಾತನ್ನೂ ಆಡುವುದಿಲ್ಲ. ದೇಶದ ಎಲ್ಲ ಸಂಪನ್ಮೂಲಗಳನ್ನು ಅದಾನಿ, ಅಂಬಾನಿ ಮತ್ತು ಸಂಸ್ಥೆಗಳನ್ನು ಆರ್‌ಎಸ್‌ಎಸ್‌ಗೆ ಹಸ್ತಾಂತರಿಸುವುದೇ ಅವರು ಅನುಸರಿಸುತ್ತಿರುವ ಆಡಳಿತದ ಮಾದರಿ" ಎಂದು ಚಾಟಿ ಬೀಸಿದರು.

"ನೀವು ಇಂಡಿಯಾ ಕೂಟದ ವಿದ್ಯಾರ್ಥಿಗಳು. ನಮ್ಮ ಸಿದ್ಧಾಂತಗಳು, ನೀತಿಗಳನ್ನು ಕೆಲವು ವ್ಯತ್ಯಾಸಗಳಿರಬಹುದು. ಆದರೆ, ದೇಶದ ಶಿಕ್ಷಣ ವ್ಯವಸ್ಥೆಯಲ್ಲಿ ನಾವು ಯಾವುದೇ ರಾಜಿ ಮಾಡಿಕೊಳ್ಳುವುದಿಲ್ಲ. ನಾವು ಒಟ್ಟಾಗಿ ಹೋರಾಡಿ ಆರ್‌ಎಸ್‌ಎಸ್ ಅನ್ನು ಹಿಂದಕ್ಕೆ ತಳ್ಳಬೇಕು" ಎಂದು ಪ್ರತಿಭಟನಾನಿರತರಿಗೆ ರಾಹುಲ್ ಗಾಂಧಿ ಕರೆ ಕೊಟ್ಟರು.

### ಮಾತನಾಡಿದಂತಿದೆ'

"ಈ ವ್ಯಕ್ತಿ (ಕಮ್ರಾ) ಸುಪ್ರೀಂ ಕೋರ್ಟ್, ಪ್ರಧಾನಿ, ಪತ್ರಕರ್ತ ಅರ್ನಾಬ್ ಗೋಸ್ವಾಮಿ ಹಾಗೂ ಮತ್ತಿತರ ಕೈಗಾರಿಕೋದ್ಯಮಗಳ ವಿರುದ್ಧವೂ ಮಾತನಾಡಿದ್ದಾನೆ. ಇದು ಮಾತನಾಡುವ ಸ್ವಾತಂತ್ರ್ಯವಲ್ಲ. ಇದು ಬೇರೆಯವರಿಗೆ ಕೆಲಸ ಮಾಡಿ ಮಾಡುವುದು" ಎಂದರು.

"ಕಳೆದ ಮೂರು ವರ್ಷಗಳ ಹಿಂದೆ ಸರ್ಕಾರ ರಚನೆಯಾದಾಗಿನಿಂದ ಜನರು ಆರೋಪಗಳನ್ನು ಮಾಡುತ್ತಲೇ ಇದ್ದಾರೆ. ಇದಕ್ಕೆ ನಾನು ಕೆಲಸದ ಮೂಲಕ ಉತ್ತರಿಸುತ್ತೇನೆ. ಪ್ರತಿ ಆರೋಪಕ್ಕೂ ಪ್ರತಿಕ್ರಿಯಿಸುತ್ತಿದ್ದರೆ, ನಮ್ಮ ಗಮನ ಬೇರೆಡೆ ಹೋಗುತ್ತದೆ. ಜನರು ನಮ್ಮ ಕೆಲಸ ಮೆಚ್ಚಿದ್ದಕ್ಕೆ ನಮಗೆ 80ರಲ್ಲಿ 60 ಸ್ಥಾನಗಳು ಸಿಕ್ಕಿವೆ. ಠಾಕ್ರೆ ಬಣದ ಶಿವಸೇನೆಗೆ 20 ಸ್ಥಾನ ಸಿಕ್ಕಿದೆ" ಎಂದು ವಾಗ್ದಾಳಿ ನಡೆಸಿದರು.

ಹೋಟೆಲ್ ಮೇಲೆ ದಾಳಿ ಮಾಡಿರುವ ಘಟನೆ ಕುರಿತು ಮಾತನಾಡಿದ ಅವರು, "ಈ ಘಟನೆಯನ್ನು ನಾನು ಬೆಂಬಲಿಸುವುದಿಲ್ಲ. ಆದರೆ ಕ್ರಿಯೆಗೆ ಪ್ರತಿಕ್ರಿಯೆ ಇರುತ್ತದೆ. ನಾನು ಸೂಕ್ಷ್ಮ ವ್ಯಕ್ತಿ, ಸಹಿಸಿಕೊಳ್ಳುವ ಶಕ್ತಿ ನನಗಿದೆ. ನಾನು ಯಾರೊಂದಿಗೂ ಮಾತನಾಡುವುದಿಲ್ಲ. ಶಾಂತವಾಗಿರುತ್ತೇನೆ. ಕೆಲಸ ಮಾಡುತ್ತೇನೆ. ಕೆಲಸದ ಮೇಲೆ ನನ್ನ ಗಮನವಿದೆ" ಎಂದು ಹೇಳಿದ್ದಾರೆ.

### ಬಜೆಟ್ ಮಂಡಿಸಿದ ದೆಹಲಿ ಸಿಎಂ

2,500 ರೂ ಹಣ ನೀಡುವ ಮಹಿಳಾ ಸಮ್ಮಾನ್ ನಿಧಿ ಯೋಜನೆಗೆ 5,100 ಕೋಟಿ ರೂ ಮೀಸಲಿಡಲಾಗಿದೆ. ಆರೋಗ್ಯ ಸೇವೆಯನ್ನು ಸದೃಢಗೊಳಿಸುವ ಗುರಿಯೊಂದಿಗೆ ಪ್ರಧಾನ ಮಂತ್ರಿ ಜನ್ ಆರೋಗ್ಯ ಯೋಜನೆಗೆ 2,144 ಕೋಟಿ ಹಂಚಿಕೆ ಮಾಡಲಾಗಿದೆ ಎಂದು ಅವರು ವಿವರಿಸಿದರು.ಆರೋಗ್ಯ ವಲಯಕ್ಕೆ 6,874 ಕೋಟಿ, ಶ್ರೀ ಶಾಲೆಗಳನ್ನು ತೆರೆಯಲು 100 ಕೋಟಿ, 1,200 ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಣೆಗೆ 750 ಕೋಟಿ ರೂ ಹಂಚಿಕೆ ಮಾಡಲಾಗಿದೆ ಎಂದರು.

### ಎಚ್ಚರಿಕೆ ನೀಡಿದ ತಮಿಳುನಾಡು

ಎಂದು ಕೇಂದ್ರ ಸರ್ಕಾರ ತಿಳಿಸಿದೆ ಎಂದು ಮಾಹಿತಿ ನೀಡಿದ್ದಾರೆ. ಬೆಂಗಳೂರಿಗೆ ಕುಡಿಯುವ ನೀರು ಒದಗಿಸಲು ಕರ್ನಾಟಕವು 67.16 ಟಿಎಂಸಿ ಸಾಮರ್ಥ್ಯದ ಜಲಾಶಯವನ್ನು ನಿರ್ಮಿಸಲು ಪ್ರಸ್ತಾಪಿಸಿದೆ. ಆದರೆ, ನದಿಪಾತ್ರದ ಕೆಳಗಿನ ರಾಜ್ಯವಾದ ತಮಿಳುನಾಡಿನ ಅನುಮತಿಯಿಲ್ಲದೆ ಕರ್ನಾಟಕವು ಯೋಜನೆಯನ್ನು ಮುಂದುವರಿಸಲು ಸಾಧ್ಯವಿಲ್ಲ ಎಂದು ಸಚಿವರು ಹೇಳಿದ್ದಾರೆ ಎಂದು 'ಡೆಕ್ಕನ್ ಹೆರಾಲ್ಡ್' ವರದಿ ಮಾಡಿದೆ. ಈ ಯೋಜನೆಯು ಕರ್ನಾಟಕದಿಂದ ನದಿ ನೀಡಿನ ನೈಸರ್ಗಿಕ ನೀರಿನ ಹರಿವಿಗೆ ತಡೆಯೊಡ್ಡಲಿದೆ ಎಂಬುದು ತಮಿಳುನಾಡಿನ ವಾದವಾಗಿದೆ. ಕಾವೇರಿ ನ್ಯಾಯಮಂಡಳಿಯ ಅಂತಿಮ ಆದೇಶ ಮತ್ತು ಸುಪ್ರೀಂ ಕೋರ್ಟ್ ತೀರ್ಪನ್ನು ಉಲ್ಲಂಘಿಸಿ ಕರ್ನಾಟಕವು ಮೇಕೆದಾಟು ಅಥವಾ ಕರ್ನಾಟಕದ ಕಾವೇರಿ ಜಲಾನಯನ ಪ್ರದೇಶದ ಯಾವುದೇ ಸ್ಥಳದಲ್ಲಿ ಅಣೆಕಟ್ಟು ನಿರ್ಮಿಸುವುದನ್ನು ತಡೆಯಲು ತಮಿಳುನಾಡು ಸರ್ಕಾರವು ಕಾನೂನು ಕ್ರಮ ಸೇರಿದಂತೆ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ ಎಂದು ದೊರೈ ಮುರುಗನ್ ಹೇಳಿದ್ದಾರೆ.

ಮುಸ್ಸಂಜೆ



# ಅಂತರ್ಜಾಲ ಮಟ್ಟ ಕುಸಿತ: ನೀರಿನ ಅಭಾವ ಹೆಚ್ಚಾಗಲಿದೆ

**ಬೆಂಗಳೂರು:** ಗ್ರಾಮೀಣ ಶಿಕ್ಷಣ ಮತ್ತು ಆರೋಗ್ಯ ಸಂಸ್ಥೆ ಮೈಸೂರು, ಹಸಿರು ಸಂಘ– ಶಾರದಾ ವಿಲಾಸ ಶಿಕ್ಷಣ ಮಹಾವಿದ್ಯಾಲಯ ಮೈಸೂರು ಇವರ ಸಹಯೋಗದೊಂದಿಗೆ ವಿಶ್ವ ಜಲ ದಿನ ಕಾರ್ಯಕ್ರಮವನ್ನು ಶಾರದ ವಿಲಾಸ ಶಿಕ್ಷಣ ಮಹಾವಿದ್ಯಾಲಯ ಸಭಾಂಗಣದಲ್ಲಿ ನಡೆಸಲಾಯಿತು.




ಕಾರ್ಯಕ್ರಮವನ್ನು ಗಿಡಕ್ಕೆ ನೀರು ಹಾಕುವ ಮುಖಾಂತರ ಉದ್ಘಾಟಿಸಲಾಯಿತು. ಪ್ರಸ್ತಾವಿಕವಾಗಿ ಮಾತನಾಡಿದ ಸಂಸ್ಥೆಯ ಕಾರ್ಯದರ್ಶಿಗಳಾದ ಪ್ರೊ.ಜೋಸ್ ವಿ.ಕೆ. ನಮ್ಮ ಸಂಸ್ಥೆಯು ಕಳೆದ 40 ವರ್ಷಗಳಿಂದ ಮಕ್ಕಳ ಕೇಂದ್ರೀಕೃತವಾಗಿ ಸಮುದಾಯದ ಅಭಿವೃದ್ಧಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು ಪ್ರಸ್ತುತ ದಿನಮಾನದಲ್ಲಿ ಹವಾಮಾನ ವೈಪರಿತ್ಯದಿಂದಾಗಿ ಪರಿಸರ ನಾಶವಾಗುತ್ತಿದೆ. ಇಂದು ಅಂತರ್ಜಲ ಮಟ್ಟ ಕುಸಿಯುತ್ತಿದ್ದು ಮುಂದಿನ ದಿನದಲ್ಲಿ ನೀರಿನ ಅಭಾವ ಹೆಚ್ಚಾಗುತ್ತದೆ. ನಾವು ನೀವು ಎಲ್ಲರೂ ಸೇರಿ ನೀರನ್ನು ಸಂರಕ್ಷಿಸೋಣ ಎಂದು ತಿಳಿಸಿದರು.

ನಮ್ಮ ಸಂಸ್ಥೆ, ಆರ್ಎಲ್ಎಚ್‌ಪಿ, ಪರಿಸರ ಸಂರಕ್ಷಣೆಗೆ ಬದ್ಧವಾಗಿದೆ. ನಮ್ಮ ಯೋಜನೆಯು ನಮ್ಮ ಗ್ರಹದ ಮೇಲೆ ಪರಿಣಾಮ ಬೀರುವ ನಿರ್ಣಾಯಕ ಸಮಸ್ಯೆಗಳ ಬಗ್ಗೆ ಜಾಗೃತಿ ಮೂಡಿಸುವ ಗುರಿಯನ್ನು ಹೊಂದಿದೆ ಎಂದು ತಿಳಿಸಿದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದಂತಹ ಪ್ರೊಫೆಸರ್ ರವಿಕುಮಾರ್ ಯು.ಎನ್, ಪರಿಸರವಾದಿಗಳು ಹಾಗೂ ಪರಿಸರ ತಜ್ಞರು ಮಾತನಾಡುತ್ತಾ ಈಗ, ನಾನು ಜಾಗತಿಕ ನೀರಿನ ಬಿಕ್ಕಟ್ಟನ್ನು ಪರಿಹರಿಸುವಲ್ಲಿ ಜ್ಞಾನ, ಪ್ರಭಾವ ಮತ್ತು ಕ್ರಿಯೆ ನಿರ್ಣಾಯಕವಾಗಿವೆ. ನೀರಿಲ್ಲದೆ, ನಾವು ಏನೂ ಅಲ್ಲ. ನೀರು ಮೂಲಭೂತ ಮಾನವ ಹಕ್ಕು, ಕೃಷಿ ಮತ್ತು ಜೀವನಕ್ಕೆ ಅತ್ಯಗತ್ಯ. ದುರದೃಷ್ಟವಶಾತ್, ಯುಎನ್‌ನ ಎಸ್‌ಡಿಜಿ ವರದಿಯ ಪ್ರಕಾರ, ನಿರ್ದಿಷ್ಟವಾಗಿ ಗುರಿ 6 ರ ಪ್ರಕಾರ, 2.2 ಶತಕೋಟಿ ಜನರಿಗೆ ಕುಡಿಯಲು ಯೋಗ್ಯವಾದ ನೀರಿಲ್ಲ.

ಇಂದಿನ ವಿಷಯ ಹಿಮನದಿಗಳ ರಕ್ಷಣೆ. ಹಿಮನದಿಗಳು ಕಣ್ಮರೆಯಾದರೆ, ಭಾರತದ ಮೇಲೆ ತೀವ್ರ ಪರಿಣಾಮಗಳು ಸೇರಿದಂತೆ ಹಲವಾರು ಸಮಸ್ಯೆಗಳು ಉದ್ಭವಿಸುತ್ತವೆ.

ಈ ಹಿಂದೆ, ನಾವು ಹಸಿರುಮನೆ ಅನಿಲಗಳು ಮತ್ತು ಹವಾಮಾನ ಕ್ರಮದ ಬಗ್ಗೆ ಚರ್ಚಿಸಿದ್ದೇವೆ. ಹವಾಮಾನ ಬದಲಾವಣೆಯಿಂದಾಗಿ 2 ಶತಕೋಟಿ ಜನರು ನೀರಿನ ಕೊರತೆಯನ್ನು ಎದುರಿಸುತ್ತಾರೆ ಎಂಬುದನ್ನು ಗುರುತಿಸುವುದು ಅತ್ಯಗತ್ಯ, ಅದು ಲಿಂಗ ಪಕ್ಷಪಾತ ಮತ್ತು ಗಮನಾರ್ಹ ಆರೋಗ್ಯದ ಪರಿಣಾಮಗಳನ್ನು ಸಹ ಹೊಂದಿದೆ.

ಹಾಗಾದರೆ, ಯಾರು ಬದಲಾವಣೆಯನ್ನು ತರಬಹುದು ಯುವಕರು. ಭಾರತದಲ್ಲಿ ಹೆಚ್ಚಿನ ಯುವ ಜನಸಂಖ್ಯೆ ಇದೆ, ಮತ್ತು ನೀವು ಈ ಸಮಸ್ಯೆಗಳ ಬಗ್ಗೆ ತಿಳಿದಿರುವುದು ಬಹಳ ಮುಖ್ಯ. ಹವಾಮಾನ ಬದಲಾವಣೆಯು ಯುವಜನರ ಮೇಲೆ ಅಸಮಾನವಾಗಿ ಪರಿಣಾಮ ಬೀರುತ್ತದೆ, ಆದ್ದರಿಂದ ನೀವು ಈ ಸಮಸ್ಯೆಯ ಮಾಲೀಕತ್ವವನ್ನು ತೆಗೆದುಕೊಳ್ಳುವುದು ಅತ್ಯಗತ್ಯ.

ನಿಮ್ಮ ಆಹಾರ ಪದ್ಧತಿಯನ್ನು ಬದಲಾಯಿಸುವುದರೊಂದಿಗೆ ಪ್ರಾರಂಭಿಸಿ, ಪ್ರಜ್ಞಾಪೂರ್ವಕ ಆಯ್ಕೆಗಳನ್ನು ಮಾಡಲು ನಾವು ನಿಮ್ಮನ್ನು ಒತ್ತಾಯಿಸುತ್ತೇವೆ. ಈ ಸರಳ ಕ್ರಿಯೆಯು ಹವಾಮಾನ ಬದಲಾವಣೆಯ ಮೇಲೆ ಗಮನಾರ್ಹವಾಗಿ ಪರಿಣಾಮ ಬೀರುತ್ತದೆ. ಬದಲಾವಣೆಯ ಏಜೆಂಟ್‌ಗಳಾಗಲು ನಿಮ್ಮನ್ನು ಪ್ರೇರೇಪಿಸುತ್ತಿದ್ದೇವೆ. ಪ್ರಮುಖವಾಗಿ ಜಲ ಸಂರಕ್ಷಣೆ ಮಾಡುವ ವಿಧಾನಗಳು ನೀರನ್ನು ಕಡಿಮೆ ಬಳಸಲು ಇರುವ ಮಾರ್ಗೋಪಾಯಗಳು ಅಂತರ್ಜಲ ಸಂರಕ್ಷಣೆ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಕಾರ್ಯಕ್ರಮದಲ್ಲಿ ಡಾಕ್ಟರ್.ಷಣ್ಮುಖ, ಶೈಕ್ಷಣಿಕ ಸಲಹೆಗಾರರು, ಡಾಕ್ಟರ್ ವಿಶ್ವನಾಥ್ ಹೆಚ್. ಎನ್. ಸಂಚಾಲಕರು ಹಸಿರು ಸಂಘ, ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಕೆಐಎಡಿಬಿಯ ಜಮೀನು ಸ್ವಾಧೀನ ಪ್ರಕ್ರಿಯೆ ಕೈ ಬಿಡಲಿ



ಶಿಡ್ಲಘಟ್ಟ: ಫಲವತ್ತಾದ ಭೂಮಿ ಈ ಭಾಗದಲ್ಲಿ ಹೆಚ್ಚಾಗಿದ್ದು ಯಾವುದೇ ಕಾರಣಕ್ಕು ಭೂಮಿಯನ್ನು ನಾವು ಬಿಟ್ಟು ಕೊಡುವುದಿಲ್ಲ ಹಾಗಾಗಿ ಕೈಗಾರಿಕೆಗಳ ಸ್ಥಾಪನೆಗಾಗಿ ಕೆಐಎಡಿಬಿಯು ಜಮೀನು ಸ್ವಾಧೀನ ಪ್ರಕ್ರಿಯೆಯನ್ನು ತಕ್ಷಣವೇ ಕೈ ಬಿಡಬೇಕೆಂದು ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ನಡಿಪಿನಾಯಕನಹಳ್ಳಿ ಎನ್.ಎ.ವೆಂಕಟೇಶ್ ಸರ್ಕಾರಕ್ಕೆ ಒತ್ತಾಯಿಸಿದರು.

ತಾಲ್ಲೂಕಿನ ಜಂಗಮಕೋಟೆ ಹೋಬಳಿಯ 13 ಗ್ರಾಮಗಳಲ್ಲಿ ಒಟ್ಟು 2823 ಎಕರೆಯ ಫಲವತ್ತಾದ ಭೂಮಿಯನ್ನು ಕೈಗಾರಿಕೆಗಳ ಸ್ಥಾಪನೆಗಾಗಿ ಕೆಐಎಡಿಬಿ ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದ್ದು ಇದರ ವಿರುದ್ಧ ಸ್ಥಳೀಯ ರೈತರು ನಗರದ ಪ್ರವಾಸಿ ಮಂದಿರದಲ್ಲಿ ನಡೆಸಿದ ಸಭೆಯಲ್ಲಿ ಅವರು ಮಾತನಾಡಿದರು.

ಜಂಗಮಕೋಟೆ ಹೋಬಳಿಯಲ್ಲಿ ಕೈಗಾರಿಕೆಗಳಿಗಾಗಿ ಭೂಸ್ವಾಧೀನ ಪ್ರಕ್ರಿಯೆಯನ್ನು ದಲಿತ ಸಂಘರ್ಷ ಸಮಿತಿಯು ತೀವ್ರವಾಗಿ ವಿರೋಧಿಸುತ್ತದೆ ಅಈ ಹೋರಾಟಕ್ಕೆ ಸಂಪೂರ್ಣ ಬೆಂಬಲ ನೀಡಲಾಗುವುದು ಎಂದು ಘೋಷಿಸಿದರು.

ಜಿಲ್ಲಾ ಉಸ್ತುವಾರಿ ಮತ್ತು ಜಾಗೃತಿ ಸಮಿತಿ ಸದಸ್ಯ ಮೇಲೂರು ಮಂಜುನಾಥ್ ಮಾತನಾಡಿ ,ಅನ್ನ ಬೆಳೆಯುವ ರೈತ ಭೂಮಿಯನ್ನು ನೆಚ್ಚಿಕೊಂಡಿದ್ದು ಭೂಮಿಯನ್ನು ಬಿಟ್ಟು ಬದುಕುವುದು ಅವರ ಪಾಲಿಗೆ ಅಸಾಧ್ಯ. ಹಾಗಾಗಿ ಕೈಗಾರಿಕೆಗಳ ಸ್ಥಾಪನೆಗಾಗಿ ಕೆಐಎಡಿಬಿಯು ಜಮೀನು ಸ್ವಾಧೀನ ಪ್ರಕ್ರಿಯೆಯನ್ನು ತಕ್ಷಣವೇ ನಿಲ್ಲಿಸಬೇಕು ಎಂದು ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ರೈತರು ಕೈಗಾರಿಕೆಗಳ ಸ್ಥಾಪನೆಯ ವಿರೋಧಿಗಳಲ್ಲ, ಆದರೆ ಕೃಷಿಗೆ ಯೋಗ್ಯವಾದ ಭೂಮಿಯನ್ನು ಕೈಗಾರಿಕೆಗಳಿಗಾಗಿ ಸ್ವಾಧೀನಪಡಿಸಿಕೊಳ್ಳುವುದನ್ನು ತೀವ್ರವಾಗಿ ವಿರೋಧಿಸುತ್ತೇವೆ ಎಂದು ಹೇಳಿದರು. ನಮ್ಮ ದಲಿತ ಸಂಘಟನೆಗಳ ಹೋರಾಟದ ಮೂಲ ಅಂಶವೇ ಭೂಮಿಯ ಸುತ್ತ ಹಿಮ್ಮೆಟ್ಟಿದೆ. 'ಹೆಂಡ ಬೇಡ, ಭೂಮಿ ಬೇಕು' ಎಂಬ। ಘೋಷಣೆ, ನಮ್ಮ ಜೀವನದ ಮೂಲ ಉದ್ದೇಶ ಭೂಮಿಯಿಲ್ಲದೆ ರೈತರ ಬದುಕನ್ನು ಊಹಿಸಲು ಸಾಧ್ಯವಿಲ್ಲ. ಆದ್ದರಿಂದ ನಾವು ಯಾವುದೇ ಕಾರಣಕ್ಕೂ ಭೂಮಿಯನ್ನು ಕೈಬಿಡುವುದಿಲ್ಲ ಎಂದರು.

ಕೆಐಎಡಿಬಿ ಭೂ ಹೋರಾಟ ಸಮಿತಿಯ ಅಧ್ಯಕ್ಷ ಹೀರೆಬಲ್ಲ ಕೃಷ್ಣಪ್ಪ, ಮಾತನಾಡಿ, ನಾವು ನಡೆಸುತ್ತಿರುವ ಹೋರಾಟಕ್ಕೆ ಸ್ಥಳೀಯ ಶಾಸಕರು ಮತ್ತು ಉಸ್ತುವಾರಿ ಸಚಿವರು ಬೆಂಬಲ ನೀಡಬೇಕು ರೈತರ ಪರ ನಿಲುವು ಸ್ಪಷ್ಟಪಡಿಸಿ, ನಮ್ಮ ಹೋರಾಟಗಳ ಬಗ್ಗೆ ಸರ್ಕಾರದ ಗಮನಕ್ಕೆ ತರಬೇಕೆಂದು ಒತ್ತಾಯಿಸಿದರು.

70–80% ರೈತರು ತಮ್ಮ ಭೂಮಿಯನ್ನು ನೀಡಲು ನಿರಾಕರಿಸುತ್ತಿದ್ದಾರೆ ಆದರೆ 10–20% ರೈತರ ಒಪ್ಪಿಗೆ ಆಧರಿಸಿ ಸರ್ಕಾರ ಭೂಸ್ವಾಧೀನ ಪ್ರಕ್ರಿಯೆ ಮುಂದುವರಿಸುತ್ತಿರುವುದು ನ್ಯಾಯಸಮ್ಮತವಲ್ಲ, ಸಚಿವರಾ ಡಾ.ಎಂ.ಸಿ.ಸುಧಾಕರ್ ಮತ್ತು ಕೆಐಎಡಿಬಿಯ ಹಿರಿಯ ಅಧಿಕಾರಿಗಳು ಜಂಗಮಕೋಟೆ ಕ್ರಾಸ್‌ನಲ್ಲಿ ರೈತರ ಸಭೆ ನಡೆಸಿ ಅಭಿಪ್ರಾಯ ಸಂಗ್ರಹಿಸುವ ಭರವಸೆ ನೀಡಿದ್ದರು ಆದರೆ ಇದುವರೆಗೆ ಸಭೆ ನಡೆಸಲಾಗಿಲ್ಲ ಅದಕ್ಕೆ ಬದಲಾಗಿ, ತೆರೆಮರೆಯಲ್ಲಿ ಭೂಸ್ವಾಧೀನ ಪ್ರಕ್ರಿಯೆಯನ್ನು ಮುಂದುವರಿಸುತ್ತಿದ್ದಾರೆ ಎಂದು ನೇರವಾಗಿ ಆರೋಪಿಸಿ, ಸಕಾಲದಲ್ಲಿ ರೈತರ ಸಭೆ ನಡೆಸಿ ಬಹುಮತದ ಆಧಾರದ ಮೇಲೆ ನಿರ್ಧಾರ ಕೈಗೊಳ್ಳಬೇಕೆಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ನಡಿಪಿನಾಯಕಹಳ್ಳಿ ಎನ್. ಎಂ. ಅಜಿತ್‌ಕುಮಾರ್, ಎಂ.ಕೆ.ದೇವರಾಜ್, ಹೊಂಬೇಗೌಡ, ಯಣ್ಣಂಗೂರು ಅಶ್ವತ್ಥ ನಾರಾಯಣ ಗೌಡ, ನಾಗನರಸಿಂಹ, ಮುತ್ತೂರು ವೆಂಕಟೇಶ್, ತೊಟ್ಲಿಗಾನಹಳ್ಳಿ ಕೃಷ್ಣಪ್ಪ ಲೋಕೇಶ್ ಸೇರಿದಂತೆ 200ಕ್ಕೂ ಹೆಚ್ಚು ರೈತರು ಪಾಲ್ಗೊಂಡಿದ್ದರು.

# ಸಮಗ್ರ ಕೃಷಿ ಅಳವಡಿಕೆಯಿಂದ ರೈತರ ಆರ್ಥಿಕ ಅಭಿವೃದ್ಧಿ ಸಾಧ್ಯ



**ನಾಗಮಂಗಲ:** ರೈತರು ಸಮಗ್ರ ಕೃಷಿ ಮಾಡುವುದರಿಂದ ರೈತರು ತಮ್ಮ ಆರ್ಥಿಕ ಅಭಿವೃದ್ಧಿಯ ಬೆಳವಣಿಗೆಸಾಧ್ಯ ಎಂದು ಕೃಷಿ ಸಚಿವರಾದ ಚೆಲುವರಾಯಸ್ವಾಮಿ ಅವರು ಕರೆ ನೀಡಿದರು.

ಅವರು ನಾಗಮಂಗಲ ತಾಲ್ಲೂಕು ಅಂಬೇಡ್ಕರ್ ಭವನದಲ್ಲಿ ವಿಜಯ ಕರ್ನಾಟಕ ದಿನಪತ್ರಿಕೆ ಏರ್ಪಡಿಸಿದ್ದ ವಿಕೆ ಸೂಪರ್ ಸ್ಟಾರ್ ರೈತ ಪ್ರಶಸ್ತಿ ಏಳನೇ ಆವೃತ್ತಿಯ ಪ್ರಧಾನ ಸಮಾರಂಭದಲ್ಲಿ ಉದ್ಘಾಟನೆ ಮಾಡಿ ಮಾತನಾಡಿದರು.

ರೈತರು ಆಧುನಿಕ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಹಾಗೂ ಕೃಷಿ ಇಲಾಖೆಯ ಕೃಷಿ ಪ್ರಚಾರ ಕೈಗೊಂಡ ಸಂದರ್ಭದಲ್ಲಿ ರೈತರು ಭಾಗವಹಿಸಿ ಕೃಷಿ ಆರ್ಥಿಕ ಪದ್ಧತಿಯ ಅನುಕರಣೆ ಮಾಡಲು ಹಾಗೂ ವಿಜಯ ಕರ್ನಾಟಕ ಪತ್ರಿಕೆ ದಿನಪತ್ರಿಕೆಗಳಲ್ಲಿ ರೈತರಿಗೆ ಪೂರಕವಾದ ಕೃಷಿ ಪದ್ಧತಿಯ ಮಾದರಿಗಳನ್ನು ತಿಳಿಸುತ್ತಾ ಕೇವಲ ಪತ್ರಿಕ ಕ್ಷೇತ್ರವಲ್ಲದೆ ಕೃಷಿಗೆ ಪೂರಕದ ವ್ಯವಸ್ಥೆಗಳನ್ನು ಮಾಡುತ್ತಾ ಬಂದಿರುವುದು ಶ್ಲಾಘನೀಯ ವಾಗಿದೆ ಎಂದು ಈ ಸಂದರ್ಭದಲ್ಲಿ ತಿಳಿಸಿದರು.

ಕೃಷಿ ಬೆಳವಣಿಗೆ ಪೂರಕವಾದ ಅಧ್ಯಯನ ಪ್ರಚಾರ ಮಾಡುತ್ತಾ ಪತ್ರಿಕಾ ಬರಹಗಳ ಅಧ್ಯಯನದೊಂದಿಗೆ ಕೃಷಿ ಕ್ಷೇತ್ರಕ್ಕೆ ಇಂದಿನ ಯುವ ಜನಾಂಗ ಹೆಚ್ಚು ಪ್ರೇರಣೆಗೆ ತೊಡಗಿಸಿಕೊಳ್ಳುವ ಮುಖಾಂತರ ಸಮಗ್ರ ಕೃಷಿ ಬೇಸಾಯ ಮತ್ತು ಆಧುನಿಕ ಯಂತ್ರೋಪಕರಣಗಳನ್ನು ಬಳಸಿಕೊಂಡು ಕೃಷಿ ಕ್ಷೇತ್ರದಲ್ಲಿ ಸಾಧನೆ ಮಾಡುವಂತೆ ಈ ಸಂದರ್ಭದಲ್ಲಿ ತಿಳಿಸಿದರು.

ವಿಕೆ ಸೂಪರ್ ಸ್ಟಾರ್ ರೈತ 2024 –25ನೇ ಮಂಡ್ಯ ಜಿಲ್ಲಾ ಮಟ್ಟದ ಪ್ರಶಸ್ತಿಗೆ ತಾಲೂಕು ಕೇಂದ್ರಗಳ ರೈತರನ್ನು ಗುರುತಿಸಿ ವಿಕೆ ಸೂಪರ್ ಸ್ಟಾರ್ ರೈತ ಪ್ರಶಸ್ತಿಯನ್ನು ಪ್ರಧಾನ ಮಾಡಲಾಯಿತು.

ಇದೇ ಸಂದರ್ಭದಲ್ಲಿ ರೈತರೊಂದಿಗೆ ಸಂವಾದ ಕಾರ್ಯಕ್ರಮ ತೋಟಗಾರಿಕೆ ಇಲಾಖೆ ನಿರ್ದೇಶಕರಾದ ಶ್ರೀಮತಿ ಕೆ ಎನ್ ರೂಪಶ್ರೀ ನಡೆಸಿಕೊಟ್ಟಿದ್ದರು.

ಸಮಾರಂಭದಲ್ಲಿ ಐಜಿ ಚಂದ್ರಶೇಖರ್.ಕೃಷಿ ವಿಶ್ವವಿದ್ಯಾನಿಲಯ ಕರ್ನಾಟಕ ಗಾಂಧಿ ಕೃಷಿ ವಿಜ್ಞಾನ ಕೇಂದ್ರ ಆಡಳಿತ ಮಂಡಳಿಯ ನಿರ್ದೇಶಕರಾದ ದಿನೇಶ್ ಜವರನ ಹಳ್ಳಿ ಹಾಗೂ ಕರ್ನಾಟಕ ರಾಜ್ಯ ರೈತ ಉತ್ಪಾದಕರ ಆಡಳಿತ ಮಂಡಳಿಯ ನಿರ್ದೇಶಕರಾದ ರಾಜೇಶ್ ಉಪಸ್ಥಿತರಿದ್ದರು.

ವಿಜಯ ಕರ್ನಾಟಕ ಪತ್ರಿಕೆ ಸಂಪಾದಕ ರಮೇಶ್ ಉತ್ತಪ್ಪ ರವರು ಪ್ರಾಸ್ತಾವಿಕ ಭಾಷಣ ನೆರವೇರಿಸಿದರು ಜಿಲ್ಲಾ ವರದಿಗಾರರಾದ ನವೀನ್ ಕಾರ್ಯಕ್ರಮ ನಿರೂಪಿಸಿ ತಾಲ್ಲೂಕು ವರದಿಗಾರಾದ ಸಿ.ಎನ್ ಮಂಜುನಾಥ್ ಸ್ವಾಗತಿಸಿದರು

# ಸಾರ್ವಜನಿಕ ಸೇವೆಯ ಮೂಲಕ ಹುಟ್ಟುಹಬ್ಬ ಆಚರಣೆ

**ಕೊರಟಗೆರೆ:** ಹುಟ್ಟುಹಬ್ಬಗಳನ್ನು ಸಾರ್ವಜನಿಕ ಸೇವೆಯನ್ನಾಗಿ ಆಚರಿಸಿದರೆ ಅರ್ಥಪೂರ್ಣವಾಗಿರುತ್ತದೆಎಂದು ಹಿರಿಯ ಕಾಂಗ್ರೆಸ್ ಮುಖಂಡ ಮಹಾಲಿಂಗಪ್ಪ ತಿಳಿಸಿದರು.

ಅವರುತಮ್ಮ 56 ನೇ ಹುಟ್ಟು ಹಬ್ಬದ ಪ್ರಯುಕ್ತಕೊರಟಗೆರೆ ಪಟ್ಟಣದ ಸಾರ್ವಜನಿಕಆಸ್ಪತ್ರೆಯಲ್ಲಿ ಒಳ ರೋಗಿಗಳಿಗೆ ಹಣ್ಣು, ಬ್ರೆಡ್, ಹಾಗೂ ಕೋಳಾಲ ಹೋಬಳಿಯ ಹೊಸಕೋಟೆಗ್ರಾಮದ ಸರ್ಕಾರಿ ಹಿರಿಯ ಪ್ರಾರ್ಥಮಿಕ ಪಾಠಶಾಲೆಯ ಮಕ್ಕಳಿಗೆ ನೋಟ್ ಪುಸ್ತಕ ಹಾಗೂ ಪಠ್ಯದ ಸಲಕರಣೆಗಳನ್ನು ವಿತರಿಸಿ ಮಾತನಾಡಿ ನನ್ನ ಹುಟ್ಟು ಹಬ್ಬವನ್ನು ನಮ್ಮ ಸ್ನೇಹಿತರಜೊತೆಗೂಡಿ ಸಾರ್ವಜನಿಕ ಸೇವೆಯನ್ನಾಗಿ ಮಾಡಿಕೊಂಡಿರುವುದು ಸಂತೋಷತಂದಿದೆ, ನಮ್ಮಕೊರಟಗೆರೆ ಪಟ್ಟಣದ ಬಸ್ಟಾಂಡ್ ಗೆಳೆಯರ ಬಳಗದ ಬೇಡಿಕೆಯಂತೆ ಸಾರ್ವಜನಿಕರಿಗೆಕುಡಿಯುವ ನೀರಿನಘಟಕವನ್ನು ನಮ್ಮ ನಾಯಕರಾದ ಗೃಹ ಸಚಿವರಾದ ಡಾ.ಜಿ.ಪರಮೇಶ್ವರ್‌ರವರಿಂದ ಹಾಕಿಸಿಕೊಡಲಾಗುವುದು ಮುಂದಿನ ದಿನಗಳಲ್ಲೂ ಸಹ ಸಾರ್ವಜನಿಕ ಸೇವೆಗೆ ಬದ್ದನಾಗಿರುತ್ತೇನೆ.

ಮಾಜಿಜಿಲ್ಲಾ ಪಂಚಾಯಿತಿಅಧ್ಯಕ್ಷೆಪ್ರೇಮಮಹಾಲಿಂಗಪ್ಪ ಮಾತನಾಡಿ ಹಲವು ವರ್ಷಗಳಿಂದ ನಮ್ಮಕುಟುಂಬದವರು ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡಿದ್ದೇವೆ ಸರ್ಕಾರಿ ಶಾಲಾ ಮಕ್ಕಳಿಗೆ ಜನಪ್ರತಿನಿಧಿಗಳಾದ ನಾವುಗಳು ಈ ರೀತಿಯ ಕಾರಣಗಳನ್ನು ಇಟ್ಟುಕೊಂಡುಸೇವೆ ಮಾಡಿದರೆಗ್ರಾಮೀಣ ಭಾಗದ ಮಕ್ಕಳಿಗೆ ನೆರವಾಗುತ್ತದೆಎಂದರು.

ಕಾಂಗ್ರೆಸ್ ಪಕ್ಷದ ಮುಖಂಡಕಾರ್‌ಮಹೇಶ್ ಮಾತನಾಡಿಇಂದು ಮಹಾಲಿಂಗಪ್ಪಅಭಿಮಾನಿ ಬಳಗದಿಂದ ಅವರ ಹುಟ್ಟು ಹಬ್ಬದ ಪ್ರಯುಕ್ತಕೊರಟಗೆರೆ ಬಸ್ಟಾಂಡ್‌ನಲ್ಲಿ ಬಡವರಿಗೆ ಸಹಿ ಹಂಚಿಸಲಾಗಿದ್ದು, ಬಿಸಿಲು ಹೆಚ್ಚಾದರಿಂದ ಮಜ್ಜಿಗೆಯನ್ನು ವಿತರಿಸಲಾಗಿದೆ, ಮಹಾಲಿಂಗಪ್ಪನವರು ಹಲವು ವರ್ಷಗಳಿಂದ ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ ಸೇವೆಯನ್ನು ಮಾಡಿಕೊಂಡು ಬರುತ್ತಿದ್ದಾರೆಅವರು ಮುಂದೆ ಡಾ.ಜಿ.ಪರಮೇಶ್ವರರವರ ಆಶೀರ್ವಾ ದದಿಂದ ಯಾವುದಾದರುಕ್ಷೇತ್ರದಿಂದ ಶಾಸಕರಾಗಲಿ ಎನ್ನವುದು ನಮ್ಮಗಳ ಆಸೆ ಎಂದರು.ಈ ಸಂದರ್ಭದಲ್ಲಿ ವೈದ್ಯಾಧಿಕಾರಿಡಾ.ಪುರುಷೋತ್ತಮ್‌ನಾಯಕ್ ಕಸಬಾ ವಿ.ಎಸ್. ಎಸ್‌ಎನ್. ಆದ್ಯಕ್ಷ ಕೆ.ಎಸ್.ವಿನಯಕುಮಾರ್, ಟಿ.ಎ.ಪಿ.ಸಿ.ಎಂ. ಎಸ್ ಅದ್ಯಕ್ಷ ಜಿ.ಎಂ.ಶಿವಾನಂದ್, ಮುಖಂಡರಾದಯೋಗೀಶ್, ಕುದುರೆಸತ್ಯನಾರಾಯಣ್. ಸೈಯದ್‌ಸೈಪುಲ್ಲಾ, ಸಿದ್ದಲಿಂಗಯ್ಯ, ನೇಗಲಾಲರಮೇಶ್, ಚಿಕ್ಕನಾರಾಯಣ್, ನಾಗೇಶ್, ಶಿವರಾಜ, ಅನಿಲ್, ಬಿದರೇಶ್ ಸೇರಿದಂತೆಇತರರು ಹಾಜರಿದ್ದರು.



# ಸರ್ಕಾರದ ಯೋಜನೆಗಳನ್ನು ಸದ್ಬಳಕೆ ಮಾಡಿಕೊಳ್ಳಿ




**ನಾಗಮಂಗಲ:** ಸರ್ಕಾರವು ವಿವಿಧ ಯೋಜನೆಗಳನ್ನು ಜಾರಿಗೊಳಿಸುತ್ತಿದ್ದು ಆ ಯೋಜನೆಗಳನ್ನು ಸದುಪಯೋಗ ಮಾಡಿಕೊಳ್ಳುವಂತೆ ಸಚಿವರಾದ ಚೆಲುವರಾಯ ಸ್ವಾಮಿಯವರು ತಿಳಿಸಿದ್ದಾರೆ.

ಅವರು ನಾಗಮಂಗಲ ಕಾಂಗ್ರೆಸ್ ಕಚೇರಿಯ ಮುಂಬಾಗದಲ್ಲಿ ಅಂಗವಿಕಲರಿಗೆ 2024 –25 ನೇ ಸಾಲಿನ ಶಾಸಕರ ಪ್ರದೇಶ ಅಭಿವೃದ್ಧಿ ನಿಧಿಯಿಂದ ತ್ರಿಚಕ್ರ ವಾಹನ ಸಮಾರಂಭದಲ್ಲಿ ಭಾಗವಹಿಸಿ ಸುಮಾರು 25 ಫಲಾನುಭವಿಗಳಿಗೆ ವಾಹನ ವಿತರಣೆ ಮಾಡುತ್ತ ಮಾತನಾಡಿದರು.

ಅಂಗವಿಕಲರು ದಿನನಿತ್ಯದ ತಮ್ಮ ವ್ಯವಹಾರಿಕ ಕಾರ್ಯನಿಮಿತ್ತ ಕೆಲಸಗಳಿಗೆ ತ್ರಿಚಕ್ರ ವಾಹನ ಬಳಸುವ ಮುಖಾಂತರ ಸರ್ಕಾರದ ಇಂತಹ ಸೌವಲತ್ತುಗಳನ್ನು ಸದುಪಯೋಗ ಮಾಡಿಕೊಂಡು ಇತರೆ ಚಟುವಟಿಕೆಗಳಲ್ಲಿ ಈ ವಾಹನಗಳನ್ನು ಬಳಸದಂತೆ ತಮ್ಮ ಸ್ವಂತ ವಾಹನಗಳಾಗಿ ಬಳಸಿಕೊಳ್ಳುವ ಮುಖಾಂತರ ಸರ್ಕಾರದ ಯೋಜನೆಗಳನ್ನು ಪಡೆದು ಅನುಕೂಲ ಮಾಡಿಕೊಳ್ಳುವಂತೆ ಈ ಸಂದರ್ಭದಲ್ಲಿ ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ರಾಜೇಶ್ ಕೃಷಿ ವಿವಿ ಆಡಳಿತ ಮಂಡಳಿ ನಿರ್ದೇಶಕರಾದ ದಿನೇಶ್. ಎಚ್ ಟಿ ಕೃಷ್ಣೆ ಗೌಡ. ಪುರಸಭಾ ಅಧ್ಯಕ್ಷರು ಗಣ್ಯರು ಕಾಂಗ್ರೆಸ್ ಮುಖಂಡರುಗಳು ಹಾಜರಿದ್ದರು

# ಚರ್ಚೆಯಿಲ್ಲದೆ ಮಸೂದೆ ಅಂಗೀಕಾರವಾಗಿರುವುದು ಖಂಡನೀಯ

**ದೇವನಹಳ್ಳಿ:** ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇಕಡ. 4ರಷ್ಟು ಮೀಸಲಾತಿ ಕಲ್ಪಿಸುವ ಕರ್ನಾಟಕ ಸರ್ಕಾರದ ಕ್ರಮ ಮತ್ತು ಮೀಸಲಾತಿ ನೀಡುವ ಮಸೂದೆ ಯಾವುದೇ ಚರ್ಚೆ ಇಲ್ಲದೆ ವಿಧಾನಸಭೆಯಲ್ಲಿ ಅಂಗೀಕಾರವಾಗಿರುವುದು ಖಂಡನೀಯವಾದದು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ರಾಮಕೃಷ್ಣಪ್ಪ ಆಕ್ರೋಶ ವ್ಯಕ್ತಪಡಿಸಿದರು.




ತಾಲ್ಲೂಕಿನ ಬೀರಸಂದ್ರ ಬಳಿಯ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಬಿಜೆಪಿ ಪಕ್ಷದ ವತಿಯಿಂದ ಸರ್ಕಾರಿ ಗುತ್ತಿಗೆಗಳಲ್ಲಿ ಮುಸ್ಲಿಮರಿಗೆ ಶೇ.4 ಮೀಸಲಾತಿ ನೀಡುವ ಮಸೂದೆ ಯಾವುದೇ ಚರ್ಚೆ ಇಲ್ಲದೆ ವಿಧಾನಸಭೆಯಲ್ಲಿ ಅಂಗೀಕಾರ ಮತ್ತು ಬೆಲೆ ಏರಿಕೆಯನ್ನು ನಿಯಂತ್ರಿಸದ ಹಾಗೂ 18 ಶಾಸಕರ ಅಮಾನತ್ತು ಮಾಡಿದ ಕಾಂಗ್ರೆಸ್ ನಿಲುವುಗಳನ್ನು ಖಂಡಿಸಿ ಬೃಹತ್ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಕಚೇರಿಯ ತಹಸಿಲ್ದಾರ್ ರಾಜೀವ್ ಸುಲೋಚನಾ ರವರಿಗೆ ಮನವಿ ಪತ್ರ ಸಲ್ಲಿಸಿ ಮಾತನಾಡಿದರು.

ವಿಧಾನಸಭೆಯಲ್ಲಿ 18 ಬಿಜೆಪಿ ಶಾಸಕರ ಅಮಾನತು ಬೆನ್ನಲ್ಲೇ ಪ್ರತಿಪಕ್ಷ ಬಿಜೆಪಿ ಪ್ರತಿಭಟನೆ ನಡುವೆಯಲ್ಲಿ ಮಸೂದೆ ಅಂಗೀಕಾರ ಸಮಂಜಸವಲ್ಲ,ಈ ಮಸೂದೆ ಅಸಂವಿಧಾನಿಕವಾದದ್ದು ಎಂದು ವಿಪಕ್ಷ ನಾಯಕ ಆರ್. ಅಶೋಕ್ ವಿರೋಧ ವ್ಯಕ್ತಪಡಿಸಿದರು. ಪ್ರತಿಪಕ್ಷ ಸದಸ್ಯರ ಪ್ರತಿಭಟನೆ, ವಿರೋಧ, ಗದ್ದಲದ ನಡುವೆ ಮುಸ್ಲಿಂರಿಗೆ 2 ಕೋಟಿ ರೂ. ವರೆಗಿನ ಸರ್ಕಾರಿ ಗುತ್ತಿಗೆ ಕಾಮಗಾರಿಗಳು ಹಾಗೂ 1 ಕೋಟಿ ವರೆಗೆ ಸರಕು ಮತ್ತು ಸೇವೆಗಳ ಪೂರೈಕೆಯ ಟೆಂಡರ್‌ನಲ್ಲಿ ಮೀಸಲಾತಿ ಕಲ್ಪಿಸುವ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ ( ತಿದ್ದುಪಡಿ) ವಿಧೇಯಕ ವಿಧಾನಸಭೆಯಲ್ಲಿ ಅಂಗೀಕಾರವಾಯಿತು ಹಾಗಾಗಿ ಇದನ್ನು ಹಿಂದಕ್ಕೆ ಪಡೆಯುವವರೆಗೂ ಪ್ರಶ್ನಿಸುವುದು ಸೇರಿದಂತೆ ಎಲ್ಲಾ ಹಂತಗಳಲ್ಲಿ ಹೋರಾಟ ಮಾಡುವುದಾಗಿ ಎಚ್ಚರಿಕೆ ನೀಡಿದರು.

ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎಚ್ .ಎಂ ರವಿಕುಮಾರ್ ಮಾತನಾಡಿ, ಕಾಂಗ್ರೆಸ್ ಮತ್ತೊಮ್ಮೆ ತನ್ನ ಹಳೇ ಚಾಳಿಯನ್ನು ಮುಂದುವರೆಸಿದೆ. ಸರಕಾರಿ ಕಾಮಗಾರಿಗಳಲ್ಲಿ ಶೇ 4ರಷ್ಟು ಮೀಸಲಾತಿ ಮುಸ್ಲಿಂರಿಗೆ ನೀಡುವುದು, ಹೊರದೇಶಕ್ಕೆ ವಿದ್ಯಾಭ್ಯಾಸಕ್ಕೆ ಹೋಗುವ ಮುಸ್ಲಿಂ ವಿದ್ಯಾರ್ಥಿಗಳಿಗೆ ನೀಡುವ ಸಹಾಯಧನವನ್ನು 20 ಲಕ್ಷ ರೂಗಳಿಂದ 30 ಲಕ್ಷ ರೂಗಳಿಗೆ ಹೆಚ್ಚಳ ಮಾಡಿರುವುದು, ಶಾದಿ ಭಾಗ್ಯಕ್ಕೆ ಹಣ ನೀಡುವ ನಿರ್ಧಾರ ತೆಗೆದುಕೊಂಡಿರುವುದು ಮತ್ತು ಮುಸ್ಲಿಂ ಹೆಣ್ಣುಮಕ್ಕಳಿಗೆ ಮಾತ್ರ ಆತ್ಮರಕ್ಷಣೆಗಾಗಿ ವಿಶೇಷ ಅನುದಾನವನ್ನು ನೀಡುವುದು, ಕಾಂಗ್ರೆಸ್‌ನ ಮತ ಓಲೈಕೆಯ ರಾಜಕಾರಣದ ಮುಂದುವರೆದ ಭಾಗವಾಗಿದೆ. ಕಾಂಗ್ರೆಸ್ ಸರಕಾರದ ನಿರ್ಧಾರವನ್ನು ಬಿಜೆಪಿ ಪಕ್ಷ ತೀವ್ರವಾಗಿ ವಿರೋಧಿಸುತ್ತದೆ ಎಂದರು.

ತಾಲ್ಲೂಕು ಅಧ್ಯಕ್ಷ ಅಂಬರೀಶ್ ಗೌಡ ಮಾತನಾಡಿ, ಸಾಮಾನ್ಯ ಜನರ ಬದುಕಿಗೆ ಬರೆ ಎಳೆಯುತ್ತಿರುವ ಕಾಂಗ್ರೆಸ್ ಸರಕಾರ, ರೈತರು ತಮ್ಮ ಜಮೀನಿಗೆ ಟ್ರಾನ್ಸ್‌ಫಾರ್ಮರ್ ಅಳವಡಿಸಿಕೊಳ್ಳುವ ವೆಚ್ಚವನ್ನು 2 ಲಕ್ಷಕ್ಕೆ ಏರಿಸಿದೆ. ಹಾಲಿನ ದರ ಏರಿಕೆ, ವಿದ್ಯುತ್ ದರ ಏರಿಕೆ, ಬಸ್ ಪ್ರಯಾಣ ದರ ಏರಿಕೆ, ಸ್ಟಾಂಪ್ ಶುಲ್ಕ ಏರಿಕೆ, ಮದ್ಯದ ದರ ಏರಿಕೆಯನ್ನು ಮಾಡಿದೆ. ದಿನೇದಿನೇ ಹೊಸ ಹೊಸ ತೆರಿಗೆಗಳನ್ನು ವಿಧಿಸಲಾಗುತ್ತಿದೆ. ಇದೆಲ್ಲದರ ಪರಿಣಾಮವಾಗಿ ಜನರ ಬದುಕು ಸಾಗಿಸಲು ಕಷ್ಟವಾಗಿದೆ. ಕೂಡಲೇ ಕಾಂಗ್ರೆಸ್ ಸರಕಾರವು ಬೆಲೆ ಏರಿಕೆಯನ್ನು ಇಳಿಕೆ ಮಾಡಲು ಕ್ರಮ ಕೈಗೊಳ್ಳಬೇಕೆಂದು ಬಿಜೆಪಿ ಅಗ್ರಹಿಸುತ್ತದೆ ಎಂದು ಹೇಳಿದರು.

ಪ್ರತಿಭಟನೆಯಲ್ಲಿ ರಾಜ್ಯದ ಗ್ಯಾರಂಟಿ ಯೋಜನೆಗಳಿದ್ದಂತೆ ಹನಿ ಟ್ರ್ಯಾಪ್ ಗ್ಯಾರಂಟಿ, ಮತ ಓಲೈಕೆಗಾಗಿ ಸೀಮಿತ ಸಮುದಾಯಗಳಿಗೆ ಬಹುಮಾನ, ಹಿಂದುಳಿದ ವರ್ಗಗಳ ಜನರಿಗೆ ಪಂಗನಾಮ ಹಾಕುವಂತಹ ಕಾಂಗ್ರೆಸ್ ಸರ್ಕಾರಕ್ಕೆ ಧಿಕ್ಕಾರವಿರಲಿ ಎಂದು ಘೋಷಣೆಗಳನ್ನು ಕೂಗಿದರು.

ಇದೇ ಸಂದರ್ಭದಲ್ಲಿ ಮಹಿಳಾ ಘಟಕದ ರಾಜ್ಯ ಉಪಾಧ್ಯಕ್ಷೆ ನಿರ್ಮಲ ,ಮಹಿಳಾ ತಾಲೂಕು ಅಧ್ಯಕ್ಷ ವಿಜಯ, ಬಿಜೆಪಿ ಪಕ್ಷದ ಮುಖಂಡರುಗಳಾದ ದೇಸು. ನಾಗರಾಜ್, ಆರ್. ಕೆ .ನಂಜೇಗೌಡ , ಪ್ರಭು, ನಾಗೇಶ್, ನಾಗವೇಣಿ, ಪುನೀತ, ನಯನ, ಸುರೇಶ್ ಆಚಾರ್, ಸಿದ್ದಲಿಂಗಪ್ಪ ,ವಿಜಯಕುಮಾರ್ ,ಭಗವಾನ್ ಹೆಗಡೆ, ರಾಘವ, ವಿಜಯಪುರ ವೆಂಕಟೇಶ್ ಸೇರಿದಂತೆ 4 ತಾಲೂಕಿನ ಪಕ್ಷದ ಮುಖಂಡರು,ಪದಾಧಿಕಾರಿಗಳು ಮತ್ತು ಕಾರ್ಯಕರ್ತರು ಭಾಗಿಯಾಗಿದ್ದರು.

# ಚಿಕ್ಕತಿರುಪತಿ:ಸಂತೆ 24.70 ಲಕ್ಷಕ್ಕೆ ಹರಾಜು




**ಮಾಲೂರು:** ತಾಲ್ಲೂಕಿನ ಚಿಕ್ಕತಿರುಪತಿಯ ಸಂತೆ ಹರಾಜು ಪ್ರಕ್ರಿಯೆ ಸೋಮವಾರ ಜರುಗಿ, ಒಟ್ಟು 24.70 ಲಕ್ಷಕ್ಕೆ ಹರಾಜು ಆಯಿತು.2025–26ನೇ ಸಾಲಿನ ಸಂತೆ ಹರಾಜಿನ ಹಕ್ಕನ್ನು ಕಲಿಕೆರೆ ನಾರಾಯಣಸ್ವಾಮಿ ಅವರು ಪಡೆದರು.

ಚಿಕ್ಕತಿರುಪತಿ ಗ್ರಾಮ ಪಂಚಾಯಿತಿ ಆವರಣದಲ್ಲಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಜಿವಿ ಮಂಜುನಾಥ್ ರವರ ನೇತೃತ್ವದಲ್ಲಿ ಹರಾಜು ಪ್ರಕ್ರಿಯೆ ನಡೆಯಿತು.

ಹರಾಜು ಪ್ರಕ್ರಿಯೆಯಲ್ಲಿ ಸುಮಾರು 10ಕ್ಕೂ ಹೆಚ್ಚು ಜನ ಠೇವಣಿ ಹಣ ಕಟ್ಟಿ ಹರಾಜಿನಲ್ಲಿ ಭಾಗವಹಿಸಿದ್ದರು. ಬೆಂಗಳೂರು, ಹೊಸಕೋಟೆ, ದೇವನಹಳ್ಳಿ, ಆನೇಕಲ್ ಮಾಲೂರು ಹಾಗೂ ನೆರೆಯ ತಮಿಳುನಾಡಿನ ಹೊಸೂರು ಸೇರಿದಂತೆ ತಾಲ್ಲೂಕಿನ ಗ್ರಾಮೀಣ ಭಾಗದ ಸುಮಾರು 250ಕ್ಕೂ ಹೆಚ್ಚು ವ್ಯಾಪಾರಸ್ಥರು, ಪ್ರತಿ ಶನಿವಾರ ನಡೆಯುವ ವಾರದ ಸಂತೆಗೆ ಬರುತ್ತಾರೆ ಇಲ್ಲಿನ ಕುರಿ ಸಂತೆ ಹೆಸರುವಾಸಿಯಾಗಿದೆ.

ವಾರದ ಸಂತೆ ಹರಾಜು ಪಡೆದವರು, ಹರಾಜು ಪ್ರಕ್ರಿಯೆಯಂತೆ ಹಣ ತುಂಬಬೇಕು. ಒಂದು ವೇಳೆ ಬಾಕಿ ಉಳಿಸಿಕೊಂಡಿದ್ದರೆ, ಅವರ ಮೇಲೆ ಕ್ರಮ ಕೈಗೊಳ್ಳಲಾಗುವುದು. ಠೇವಣಿ ಮಾಡಿರುವ ಹಣವನ್ನು ಉಳಿಸಿಕೊಂಡು, ಉಳಿದ ಹಣ ವಸೂಲಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಹರೀಂದ್ರ ಗೋಪಾಲ್ ಹೇಳಿದರು.

ಈ ಸಂದರ್ಭದಲ್ಲಿ ಚಿಕ್ಕತಿರುಪತಿ ಗ್ರಾಮ ಪಂಚಾಯಿತಿ ಅಧಿಕಾರಿಗಳಾದ ಹರೀಂದ್ರ ಗೋಪಾಲ್, ಕಾರ್ಯದರ್ಶಿ ಸ್ವರ್ಣಲತಾ, ಲೆಕ್ಕ ಸಹಾಯಕ ನಾಗರಾಜಪ್ಪ, ಗ್ರಾಮ ಪಂಚಾಯಿತಿ ಸದಸ್ಯರಾದ ಎ ಎಂ ನಾರಾಯಣಪ್ಪ, ರಾಜಶೇಖರ್, ಆಲಂಬಾಡಿ ಕುಮಾರ್, ಬಾಬು, ಸತೀಶ್ ರೆಡ್ಡಿ ಮಾಜಿ ಗ್ರಾ ಪಂ ಸದಸ್ಯ ಮೋಟಪ್ಪ, ಮುಖಂಡರಾದ ಎಕೆ ವೆಂಕಟೇಶ್, ಹರೀಶ್ (ಶೋಭಿ), ಅಂಚೆಮೂಸ್ಕೂರು ಸಂತೋಷ್ ಬಾಬು, ಚಿಕ್ಕತಿರುಪತಿಯ ಭವಾನಿ ಶಂಕರ್, ಸಂದೀಪ್, ಉಪೇಂದ್ರ, ರಂಜಿತ್ ಬಾಲಕೃಷ್ಣ, ಮುನಿವೆಂಕಟ್ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ಮಹಾಡ್ ಸತ್ಯಾಗ್ರಹ ದಲಿತ ಚಳವಳಿಯಲ್ಲಿ ಒಂದು ಹೆಗ್ಗುರುತಿನ ಘಟನೆ

**ದೇವನಹಳ್ಳಿ:** ಮಹಾಡ್ ಸತ್ಯಾಗ್ರಹವನ್ನು ದಲಿತ ಚಳುವಳಿಯ ಅಡಿಪಾಯದ ಘಟನೆ ಎಂದು ಪ್ರಶಂಶಿಸಲಾಗುತ್ತದೆ ಇದು ಜಾತಿ ವ್ಯವಸ್ಥೆ, ಸಮುದಾಯದ ಸಾಮೂಹಿಕ ತಿರಸ್ಕರಿಸುವಿಕೆಯನ್ನು ಮತ್ತು ಮಾನವ ಹಕ್ಕುಗಳ ಪ್ರತಿಪಾದನೆಯನ್ನು ಗುರುತಿಸುತ್ತದೆ ಹಾಗಾಗಿ ಮಹಾಡ್ ಸತ್ಯಾಗ್ರಹ ದಲಿತ ಚಳುವಳಿಯಲ್ಲಿ ಒಂದು ಹೆಗ್ಗುರುತಿನ ಘಟನೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿಯ (ಅಂಬೇಡ್ಕರ್ ವಾದ )ರಾಜ್ಯ ಪ್ರಧಾನ ಸಂಚಾಲಕ ಮಾವಳ್ಳಿ ಶಂಕರ್ ಹೇಳಿದರು.

ಪಟ್ಟಣದ ಡಾ.ಬಿ .ಆರ್ .ಅಂಬೇಡ್ಕರ್ ಭವನದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್ ವಾದ) ವತಿಯಿಂದ ಭಾರತದ ಅಸ್ಪೃಶ್ಯರ ಮೊದಲ ಪ್ರತಿರೋಧ ಚಳುವಳಿ, ಮಹಾಡ್ ಸತ್ಯಾಗ್ರಹದ ನೆನಪಿನಲ್ಲಿ ನಡೆದ ಶೋಷಿತರ ಸಂಘರ್ಷ ಸಮಾವೇಶದಲ್ಲಿ ಹಿರಿಯ ಹೋರಾಟಗಾರ ಎಚ್. ಕೆ. ವೆಂಕಟೇಶಪ್ಪ ಮತ್ತು ಜನಪರ ಹಾಡುಗಾರ್ತಿ ಕೊಯಿರಾ ಮುನಿನರಸಮ್ಮನವರ ವೇದಿಕೆಯಲ್ಲಿ ಮಾತನಾಡಿದರು. ಮಾರ್ಚ್ 20, 1927 ರಂದು, ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರು ಮಹಾದ್‌ನಲ್ಲಿರುವ ಕಾವ್‌ದಾರ್ ಟ್ಯಾಂಕ್‌ನಿಂದ ಕುಡಿಯುವ ನೀರಿಗಾಗಿ ಮಹಾಡ್ ಸತ್ಯಾಗ್ರಹವನ್ನು ಮುನ್ನಡೆಸಿದರು. ಇದು ದಲಿತ ಚಳವಳಿಯ "ಮೂಲ ಹೋರಾಟ", ನೀರಿಗಾಗಿ ಚಳುವಳಿ – ಮತ್ತು ಜಾತಿ ವಿನಾಶಕ್ಕಾಗಿ ಹೋರಾಟ ಆದ್ದರಿಂದ ಅವರ ಆಶಯಗಳನ್ನು ಪೂರೈಸಲು ಮೂಡನಂಬಿಕೆಗಳನ್ನು ಬದಿಗೊತ್ತಿ ಸಮಾಜದಲ್ಲಿ ಉನ್ನತ ಸ್ಥಾನವನ್ನು ಗಳಿಸಲು ಶೈಕ್ಷಣಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಮುಂದೆ ಬನ್ನಿ ಎಂದರು.

ಡಿಎಸ್‌ಎಸ್ ರಾಜ್ಯ ಸಂಘಟನಾ ಸಂಚಾಲಕ ಕಾರಹಳ್ಳಿ ಶ್ರೀನಿವಾಸ್ ಮಾತನಾಡಿ ಬಾಬಾ ಸಾಹೇಬ್ ಡಾ. ಬಿ. ಆರ್ .ಅಂಬೇಡ್ಕರ್ ಅವರು ಸಾರ್ವಜನಿಕವಾಗಿ ಕೆರೆ ನೀರನ್ನು ಮುಟ್ಟುವ ಮೂಲಕ ಇದು ಎಲ್ಲರಿಗೂ ಸೇರಿದ್ದು ಎನ್ನುವುದು ಸಾರಿ ಹೇಳಿದರು, ಆ ಮೂಲಕ ಮಾನವನ ಹಕ್ಕುಗಳನ್ನು ಎತ್ತಿ ಹಿಡಿದರು, ಭಾರತೀಯ ಸವರ್ಣಿಯರು ಇಂದಿಗೂ ಅಸ್ಪೃಶ್ಯತೆ ಎಂಬ ಅಳಸನ್ನು ಮೆದುಳಿಗೆ ತುಂಬಿಕೊಂಡು ದೇಶಾದ್ಯಂತ ಓಡಾಡುತ್ತಿದ್ದಾರೆ, ಇದಕ್ಕೆ ಈ ದೇಶದಲ್ಲಿ ಸಾವಿರಾರು ವರ್ಷ ಇತಿಹಾಸ ಕೂಡ ಇದೆ ಇದು ಇಂದಿಗೂ ಇಲ್ಲಿನ ದಲಿತರು ಆದಿವಾಸಿಗಳನ್ನು ಅವಮಾನಿಸುತ್ತಲೇ



ಬಂದಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಡಿಎಸ್‌ಎಸ್ ದೇವನಹಳ್ಳಿ ತಾಲೂಕು ಸಮಿತಿಯ ಪ್ರಧಾನ ಸಂಚಾಲಕರಾದ ಪಿ. ನರಸಪ್ಪ ಮಾತನಾಡಿ ಈ ಹೋರಾಟ ಕೇವಲ ಕುಡಿಯುವ ನೀರಿಗಾಗಿ ಅಲ್ಲ; ನೀರು ಕುಡಿಯುವುದರಿಂದ ನಮಗೆ ಹೆಚ್ಚಿನದನ್ನು ನೀಡುವುದಿಲ್ಲ. ಕುಡಿಯುವ ನೀರಿನ ಹಕ್ಕನ್ನು ಸ್ಥಾಪಿಸಲು ನಾವು ಹೋರಾಡುತ್ತಿದ್ದರೂ, ಇದು ನಮ್ಮ ಮಾನವ ಹಕ್ಕುಗಳ ವಿಷಯ.ಸಮಾಜದ ಪುನರ್ನಿರ್ಮಾಣಕ್ಕಾಗಿ, ಊಳಿಗಮಾನ್ಯ ಅಸಮಾನತೆಯ ಆಧಾರದ ಮೇಲೆ ಹಳೆಯ ಸಮಾಜದ ನಿರ್ಮೂಲನೆಗಾಗಿ ಮತ್ತು ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವವನ್ನು ಆಧರಿಸಿದ ಹೊಸ ಸಮಾಜದ ಸ್ಥಾಪನೆಗಾಗಿ ಇದನ್ನು ಹೋರಾಡಲಾಯಿತು ಎಂದು ಹೇಳಿದರು.

ಸಮಾವೇಶದಲ್ಲಿ ಹಿರಿಯ ಹೋರಾಟಗಾರ ಎಚ್. ಕೆ ವೆಂಕಟೇಶಪ್ಪ ಮತ್ತು ಜನಪರ ಹಾಡುಗಾರ್ತಿ ಕೊಯಿರಾ ಮುನಿನರಸಮ್ಮ ಅವರಿಗೆ ಗೌರವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿ ಅವರ ಕುಟುಂಬಸ್ಥರಿಗೆ ಸನ್ಮಾನಿಸಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ಕರ್ನಾಟಕ ದಲಿತ ಸಂಘರ್ಷ ಸಮಿತಿಯ(ಅಂಬೇಡ್ಕರ್ ವಾದ )ರಾಜ್ಯ ಸಂಘಟನಾ ಸಂಚಾಲಕರಾದ ರಮೇಶ್ ಡಾಕುಳಗಿ, ಕರ್ನಾಟಕ ದಲಿತ ವಿದ್ಯಾರ್ಥಿ ಒಕ್ಕೂಟದ ಸಂಯೋಜಕರಾದ ಚಂದ್ರಪ್ಪ .ಎಂ. ಮಿಂಡ್ಲುಮನಿ, ಕಲಾಮಂಡಳಿಯ ಮೂರ್ತಿ ಬಿಸ್ನಹಳ್ಳಿ, ರವೀಂದ್ರ ಹೊಸಕೋಟೆ, ವಿಭಾಗೀಯ ಸಂಘಟನಾ ಸಂಚಾಲಕರಾದ ಕೆ .ಆರ್ ಮುನಿಯಪ್ಪ, ಜಿಲ್ಲಾ ಪ್ರಧಾನ ಸಂಚಾಲಕರಾದ ಕೊರಳೂರು ಶ್ರೀನಿವಾಸ್, ಎಂ. ತಿಮ್ಮರಾಯಪ್ಪ ,ರಮೇಶ್ ,ಪಿ. ಎಂ ಚೆನ್ನಸ್ವಾಮಿ, ದಲಿತ ಮುಖಂಡರುಗಳಾದ ಜನಕಮಣಿ,ಕೊಯಿರಾ ನಾಗಾರಾಜ್, ಮುರುಗೇಶ್, ಅಂಬರೀಶ್ , ವೆಂಕಟೇಶ್ ,ಚಂದ್ರಪ್ಪ, ಶಾಮಲಾ, ವಿದ್ಯಾರಾಣಿ ಸೇರಿದಂತೆ ಸಂಘಟನೆಯ ಹಲವಾರು ಪದಾಧಿಕಾರಿಗಳು ಮತ್ತು ಸದಸ್ಯರು ಭಾಗಿಯಾಗಿದ್ದರು.

# ಐಜಿ/ಡಿಜಿಪಿ ಅವರೇ, ಒಬ್ಬರಿಗೊಂದು ನ್ಯಾಯ ಸರಿಯೇ?

ವರದಿ: **ರಾಮಸಮುದ್ರ ಎಸ್.ವೀರಭದ್ರಸ್ವಾಮಿ**

ಚಾಮರಾಜನಗರ: ಎಮ್ ಎಲ್ ಸಿ ಪ್ರಕರಣದಲ್ಲಿ ಮೆಮೊ ಪಡೆಯದೆ,ಗಾಯಾಳು ಹೇಳಿಕೆ ಪಡೆಯದೆ ಲೋಪ ಎಸಗಿ ಮೂವರು ಅಮಾನತ್ತಾದರೂ ಎಚ್ಚೆತ್ತದ ಕೆಲ ಠಾಣೆಯವರ ನಿರ್ಲಕ್ಷ್ಯ ಮುಂದುವರೆದಿದೆ ಎಂಬ ಆರೋಪ ಕೇಳಿಬರುತ್ತಿದೆ.

ಅಣ್ಣತಮ್ಮಂದಿರ ಜಗಳ ಕೊಲೆಯಲ್ಲಿ ಅಂತ್ಯವಾದ ಕೂಡಲೆ ಯಳಂದೂರು ಠಾಣೆಯ ಸಬ್ ಇನ್ಸ್ ಪೆಕ್ಟರ್ ಸೇರಿದಂತೆ ಮೂವರು ಅಮಾನತ್ತಾಗಿದ್ದರು. ಇದೀಗ ಚಾ.ನಗರ ಸಂಚಾರಿ ಠಾಣೆಯ ಸಿಬ್ಬಂದಿಗಳ ಮೇಲೂ ಆರೋಪ ಕೇಳಿ ಬರುತ್ತಿದ್ದು ಮೇಲಾದಿಕಾರಿಗಳು ಕ್ರಮವಹಿಸುತ್ತಾರೊ ಇಲ್ಲವೊ ಎಂಬುದು ಚರ್ಚೆಯಾಗುತ್ತಿದೆ.

ಘಟನೆ ವಿವರ: ಚಾ.ನಗರದಿಂದ ಮರಳ್ಳಿಗೆ ನಗರದ ದೊಡ್ಡಮೋಳೆಯ ಮೂವರು ತ್ರಿಬಲ್ ರೈಡಿಂಗ್ ಅಲ್ಲಿ 23-2-2025 ರ ರಾತ್ರಿ ತೆರಳುತ್ತಿದ್ದು ಆಕಸ್ಮಿಕವಾಗಿ ಬಿದ್ದು ಶಿವು ಎಂಬಾತ 17-03-2025 ರಂದು ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾನೆ.

ಅಪಘಾತವಾದ ದಿನ ಶಿವು,ನಾರಾಯಣ,ಪ್ರಜ್ವಲ್ ಎಂಬುವವರಿಗೆ ಗಾಯವಾಗಿ ಶಿವು ಎಂಬಾತನಿಗೆ ಹೆಚ್ಚು ಪೆಟ್ಟಾದ್ದರಿಂದ ಮೈಸೂರು ಆಸ್ಪತ್ರೆಗೆ ದಾಖಲಿಸಲಾಯಿತು. ಆದರೆ ಇಲ್ಲಿನ ಸಿಮ್ಸ್ ಮೆಮೊ ಅನ್ನು ಯಾರೂ ಪಡೆಯಲಿಲ್ಲ.. ಮೈಸೂರಲ್ಲೂ ಪಡೆಯಲಿಲ್ಲ..ಆದಾಗಿ ಮೃತನ ಹೇಳಿಕೆ ಪಡೆಯದೆ ಯಳಂದೂರು ಠಾಣೆಯ ಸಿಬ್ಬಂದಿಗಳ ಲೋಪದಂತೆ ಇಲ್ಲೂ




ಆಗಿದೆ ಎನ್ನಲಾಗುತ್ತಿದೆ.

ಅಪಘಾತವಾದ ದಿನವೆ ಈಖಖ ದಾಖಲಿಸುವುದು ಬಿಟ್ಟು ಗಾಯಾಳುಗಳಿಗೆ ಏನೂ ಆಗೋದಿಲ್ಲ ಎಂದು ಇವರೆ ನಿರ್ದಾರ ಮಾಡಿಕೊಂಡಾಗ ಸಾವು ಯಾರ ಕೈಯಲ್ಲಿ ಇರಲಿದೆ..ಕೊನೆಗೂ ಆತ ಬದುಕುಳಿಯದೆ ಸಾವನ್ನಪ್ಪಿದ ಹಿನ್ನಲೆಯಲ್ಲಿ ಮಾರ್ಚ್ 23 ರಂದು ಪೋಷಕರಿಂದ ಹೇಳಿಕೆ ಪಡೆದು ಈಖಖ ದಾಖಲಿಸಿ ಕರ್ತವ್ಯ ದಕ್ಷತೆ ಮೆರೆದಿದ್ದಾರೆ.

ಯಳಂದೂರು ಠಾಣಾ ವ್ಯಾಪ್ತಿಯಲ್ಲಿ ಕೊಲೆಯಲ್ಲಿ ಅಂತ್ಯ ಕಂಡು ಲೋಪ ಎಸಗಿದ್ದು ಗೊತ್ತಾಗಿದ್ದೆ 24 ಗಂಟೆ ಅವದಿಯಲ್ಲಿ ವಿಚಾರಣೆ ಮಾಡಿ ಎಸ್ಪಿ ಅವರು ಮೇಲಾದಿಕಾರಿಗಳಿಗೆ ವರದಿ ಸಲ್ಲಿಸಿದ ತಕ್ಷಣ ಅಮಾನತು ಆದೇಶ ಹೊರಡಿಸಿಬಿಟ್ಟರು. ಆದರೆ ಚಾಮರಾಜನಗರ ಸಂಚಾರಿ ಠಾಣೇಲಿ ಅಪಘಾತವಾದಾಗಲೂ ಗಾಯಾಳತ್ತ ಕ್ಯಾರೆ ಎನ್ನೊದಿರಲಿ ಮೈಸೂರಿನಲ್ಲಿ ಕೊಟ್ಟ ಮೆಮೊ ಅನ್ನು ಪೊಲೀಸರು ಪಡೆಯದೆ ಲೋಪವೆಸಗಿರೋದು ತಿಳಿದು 23 ದಿನವಾದರೂ ಆಡಳಿತ ಮೈಮರೆತು ಕುಳಿತಿರೋದು ನೋಡಿದರೆ ಅನುಮಾನ ಹುಟ್ಟಿಸಲಾರಂಬಿಸಿದೆ.

ಯಾವ್ದೆ ಘಟನೆ ನಡೆದರೂ ವಿಚಾರಣೆಗೆ ಅದೀನ ಸಿಬ್ಬಂದಿಗಳಾದ ಡಿವೈಸ್ಪಿ/ ಇನ್ಸ್ ಪೆಕ್ಟರ್ ಅವರಿಗೆ ವರದಿ ಮಾಡೊದು ಸಹಜ ಆದರೆ ವಿಚಾರಣ ಅದಿಕಾರಿಗಳು ಕೆಲವೊಮ್ಮೆ ತಮ್ಮ ಅದೀನ ಸಿಬ್ಬಂದಿಗಳ ರಕ್ಷಣೆಗೆ ನಿಲ್ಲೊದು ಸಾಮಾನ್ಯವಾಗಿ ಬಿಟ್ಟಿರೊದು ದುರಂತ.. ಎಸ್ಪಿ ಅವರು ಎಷ್ಟೊ ಅರ್ಜಿ ವಿಚಾರಣೆಗೆ ಡಿವೈಸ್ಪಿ ಅವರಿಗೆ ಬರೆದಾಗ ಅವರು ವಿಳಂಬ ನೀತಿ ಅನುಸರಿದ ಪ್ರಕರಣಗಳು ಇರುವಾಗ ಇನ್ನ ಇಂಥಹ ಗಂಬೀರ ವಿಚಾರಗಳನ್ನ ಪರಿಗಣಿಸದೆ ಇರೋದು ಕೂಡ ಕಪ್ಪು ಚುಕ್ಕೆ ಎಂದರೆ ತಪ್ಪಾಗಲಾರದು.

ಒಟ್ಟಿನಲ್ಲಿ ಸಂಚಾರಿ ಠಾಣೆಯಲ್ಲಿ ಕೆಲ ಎಎಸ್‌ಐ ಗಳ ಬಗ್ಗೆದೂರು ಸಲ್ಲಿಸಿದರೂ ವಿಚಾರಣೆ ನಡೆಸದೆ ಡಿವೈಸ್ಪಿ ಅವರು ಲೋಪವೆಸಗುತ್ತಿದ್ದು ಈ ಅಪಘಾತ ಸಾವಿನ ವಿಚಾರ ಮೆಮೊ ಪಡೆಯದೆ ಲೋಪ ಎಸಗಿರುವುದನ್ನ ಮೇಲಾದಿಕಾರಿಗಳ ಗಮನಕ್ಕೆ ತಂದಿದ್ದಾರೊ ಅಥವಾ ಮೇಲಾದಿಕಾರಿಗಳಿಂದ ಬರಲಿ ನೋಡೊಣ ಅಂತ ಇದಾರೊ ಎಂಬುದು ನಿಗೂಢವಾಗಿದೆ.

ಒಟ್ಟಿನಲ್ಲಿ ಯಳಂದೂರು ಠಾಣೆಯಲ್ಲಿ ಮೂವರ ತಲೆದಂಡವಾಗಿದ್ದರೂ ಕೆಲ ಠಾಣೆಗಳಲ್ಲಿ ಇನ್ನ ಲೋಪ ಎಸಗುತ್ತಿರೋದು ನೋಡಿದರೆ ಶಿಸ್ತಿನ ಇಲಾಖೆ ಮೇಲೆ ಗೌರವ ಇಲ್ಲದಂತಾಗಿದೆ.

# ಕವಿತೆಗಳು ಜನಸಾಮಾನ್ಯರ ದನಿಯಾಗಲಿ:ಹನುಮಂತಯ್ಯ

**ದೇವನಹಳ್ಳಿ:**ಸಮಾಜದ ಆತ್ಮದಲ್ಲಿ ಸಕಾರಾತ್ಮಕ ಪರಿವರ್ತನೆ ತರಬೇಕಾದರೆ, ಕವಿಯಾದವನು, ಸಮಾಜದ ಆಗುಹೋಗುಗಳಿಗೆ ಮುಖಾಮುಖಿಯಾಗಬೇಕು ಎಂದು ಸಾಹಿತಿ ಡಾ.ಎಲ್.ಹನುಮಂತಯ್ಯ ಹೇಳಿದರು.

ವಿಜಯಪುರ ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಕಾವ್ಯ ಸಂಸ್ಕೃತಿ ಯಾನ, ಮನುಕುಲದ ನೋವಿಗೆ ಮದ್ದಾಗಲಿ.. ಕವಿತೆಗಳು ಜನಸಾಮಾನ್ಯರ ದನಿಯಾಗಲಿ ಕಾವ್ಯ ಎಂಬ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಕಾವ್ಯಕ್ಕೆ ಲೋಕದ ದೃಷ್ಟಿಯನ್ನು ಬದಲಿಸುವ ಶಕ್ತಿ ಇದೆ. ಓದುಗನ ಎದೆಯಲ್ಲಿ ಮತ್ತು ಆಗ ಮಾತ್ರ ಆತನ ಕಾವ್ಯ ಲೋಕದೃಷ್ಟಿಯ ಗಮನ ಸೆಳೆಯಬಲ್ಲದು. ಕಾವ್ಯ ರಚಿಸುವವರು ಹಿರಿಯರ ಕಾವ್ಯಗಳನ್ನು ಅಭ್ಯಸಿಸಿ, ಪ್ರಯೋಗಮತಿಯಾಗಿ ಕಾವ್ಯ ರಚಿಸಬೇಕು. ಕಾವ್ಯದ ಪ್ರತಿಮೆಗಳು ಗೋಚರಿಸುವಂತಿರಬೇಕು ಎಂದರು.

ಪುರಸಭೆ ಅಧ್ಯಕ್ಷೆ ಎಸ್.ಭವ್ಯಾಮಹೇಶ್ ದೀಪ ಬೆಳಗುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ, ಕವಿಯ ಮನಸ್ಸಿನ ಗರ್ಭದಲ್ಲಿ ಕಾವ್ಯ ರೂಪ ಪಡೆಯಬೇಕು. ಕಲಾತ್ಮಕವಾಗಿರಬೇಕು. ತಲೆಮಾರುಗಳಲ್ಲಿ ಬದಲಾವಣೆಗಳಾಗುತ್ತಿವೆ. ಕಾವ್ಯ ಹೇಗಿರಬೇಕಂದರೆ, ತಾಯಿ ಮಗುವಿಗೆ ಜನ್ಮ ಕೊಟ್ಟಂತಿರಬೇಕು. ಅನೇಕ ಕವಿತೆಗಳು, ಕಾವ್ಯಗಳು ಸಮಾಜದಲ್ಲಿ ಬದಲಾವಣೆಗಳನ್ನು ತರುವಲ್ಲಿ ಪ್ರಮುಖ ಪಾತ್ರ ವಹಿಸಿವೆ ಎಂದರು.

ಸಂಸ್ಕೃತಿ ಚಿಂತಕ ಹಾಗೂ ವಿಮರ್ಶಕ ಪ್ರೊ. ಚಂದ್ರಶೇಖರ್ ಮಾತನಾಡಿ, ಸಮಾಜದಲ್ಲಿನ



ಜ್ವಲಂತ ಸಮಸ್ಯೆಗಳು ಶೀರ್ಷಿಕೆಗಳಾಗಬೇಕು. ಅನುಭಾವ ಸೃಷ್ಟಿಯಾಗಬೇಕು. ಕಾವ್ಯಕ್ಕೆ ತನ್ನದೇ ಚಲನಶೀಲತೆ ಇದೆ. ತಿರಸ್ಕಾರಕ್ಕೆ ಒಳಗಾದವರ ನೋವಿಗೆ ಸ್ಪಂದಿಸಬೇಕು. ದುಡಿಯುವ ವರ್ಗವನ್ನು ಮರೆಯಬಾರದು. ಆಧ್ಯಾತ್ಮಿಕ ಚಿಂತನೆಗಳ ಸಾರವನ್ನು ತಿಳಿಸಬೇಕು. ಸ್ವಂತ ಅನುಭವಗಳು ಕವಿತೆಗಳಾಗಬೇಕು. ಮನಸ್ಸುಗಳನ್ನು ಒಂದುಗೂಡಿಸುವ ಶಕ್ತಿಯನ್ನು ಪಡೆಯಬೇಕು ಎಂದರು.

ಕವಿಯತ್ರಿ ಅನಸೂಯಯತೀಶ್ ಮಾತನಾಡಿ, ಕಾವ್ಯಗಳು ಎಂದೆಂದಿಗೂ ಪ್ರಸ್ತುತವಾಗಿವೆ. ಕವಿಗಳ ಮನಸ್ಸು, ಹೃದಯ ತೆರೆದಿರಬೇಕು. ಜನರ ಮನದಾಳವನ್ನು ಅರಿಯಬೇಕು. ಕಾಲಘಟ್ಟದ ಪ್ರಜ್ಞೆ ಇರಬೇಕು. ಸವಾಲುಗಳು, ಗೊಂದಲಗಳು, ಸಮಸ್ಯೆಗಳನ್ನು ಬಗೆಹರಿಸುವ ಪ್ರಯತ್ನಗಳಾಗಬೇಕು. ಇತಿಹಾಸದಲ್ಲಿ ವರದಿ ಸಿಗುತ್ತೆ, ನೋವು ಭಾವನೆಗಳು ಸಿಗಲ್ಲ. ಕವಿಯು ಕಾವ್ಯಕ್ಕೆ ಭಾವನೆಗಳನ್ನು ತುಂಬಲು ಸಾಧ್ಯ ಎಂದರು.

ಮುಖ್ಯಸ್ಥ ಮತ್ತು ಕಾವ್ಯ ಸಂಸ್ಕೃತಿ ಯಾನದ ರೂವಾರಿ ಡಿ.ಬಿ.ಮಲ್ಲಿಕಾರ್ಜುನಸ್ವಾಮಿ ಮಹಾಮನೆ, ಯಾನದ ಕವಿಗಳಿಗೆ ಮಾರ್ಗದರ್ಶಿ ಸೂತ್ರಗಳನ್ನು ತಿಳಿಸಿದರು. ಬದುಕಿನ ಅರ್ಥಗಳನ್ನು ಸ್ಫುರಿಸುವ ಕಾವ್ಯ ಬಹುಪಯೋಗಿ. ಮನದ ಕ್ಲೇಷಗಳನ್ನು ದೂರಾಗಿಸುವ ಸಂಜೀವಿನಿ. ಸುತ್ತಲ ಆಗುಹೋಗುಗಳನ್ನು ತನ್ನಲ್ಲಿ ಹುದುಗಿಸಿಟ್ಟುಕೊಂಡು ಕಾಪಾಡುವ ಶಕ್ತಿಯಾಗಿದೆ ಎಂದರು.

ರಾಜ್ಯದ ವಿವಿಧ ಭಾಗಗಳಿಂದ ಬಂದಿದ್ದ ಕವಿಗಳು ಕವಿಗೋಷ್ಠಿಯಲ್ಲಿ ಪಾಲ್ಗೊಂಡು ಕವಿತೆ, ಕಾವ್ಯಗಳನ್ನು ವಾಚನ ಮಾಡಿದರು. ಸರ್ವಾಧ್ಯಕ್ಷೆ ಸ್ಮಿತಾಅಮೃತರಾಜ್, ಕಾವ್ಯ ಸಂಸ್ಕೃತಿ ಯಾವ ಜಿಲ್ಲಾ ಸಂಚಾಲಕ ಚಂದ್ರಶೇಖರ ಹಡಪದ್, ಜಿಲ್ಲಾ ಕಸಾಪ ಅಧ್ಯಕ್ಷ ಬಿ.ಎನ್.ಕೃಷ್ಣಪ್ಪ, ಪುರಸಭೆ ಸದಸ್ಯ ಎ.ಆರ್.ಹನೀಪುಲ್ಲಾ, ಹೊಸಳ್ಳಿ ವಾಸುದೇವ, ಚಿ.ಮಾ.ಸುಧಾಕರ್, ಪಿ.ವೆಂಕಟೇಶ್, ಸಂಯೋಜಕ ಜೆ.ಎನ್.ಶ್ರೀನಿವಾಸ್, ಭಾರತಿ ವಿಶ್ವನಾಥ್ ,ಯು.ಚಿ.ದೊಡ್ಡಯ್ಯ, ಎಂ.ಎ.ನೆಗಳೂರು, ಕೆ.ಆರ್.ರವಿಕಿರಣ್, ಗಂಗರಾಜು ಶಿರವಾರ, ಮಹಾಲಿಂಗಯ್ಯ, ಆರ್ ಮುನಿರಾಜು, ಕೆ.ಎಚ್.ಚಂದ್ರಶೇಖರ್, ಎ.ಬಿ.ಪರಮೇಶಯ್ಯ, ಮುಂತಾದವರರಿದ್ದರು.

# ಉತ್ತಮ ಕೆಲಸ ಮಾಡಬೇಕೆಂದು ಕಿವಿಮಾತು



**ಶಿಡ್ಲಘಟ್ಟ:** ಚಿಕ್ಕಬಳ್ಳಾಪುರ ಜಿಲ್ಲೆ ಸಹಕಾರಿ ಒಕ್ಕೂಟ ನಿಯಮಿತ ಸಂಘಕ್ಕೆ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತರಾದ ಟಿ.ಎಲ್. ಅಂಬರೀಶ್ ಹಾಗೂ ಎಂ.ಮುರಳಿ ನಿರ್ದೇಶಕರುಗಳಾಗಿ ಆಯ್ಕೆಯಾಗಿದ್ದಾರೆ.

ಶಾಸಕರಾದ ಬಿ.ಎನ್. ರವಿಕುಮಾರ್ ಅವರು ಆಯ್ಕೆಯಾದ ನೂತನ ನಿರ್ದೇಶಕರುಗಳನ್ನು ಮೇಲೂರಿನ ಅವರ ಸ್ವಗೃಹದ ಕಛೇರಿಯಲ್ಲಿ ಸನ್ಮಾನಿಸಿ ಅಭಿನಂದಿಸಿ ಮಾತನಾಡಿ ದೇಶದ ಬೆನ್ನೆಲುಬಾದ ರೈತರನ್ನು ಸಹಕಾರ ಸಂಘಗಳ ಪ್ರಧಿನಿದಿಗಳು ಸರ್ಕಾರದಿಂದ ಸೌಲಭ್ಯಗಳನ್ನು ಅವರಿಗೆ ನೇರವಾಗಿ ಸಿಗುವಂತೆ ಮಾಡಿ ಉತ್ತಮ ರೀತಿಯಲ್ಲಿ ಕೆಲಸ ಮಾಡಬೇಕೆಂದು ಕಿವಿಮಾತು ಹೇಳಿದರು. ಸಹಕಾರ ಸಂಘವನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಿ ತಾಲ್ಲೂಕಿನ ರೈತ ಬಾಂಧವರಿಗೆ ಅಗತ್ಯವಾದ ಸೌಕರ್ಯಗಳನ್ನು ಒದಗಿಸಿ ನೆರವಾಗಬೇಕೆಂದು ತಿಳಿಸಿದರು.

ಈ ವೇಳೆ ಪಿ.ಎಲ್. ಡಿ.ಬ್ಯಾಂಕ್ ಅಧ್ಯಕ್ಷರಾದ ಬಂಕ್ ಮುನಿಯಪ್ಪ, ಹಾಪ್ ಕಾಮ್ಸ್ ಮಾಜಿ ಅಧ್ಯಕ್ಷರಾದ ಹುಜುಗೂರು ರಾಮಣ್ಣ, ಪಿ.ಎಲ್.ಡಿ.ಬ್ಯಾಂಕ್ ನಿರ್ದೇಶಕರಾದ ಮಂಜುನಾಥ್,ಹಂಡಿಗನಾಳ ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷರಾದ ಮುನಿರೆಡ್ಡಿ ,ಮೇಲೂರು ಆರ್.ಎ.ಉಮೇಶ್,ಮುಗಲಡಿಪಿ ನಂಜಪ್ಪ, ಗುತ್ತಿಗೆದಾರರಾದ ಮಂಜುನಾಥ್, ಮುಖಂಡರಾದ ತಿಪ್ಪೇನಹಳ್ಳಿ ಲಕ್ಷ್ಮೀನಾರಾಯಣಪ್ಪ, ಸೊಣ್ಣಪ್ಪ, ಪ್ರಶಾಂತ್, ಮೂರ್ತಿ ಮುಂತಾದವರು ಪಾಲ್ಗೊಂಡಿದ್ದರು.

# ಕಂಚುಗಾರನಹಳ್ಳಿ ಗ್ರಾ.ಪಂ.ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ

**ರಾಮನಗರ:** ತಾಲ್ಲೂಕಿನ ಬಿಡದಿ ಹೋಬಳಿ ಕಂಚುಗಾರನಹಳ್ಳಿ ಗ್ರಾಮ ಪಂಚಾಯ್ತಿಯ ನೂತನ ಅಧ್ಯಕ್ಷರಾಗಿ ಕಾಂಗ್ರೆಸ್ ಬೆಂಬಲಿತ ಸದಸ್ಯರಾದ ಪದ್ಮಶಿವಕುಮಾರ್ ಚುನಾಯಿತರಾದರೆ ಉಪಾಧ್ಯಕ್ಷರಾಗಿ ಕೆ.ವಿ.ರವಿ ಅವರು ಅವಿರೋಧ ಆಯ್ಕೆಯಾದರು.

ಹಿಂದಿನ ಅಧ್ಯಕ್ಷರಾಗಿದ್ದ ವಸಂತ ಚಂದ್ರು ಮತ್ತು ಉಪಾಧ್ಯಕ್ಷೆ ಸುಧಾ ಅವರ ರಾಜೀನಾಮೆಯಿಂದ ತೆರವಾಗಿದ್ದ ಅಧ್ಯಕ್ಷ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಸೋಮವಾರ ಕಂಚುಗಾರನಹಳ್ಳಿ ಗ್ರಾಪಂ ಕಾರ್ಯಾಲಯದಲ್ಲಿ ಚುನಾವಣೆ ನಿಗದಿಯಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಮನಗನಹಳ್ಳಿ ಮತ ಕ್ಷೇತ್ರದ ಸದಸ್ಯೆ ಪದ್ಮಶಿವಕುಮಾರ್ ಅವರು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿಯಾಗಿ ಹಾಗೂ ಕೆಂಪಯ್ಯನಪಾಳ್ಯದ ಸದಸ್ಯೆ ಭಾರತಿ ಕೇಶವರೆಡ್ಡಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿಯಾಗಿ ಸ್ಪರ್ಧೆಬಯಸಿ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ಕೆ.ವಿ.ರವಿ ಒಬ್ಬರೇ ನಾಮಪತ್ರ ಸಲ್ಲಿಸಿದರು.

ಸಾಮಾನ್ಯ ಮಹಿಳೆಗೆ ಅಧ್ಯಕ್ಷ ಸ್ಥಾನ ಮೀಸಲಾಗಿತ್ತು. ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ಪ್ರಕ್ರಿಯೆಯಲ್ಲಿ ಗ್ರಾಪಂನ ಎಲ್ಲಾ 17 ಸದಸ್ಯರು ಹಾಜರಿದ್ದು, ತಮ್ಮ ಹಕ್ಕು ಚಲಾಯಿಸಿದರು. ನಂತರ ನಡೆದ ಮತ ಏಣಿಕೆಯಲ್ಲಿ ಕಾಂಗ್ರೆಸ್ ಬೆಂಬಲಿತ ಸದಸ್ಯೆ ಪದ್ಮಶಿವಕುಮಾರ್ ಅವರು 10 ಮತಗಳನ್ನು ಪಡೆದು ಜಯಗಳಿಸಿದರು. ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಭಾರತಿ ಕೇಶವರೆಡ್ಡಿ ಅವರು 6 ಮತಗಳನ್ನು ಪಡೆದು ಸೋಲುಂಡರು. ಒಂದು ಮತ ತಿರಸ್ಕೃತವಾಗಿತ್ತು.

ಪರಿಶಿಷ್ಟಜಾತಿಗೆ ಮೀಸಲಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಕೆಂಪಯ್ಯನಪಾಳ್ಯ ಮತಕ್ಷೇತ್ರದ ಸದಸ್ಯ ಕೆ.ವಿ.ರವಿ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಚುನಾವಣಾ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ತೋಟಗಾರಿಕೆ ಇಲಾಖೆ ಹಿರಿಯ ಸಹಾಯಕ ನಿರ್ದೇಶಕ ವೈ.ಪಿ.ಈಶ್ವರಪ್ಪ ಅವರು ಆಯ್ಕೆಯನ್ನು ಅವಿರೋಧ ಎಂದು ಘೋಷಿಸಿದರು. ಸಹಾಯಕ ಚುನಾವಣಾ ಅಧಿಕಾರಿಯಾಗಿ ಗ್ರಾಪಂ ಪಿಡಿಒ ಎ.ಎಂ.ಉಮೇಶ್ ಕಾರ್ಯ ನಿರ್ವಹಿಸಿದರು. ಕಾರ್ಯದರ್ಶಿ ದೇವರಾಜು ಹಾಜರಿದ್ದರು.

ಈ ವೇಳೆ ನೂತನ ಅಧ್ಯಕ್ಷೆ ಪದ್ಮಶಿವಕುಮಾರ್ ಅವರು ಮಾತನಾಡಿ, ಗ್ರಾಪಂ ಅಧ್ಯಕ್ಷರಾಗಲು ಸಹಕರಿಸಿದ ಶಾಸಕರಾದ ಬಾಲಕೃಷ್ಣ ಮತ್ತು ಪಕ್ಷದ ಮುಖಂಡರು, ಸದಸ್ಯರು ಹಾಗೂ ತಮ್ಮ ಮೇಲೆ ವಿಶ್ವಾಸವಿಟ್ಟು ಪ್ರತ್ಯಕ್ಷವಾಗಿ ಪರೋಕ್ಷವಾಗಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆ ಅರ್ಪಿಸುವುದಾಗಿ ತಿಳಿಸಿದರು.

ಶಾಸಕರಾದ ಎಚ್.ಸಿ.ಬಾಲಕೃಷ್ಣರವರು ಹಾಗೂ ಈ ಭಾಗದ ಮುಖಂಡರು ಹಾಗೂ ಎಲ್ಲಾ ಸದಸ್ಯರ ವಿಶ್ವಾಸದಿಂದ ತಮಗೆ ಸಿಕ್ಕಿರುವ ಅಧಿಕಾರವಧಿಯಲ್ಲಿ




ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಲಾಗುವುದು. ಬೇಸಿಗೆ ಸಮೀಪಿಸುತ್ತಿರುವುದರಿಂದ ಗ್ರಾಪಂ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗದಂತೆ ಕ್ರಮವಹಿಸಲಾಗುವುದು. ಶಾಸಕರ ಮಾರ್ಗದರ್ಶನದಲ್ಲಿ ಈ ಭಾಗದ ಕೆಲವು ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ಜತೆಗೆ ಸರಕಾರದ ನಾನಾ ಇಲಾಖೆಗಳಿಂದ ಸಿಗುವ ಸೌಲತ್ತುಗಳನ್ನು ಜನರಿಗೆ ತಲುಪಿಸಲಾಗುವುದು ಎಂದು ಹೇಳಿದರು.

ಗ್ರಾಪಂ ನಿಕಟಪೂರ್ವ ಅಧ್ಯಕ್ಷೆ ವಸಂತ, ಸದಸ್ಯರಾದ ಹೆಚ್.ಸಿ.ಶಿವರಾಮ್, ಸತ್ಯನಾರಾಯಣ, ಹನುಮಂತರಾಜು, ರಾಮಾಂಜಿನಿ, ಗೋಪಾಲಕೃಷ್ಣ, ಭಾಗ್ಯಮ್ಮ, ಸುಧಾ, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜಿ.ಎನ್.ನಟರಾಜು, ಭೈರಮಂಗಲ ವಿಎಸ್‌ಎಸ್‌ಎನ್ ಅಧ್ಯಕ್ಷ ಹೆಚ್.ಎಸ್.ಸಿದ್ಧರಾಜು, ಪ್ರಮುಖರಾದ ಹೊಸೂರು ರಾಜಣ್ಣ, ಭೈರಾರೆಡ್ಡಿ, ಕೃಷ್ಣಮೂರ್ತಿ, ತಾಯಪ್ಪಮದೊಡ್ಡಿ ಗುರುಸ್ವಾಮಿ, ಅರಳಾಳುಸಂದ್ರ ಚಂದ್ರು, ಮನಗನಹಳ್ಳಿ ಮಂಜುನಾಥ್, ಶೆಟ್ಟಿಗೌಡನದೊಡ್ಡಿ ಕೃಷ್ಣಪ್ಪ, ಕೆಂಪಯ್ಯನಪಾಳ್ಯ ಶಿವಕುಮಾರ್, ಸಿದ್ಧಲಿಂಗಯ್ಯ, ಗುರುಮೂರ್ತಿ, ಶಾಸಕ ಬಾಲಕೃಷ್ಣ ಅವರ ಆಪ್ತಸಹಾಯಕ ಅಭಿಷೇಕ್ ಮುಂತಾದವರು ನೂತನ ಅಧ್ಯಕ್ಷರನ್ನು ಅಭಿನಂದಿಸಿದರು.

# ಉತ್ತಮ ತಾಲ್ಲೂಕು ಚಿಕಿತ್ಸಾ ಘಟಕ




**ಶಿಡ್ಲಘಟ್ಟ:**ಚಿಕ್ಕಬಳ್ಳಾಪುರ ಸರ್. ಎಂ.ವಿಶ್ವೇಶ್ವರಯ್ಯಸಭಾಂಗಣದಲ್ಲಿ ವಿಶ್ವ ಕ್ಷಯರೋಗ ದಿನಾಚರಣೆ ಕಾರ್ಯಕ್ರಮದಲ್ಲಿ 2024 ಸಾಲಿನಲ್ಲಿ ಶಿಡ್ಲಘಟ್ಟವನ್ನು "ಉತ್ತಮ ತಾಲ್ಲೂಕು ಚಿಕಿತ್ಸಾ ಘಟಕ" ಎಂದು ಘೋಷಿಸಲಾಯಿತು.

ಪ್ರಶಸ್ತಿಯನ್ನು ಜಿಲ್ಲಾಧಿಕಾರಿಗಳಾದ ಪಿ.ಎನ್. ರವೀಂದ್ರ ಅವರು ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ಮಾನ್ಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ..ಮಹೇಶ್ ಕುಮಾರ್ ಅವರ ಸಮ್ಮುಖದಲ್ಲಿ ಪ್ರಶಸ್ತಿಯನ್ನು ತಹಶಿಲ್ದಾರ್ ಬಿ.ಎನ್.ಸ್ವಾಮಿ, ತಾಲ್ಲೂಕು ಆರೋಗ್ಯಾಧಿಕಾರಿಗಳಾದ ಅಧಿಕಾರಿಗಳಾದ ಡಾ.ವೆಂಕಟೇಶ್ ಮೂರ್ತಿ ಹಾಗು ಅಧಿಕಾರಿಗಳು ಮತ್ತು ಸಿಬ್ಬಂದಿ ಪ್ರಶಸ್ತಿಯನ್ನು ಸ್ವೀಕರಿಸಿದರು.

# ನಗರಸಭೆ ಸದಸ್ಯ ನರಸಿಂಹಮೂರ್ತಿಯಿಂದ ಇಫ್ತಾರ್ ಕೂಟ ಆಯೋಜನೆ

**ಚಿಕ್ಕಬಳ್ಳಾಪುರ:** ಜಾತಿ ಭೇದವಿಲ್ಲದೆ ಎಲ್ಲರೂ ಒಂದಾಗಿ ಬಾಳುವುದರ ಮೂಲಕ ಸೌಹಾರ್ದತೆಗೆ ಸಾಕ್ಷಿಯಾಗಬೇಕು ಮುಸ್ಲಿಂ ಹಾಗೂ ಹಿಂದೂ ಬಾಂದವರು ಸೌಹಾರ್ದತೆಗೆ ಇಂತಹ ಇಫ್ತಾರ್ ಕೂಟ ಸಹಕಾರಿಯಾಗಲಿದೆ ಇದರಿಂದಾಗಿ ಈ ಭಾಗದಲ್ಲಿ ಶಾಂತಿ ಸೌಹಾರ್ದತೆ ನೆಲೆಯೂರಲಿದೆ ರಂಜಾನ್ ತಿಂಗಳು ಪವಿತ್ರ ತಿಂಗಳಾಗಿದ್ದು ಮಾಸಾಂತ್ಯ ಮುಸ್ಲಿಂ ಬಾಂಧವರು ಉಪವಾಸವಿದ್ದು ದೇಶ ರಾಜ್ಯ ನಗರದಲ್ಲಿ ಶಾಂತಿ ಸೌಹಾರ್ದತೆಯಿಂದ ಕೂಡಿರಬೇಕೆಂದು 20ನೇ ವಾರ್ಡ್ ನಗರಸಭೆ ಸದಸ್ಯ ನರಸಿಂಹಮೂರ್ತಿ ಹೇಳಿದರು.

ರಂಜಾನ್ ತಿಂಗಳ ಉಪವಾಸ ಆಚರಿಸುತ್ತಿರುವ ಮುಸ್ಲಿಂ ಬಾಂದವರಿಗೆ ನರಸಿಂಹಮೂರ್ತಿ ನಗರದ ದರ್ಗಾ ಮೊಹಲ್ಲಾದಲ್ಲಿ ಇಫ್ತಾರ್ ಕೂಟ ಆಯೋಜನೆ ಮಾಡಿದ್ದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ



ಅವರು ಹಿಂದು,ಮುಸ್ಲಿಮರು,ಕ್ರೈಸ್ತರು ತಮ್ಮ ತಮ್ಮ ಹಬ್ಬ ಹರಿದಿನದಂದು ಪರಸ್ಪರವಾಗಿ ಪ್ರೀತಿ ಹಂಚಿ ಸಹಬಾಳ್ವೆಯ ಬದುಕು ಸಾಗಿಸಬೇಕು ಒಂದಾಗಿ ಸಾಗಿ ದೇಶದ ಅಭಿವೃದ್ಧಿಗೆ ಶ್ರಮಿಸಬೇಕೆಂದರು.

ಇದೇ ಸಂದರ್ಭದಲ್ಲಿ ವಾರ್ಡಿನ ನಗೀನ್ ತಾಜ್ ಮಾತನಾಡಿ ನಗರಸಭೆ ಸದಸ್ಯ ನರಸಿಂಹಮೂರ್ತಿ ಅವರ ಕಾರ್ಯಗಳ ಬಗ್ಗೆ ಪ್ರತಿಕ್ರಿಯಿಸಿ ವಾರ್ಡಿನಲ್ಲಿ ಮೂಲಸೌಕರ್ಯ ಒದಗಿಸಲು ಪ್ರಥಮ ಆದ್ಯತೆ ಜೊತೆಗೆ ಜನರ ಸಮಸ್ಯೆಗಳಿಗೆ ಸ್ಪಂದಿಸುತ್ತಿದ್ದಾರೆ ಇನ್ನು ಪ್ರತಿ ವರ್ಷ ರಂಜಾನ್ ತಿಂಗಳಲ್ಲಿ ಮುಸ್ಲಿಂ ಬಾಂದವರಿಗೆ ಎಲ್ಲ ರೀತಿಯ ಸಹಕಾರ ಸೌಕರ್ಯ ಕಲ್ಪಿಸುತ್ತಿದ್ದು ನಮ್ಮ ಸಹಕಾರ ಅವರೊಂದಿಗೆ ಸದಾ ಇರಲಿದೆ ಎಂದರು.

ಈ ಸಂದರ್ಭದಲ್ಲಿ ನಗರಸಭಾ ಸದಸ್ಯರಾದ ಮಹಮ್ಮದ್ ಜಾಫರ್, ಪೌರಾಯುಕ್ತ ಮನ್ಸೂರ್ ಅಲಿ, ಮುಖಂಡರುಗಳಾದ ಷಾಸಬ್,ಆಜಾಮ್ ಪಾಷ ಮತ್ತು ಇತರರು ಇದ್ದರು.

# ನೀರು ಹರಿಯಲು ಯಾವುದೇ ಅಡಚಣೆ ಮಾಡಬೇಡಿ: ರಂಗಣ್ಣ ಗೌಡ

ಕುಣಿಗಲ್: ಹೇಮಾವತಿ ಲಿಂಕ್ ಕೆನಾಲ್ ಯೋಜನೆಗೆ ಸಹಕಾರ ಸಚಿವ ಕೆ ಎನ್ ರಾಜಣ್ಣ ಹಾಗೂ ಅವರ ಪುತ್ರ ರಾಜೇಂದ್ರ ವಿರೋಧ ಮಾಡುವುದು ಸರಿಯಲ್ಲ ನಮ್ಮ ಪಾಲಿನ ನೀರು ಹರಿಯಲು ಯಾವುದೇ ಅಡಚಣೆ ಮಾಡಬೇಡಿ ಎಂದು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ರಂಗಣ್ಣ ಗೌಡ ತಿಳಿಸಿದರು.

ಪಟ್ಟಣದ ಮಾಜಿ ಸಂಸದ ಡಿ.ಕೆ. ಸುರೇಶ್ ರವರ ಕಚೇರಿಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತ ತುಮಕೂರು ಜಿಲ್ಲೆಗೆ ಹೇಮಾವತಿ ನೀರನ್ನು ತರಲು ಮಾಜಿ ಸಚಿವ ವೈ ಕೆ ರಾಮಯ್ಯ ಮೂಲ ಯೋಜನೆಯಂತೆ ನೀರು ಅರಿಯಬೇಕೆಂದು ತಾಲೂಕಿನ ಎನ್‌ಚ್48 ರಸ್ತೆಗೆ ತಡೆಗೋಡೆ ನಿರ್ಮಿಸಿ ಹೋರಾಟ ಮಾಡಿದರು. ಅವರ ಹೋರಾಟದ ಫಲವಾಗಿ ಕುಣಿಗಲ್ ತಾಲೂಕಿಗೆ ಹರಿಸಿದರು ಆದರೆ ಕಳೆದ 30 ವರ್ಷಗಳಿಂದಲೂ ತಾಲೂಕಿನ ಪಾಲಿನ 3.03 ಟಿಎಂಸಿ ನೀರು ಸಮರ್ಪಕವಾಗಿ ಹರಿಸಲು ಸಾಧ್ಯವಾಗಿಲ್ಲ. ಶಾಸಕ ಡಾಕ್ಟರ್ ಹೆಚ್ ಡಿ ರಂಗನಾಥ್ ಶಾಸಕರಾದ ಮೇಲೆ ಅವರ ನಿರಂತರ ಹೋರಾಟದಿಂದ ಕುಣಿಗಲ್ ದೊಡ್ಡಕೆರೆಗೆ,ಯಡಿಯೂರು ಭಾಗದ ಕೆಲವು ಕೆರೆಗಳು ಬೇಗೂರು ಕೆರೆಗಳಿಗೆ ನೀರು ಹರಿಸಿದ್ದಾರೆ. ಹಿಂದಿನ ಶಾಸಕರ ಅವಧಿಯಲ್ಲಿ ತಾಲೂಕಿನ ಬಹುತೇಕ ಕಡೆಗಳಲ್ಲಿ ಕಾಲುವೆ ನಿರ್ಮಿಸಿದ್ದರು ಆ ಕಾಲುವೆಗಳ ಮೂಲಕ ನೀರನ್ನು ಜಮೀನುಗಳಿಗೆ ಹರಿಸಲು ಸಾಧ್ಯವಾಗಲಿಲ್ಲ ರೈತರ ಜಮೀನುಗಳಲ್ಲಿ ಕಾಲುಗಳಿಂದ ನಿರ್ಮಿಸಿದರು ಜಮೀನುಗಳಿಗೆ ಪರಿಹಾರ ಹಣವನ್ನು ಬಿಡುಗಡೆ ಮಾಡಿಸಲಿಲ್ಲ ಪರಿಹಾರ ಕೊಡಿ ಎಂದು ರೈತ ಸಂಘ ಹೋರಾಟ ಮಾಡುತ್ತಿದೆ,ಕಾಡು ಮತ್ತಿಕೆರೆ ಸೇರಿದಂತೆ ಹಲವು ಹಳ್ಳಿಗಳ ರೈತರು ಪರಿಹಾರಕ್ಕಾಗಿ ಹೋರಾಟ ಮಾಡುತ್ತಿದ್ದಾರೆ ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಮುಖ್ಯಮಂತ್ರಿ ಅವಧಿಯಲ್ಲಿ ನಂಜುಂಡಪ್ಪ ವರದಿಯಂತೆ ನಮ್ಮ ತಾಲೂಕು ಹಿಂದುಳಿದ ಪ್ರದೇಶವಾಗಿದ್ದು ಹೇಮಾವತಿ ನೀರು ಹರಿಸಲು ಲಿಂಕ್ ಕೆನಾಲ್ ಯೋಜನೆಗೆ 600 ಕೋಟಿ ವೆಚ್ಚದ ಯೋಜನೆಯನ್ನು ಮಂಜೂರು ಮಾಡಿದರು ಮುಂದೆ ಬಂದಂತಹ ಬಿಜೆಪಿ ಸರ್ಕಾರದ ಅಂದಿನ ಸಚಿವರಾದ ಮಾಧುಸ್ವಾಮಿ ಸರ್ಕಾರವು ಲಿಂಕ್ ಕೆನಾಲ್ ಯೋಜನೆಯನ್ನು ವಜಾ ಗೊಳಿಸಿ ಚಿಕ್ಕನಾಯಕನಹಳ್ಳಿಗೆ 350 ಕೋಟಿ ವೆಚ್ಚದಲ್ಲಿ ಬಹುಗ್ರಾಮ ಯೋಜನೆಯಲ್ಲಿ ನೀರು ಹರಿಸಿದರು.ಈ ಭಾಗದ ಯಾರೂ ಸಹ ಕೇಳಲಿಲ್ಲ ಇಂದು ಕಾಂಗ್ರೆಸ್ ಸರ್ಕಾರದಲ್ಲಿ 1000 ಕೋಟಿ ರೂಪಾಯಿ ಅನುದಾನದಲ್ಲಿ ಲಿಂಕ್ ಕೆನಾಲ್ ಯೋಜನೆಯ ಅನುಷ್ಠಾನಕ್ಕೆ ತರಲು ಹೊರಟರೆ ಕಾಂಗ್ರೆಸ್ ಸರ್ಕಾರದ



ಸಹಕಾರ ಸಚಿವರು ಕೆ.ಎನ್. ರಾಜಣ್ಣ ಹಾಗು ಪುತ್ರರಾದ ಎಮ್ ಎಲ್ ಸಿ ರಾಜೇಂದ್ರ ವಿರೋಧ ಮಾಡುತ್ತಿರುವುದು ಅವರಿಗೆ ಶೋಭೆ ತರುವಂತದ್ದಲ್ಲ ತಾಲೂಕಿನಲ್ಲಿ ಸಾವಿರಾರು ಅಡಿ ಬೋರ್ ವೆಲ್ ಕೊರದರೂ ಸಹ ನೀರಿನ ಕೊರತೆ ಎದ್ದು ಕಾಣುತ್ತಿದ್ದು ಕೇವಲ ಹತ್ತು ವರ್ಷದಲ್ಲಿ ಕೆ ಎನ್ ರಾಜಣ್ಣ ಅವರು ಏತ ನೀರಾವರಿ ಯೋಜನೆಯಲ್ಲಿ 550 ಕೋಟಿ ಹಣವನ್ನು ತೆಗೆದುಕೊಂಡು ಹೋಗಿರುತ್ತಾರೆ ಕಾಂಗ್ರೆಸ್ ಪಕ್ಷದ ಸಹಕಾರ ಸಚಿವರು ಹಾಗೂ ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳಾದ ರಾಜೇಂದ್ರ ಅವರು ನಮ್ಮ ಪಾಲಿನ ನೀರು ಹರಿಯಲು ಯಾವುದೇ ವಿರೋಧ ಮಾಡದೆ ನಮ್ಮ ತಾಲೂಕಿನ ಯೋಜನೆಯನ್ನು ಪೂರ್ಣಗೊಳಿಸಲು ಕೈಜೋಡಿಸಬೇಕೆಂದರು.ನೀರು ಅರಿಯಲು ಅಡಚಣೆ ಮಾಡಿದಾಗ ಕೆಲವರು ಆಕ್ಷೇಪಣೆ ಮಾಡಿ ಮಾತನಾಡುತ್ತಾರೆ ಇದನ್ನು ತಪ್ಪು ಎಂದು ಹೇಳಲಾಗದು ಯಾವುದೇ ರಾಜಕೀಯ ಬೆರೆಸದೇ ತಾಲೂಕಿನ 3 ಲಕ್ಷ ರೈತರ ಪರವಾಗಿ ಜಿಲ್ಲೆಯ 24 ಟಿಎಂಸಿ ಒಳಗೆ ತಾಲೂಕಿನ 3.3 ಟಿಎಂಸಿ ನೀರು ಹರಿಸಲು ಸಹಕರಿಸಬೇಕು ಈಗಾಗಲೇ ಶಿರಾ ಚಿಕ್ಕನಾಯಕನಹಳ್ಳಿ ಮಧುಗಿರಿ ಭಾಗಕ್ಕೆ ನೀರು ಕೊಂಡೊಯ್ಯುತ್ತಿದ್ದರು ಸಹ ಯಾವುದೇ ಅಪಸ್ವರ ಇರುವುದಿಲ್ಲ ಶಾಸಕರು ವಿಧಾನಸಭೆಯಲ್ಲಿ ಸಹಕಾರ ಸಚಿವರು ತಾಲೂಕಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡುತ್ತಿಲ್ಲ ಎಂದು ತಿಳಿಸಿದ ಸಂದರ್ಭದಲ್ಲಿ ತಾಲೂಕಿನ ಎನ್‌ಡಿಎ ವಿರೋಧಪಕ್ಷಗಳ ನಾಯಕರು ಸಚಿವರ ಪರವಾಗಿ ನಿಲ್ಲುತ್ತಾರೆ ಆದರೆ ಸಹಕಾರ ಸಚಿವರು ಆಲಪ್ಪನ ಗುಡ್ಡೆಯ ಸಹಕಾರ ಸಂಘದಲ್ಲಿತ ಅವ್ಯವಾರದ ದೂರನ್ನು ನೀಡಿದರು ಇಂದಿಗೂ ಅವರ ವಿರುದ್ಧ ತನಿಖೆಯಾಗಿರುವುದಿಲ್ಲ ಸುಸ್ಥಿದಾರರಾದ ವ್ಯಕ್ತಿಗಳು ಡಿಸಿಸಿ ಬ್ಯಾಂಕಿನ ನಿರ್ದೇಶಕರ ಸ್ಥಾನಕ್ಕೆ ಸ್ಪರ್ಧೆ ಮಾಡಿ ಗೆದ್ದರು ನಮ್ಮ ಪಕ್ಷದ ಸಚಿವರು ವಿರೋಧಪಕ್ಷದ ಮಾಯಕರ ಜೊತೆಗಿದ್ದಾರೆ ಎಂದು ವ್ಯಂಗ್ಯವಾಡಿದರು.ಹೇಮಾವತಿ ಲಿಂಕ್ ಕೆನಾಲ್ ಯೋಜನೆಗೆ ಯಾವುದೇ ಅಡೆತಡೆ ಮಾಡದೆ ನೀರು ಹರಿಸಲು ಸಹಕರಿಸಬೇಕೆಂದು ತಿಳಿಸಿದರು.

ರಾಜ್ಯ ಕೆಪಿಸಿಸಿ ಸದಸ್ಯರು ಬೇಗೂರು ನಾರಾಯಣ ಮಾತನಾಡುತ್ತಾ ತಮಿಳುನಾಡಿಗೆ ಸಮುದ್ರದ ಮೂಲಕ 200 ಟಿ ಎಂ ಸಿ ವ್ಯರ್ಥವಾಗಿ ಹರಿದು ಹೋಗುತ್ತಿದೆ ಅಂತಹ ನೀರನ್ನು ಸದ್ಬಳಕೆ ಮಾಡಿಕೊಳ್ಳಲು ರಾಜಕೀಯ ಮಾಡಬೇಡಿ ಸಹಕಾರ ಸಚಿವ ಎನ್ ರಾಜಣ್ಣನವರೇ ನಿಮ್ಮ ಸುಪುತ್ರ ರಾಜೇಂದ್ರ ಸ್ಥಳೀಯ ಸಂಸ್ಥೆಗಳಿಂದ ಎಂ ಎಲ್ ಸಿ ಚುನಾವಣೆಯಲ್ಲಿ ಅವರನ್ನು ಗೆಲ್ಲಿಸಲು ನಮ್ಮ ಶಾಸಕರು ಹಗಲು ರಾತ್ರಿ ಎನ್ನದೆ ಕೆಲಸ ಮಾಡಿ ಚುನಾವಣೆಯಲ್ಲಿ ಗೆಲ್ಲಿಸಿದ್ದು ನಮ್ಮ ತಾಲೂಕಿನ ರೈತರ ಹಿತ ಕಾಯುವುದು ರಾಜಣ್ಣ ಹಾಗೂ ರಾಜೇಂದ್ರ ಅವರ ಕರ್ತವ್ಯವಾಗಿದೆ ನಮ್ಮ ಪಾಲಿನ 3.3 ಟಿಎಂಸಿ ನೀರು ಹರಿಸಲು ಯಾವುದೇ ವಿರೋಧ ವ್ಯಕ್ತಪಡಿಸದೆ ವಿರೋಧಪಕ್ಷದವರಂತೆ ನಡೆದುಕೊಳ್ಳುವುದು ಸೂಕ್ತ ಅಲ್ಲ ಎಂದು ತಿಳಿಸಿದರು.

ಪುರಸಭಾ ಉಪಾಧ್ಯಕ್ಷರಾದ ಶ್ರೀನಿವಾಸ್ ಮಾತನಾಡುತ್ತಾ ಲಿಂಕ್ ಕೆನಾಲ್ ಯೋಚನೆಗೆ ರಾಜೇಂದ್ರ ರವರು ಜಿಲ್ಲೆಯ ಜನರನ್ನ ದಿಕ್ಕು ತಪ್ಪಿಸುತ್ತಿದ್ದಾರೆ ಕುಣಿಗಲ್ ತಾಲೂಕಿನ ಕೆರೆಕಟ್ಟೆಗಳಿಗೆ ನೀರು ತುಂಬಿಸಿ ಇದರಲ್ಲಿ ಯಾವುದೇ ರಾಜಕೀಯ ಬೆರಿಸದೆ ಕೇವಲ ನಮ್ಮ ಪಾಲಿನ ನೀರು ನಮಗೆ ದಕ್ಕುವಂತೆ ಮಾಡಿ ಕೇವಲ ಡಿಕೆ ಶಿವಕುಮಾರ್ ಅಣ್ಣ–ತಮ್ಮಂದಿರನ್ನು ರಾಜಕೀಯ ಉದ್ದೇಶಕ್ಕಾಗಿ ದ್ವೇಷ ಮಾಡುವುದು ಬಿಟ್ಟು ನಮ್ಮ ಪಾಲಿನ ನೀರಿಗೆ ಸಹಕಾರ ನೀಡಬೇಕೆಂದರು.

ಈ ಸಂದರ್ಭದಲ್ಲಿ ಕಾಂಗ್ರೆಸ್ ಮುಖಂಡರಾದ ಸುಂದರಕುಪ್ಪೆ ಪಾಪಣ್ಣ, ಉತ್ರಿದುರ್ಗ ವಿಎಸ್ ನ ಅಧ್ಯಕ್ಷ ಬೋರೇಗೌಡ, ಮುಖಂಡ ಮಲ್ಯ ನಾಗರಾಜ್,ಪುರಸಭಾ ಸದಸ್ಯ ಅರುಣ್ ಕುಮಾರ್, ದೇವರಾಜ್, ನಾರಾಯಣ, ಬಿಳಿ ದೇವಾಲಯ ಮೂರ್ತಿ, ಶಂಕರ್, ಪಾಪಣ್ಣ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ಅಡ್ಡ ಮತದಾನ: ಆರು ನಗರಸಭೆ ಸದಸ್ಯರು ಅನರ್ಹ

**ಚಿಕ್ಕಬಳ್ಳಾಪುರ:** ಚಿಕ್ಕಬಳ್ಳಾಪುರ ನಗರಸಭೆ ಅಧ್ಯಕ್ಷ ಉಪಾಧ್ಯಕ್ಷ ಸ್ಥಾನಕ್ಕೆ ಎರಡನೇ ಅವಧಿಯ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದಿಂದ ಆಯ್ಕೆಯಾಗಿದ್ದ ಆರು ಮಂದಿ ನಗರಸಭಾ ಸದಸ್ಯರಾದ ರತ್ನಮ್ಮ, ಸ್ವಾತಿ, ಸತೀಶ್, ಅಂಬಿಕಾ, ನೇತ್ರಾವತಿ, ನಿರ್ಮಲ ಪ್ರಭು ರವರು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ವಿರುದ್ಧ ಮತ ಚಲಾಯಿಸಿ ಪಕ್ಷದ ವಿಪ್ ಉಲ್ಲಂಘಿಸಿದ್ದು, ಈ ಸಂಭಂದಪಟ್ಟಾಗಿ ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಆರು ಮಂದಿ ನಗರಸಭಾ ಸದಸ್ಯರ ವಿರುದ್ಧ ಮೊಕದ್ದಮೆ ದಾಖಲಿಸಲಾಗಿತ್ತು,

ಆರು ತಿಂಗಳ ಸುದೀರ್ಘ ಚರ್ಚೆ ನಂತರ ಜಿಲ್ಲಾಧಿಕಾರಿ ನ್ಯಾಯಾಲಯದ ಆದೇಶ ಹೊರ ಬಂದಿದ್ದು ಅಡ್ಡ ಮತದಾನ ಮಾಡಿದ್ದ ಆರು ನಗರಸಭೆ ಸದಸ್ಯರನ್ನು ಅನರ್ಹಗೊಳಿಸಲಾಗಿದೆ. ಪಕ್ಷ ವಿರೋಧಿ ಚಟುವಟಿಕೆ ನಡೆಸುವವರಿಗೆ ಇದೊಂದು ಗುಣಪಾಠ, ಪಕ್ಷಕ್ಕೆ ಸಂದ ಜಯ ಎಂದು ಕಾಂಗ್ರೆಸ್ ಜಿಲ್ಲಾಧ್ಯಕ್ಷ ಹಾಗೂ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೇಶವರೆಡ್ಡಿ ತಿಳಿಸಿದರು.

ನಗರಸಭೆ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯಲ್ಲಿ ಅಡ್ಡ ಮತದಾನ ಮಾಡಿದ ಆರು ಸದಸ್ಯರನ್ನು ಜಿಲ್ಲಾಧಿಕಾರಿ ನ್ಯಾಯಾಲಯ ಅನರ್ಹ ಆದೇಶದ ಹೊರಡಿಸಿದ ನಂತರ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು ಚುನಾವಣೆ ಸಂದರ್ಭದಲ್ಲಿ ಪಕ್ಷದ ಟಿಕೆಟ್ ಪಡೆಯಲು ಅನೇಕರು ಅರ್ಜಿ ಸಲ್ಲಿಸುತ್ತಾರೆ ಪಕ್ಷ ನಂಬಿಕೆ ಇಟ್ಟು ಒಬ್ಬರನ್ನು ಆಯ್ಕೆ ಮಾಡುತ್ತೆ ಆದರೆ ಗೆದ್ದ ಮೇಲೆ ಪಕ್ಷವನ್ನ



ಬದಿಗಿಟ್ಟು ವೈಯಕ್ತಿಕ ಲಾಭಕ್ಕೆ ಪಕ್ಷ ವಿರೋಧಿ ಚಟುವಟಿಕೆ ಎಷ್ಟರ ಮಟ್ಟಿಗೆ ಸರಿ, ಪಕ್ಷ ಇದನ್ನು ಸಹಿಸಲ್ಲ ಜಿಲ್ಲಾಧಿಕಾರಿ ನ್ಯಾಯಾಲಯ ಪಕ್ಷ ವಿರೋಧಿ ಚಟುವಟಿಕೆ ನಡೆಸುವವರ ಬಗ್ಗೆ ಉತ್ತಮವಾದ ತೀರ್ಪು ನೀಡಿದೆ.

ಪಕ್ಷಕ್ಕೆ ದ್ರೋಹ ಬಗೆದು ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದವರನ್ನು ಕಾನೂನು ತಿರಸ್ಕರಿಸಿದೆ ಹಾಗೆಯೇ ಚುನಾವಣೆಗಳಲ್ಲಿ ಕೂಡ ಜನರು ತಿರಸ್ಕರಿಸಿ ತಕ್ಕ ಪಾಠ ಕಲಿಸುತ್ತಾರೆ. ನ್ಯಾಯಾಲಯದ ಆದೇಶ ಪಕ್ಷ ವಿರೋಧಿಗಳಿಗೆ ಇದೊಂದು ಗುಣಪಾಠ ನಮಗೆ ಸಂದ ಜಯ ಎಂದರು.

ಇನ್ನು ಜಿಲ್ಲಾಧಿಕಾರಿ ನ್ಯಾಯಾಲಯದಲ್ಲಿ ಕಾಂಗ್ರೆಸ್ ದಾಖಲಿಸಿದ್ದ ಮೊಕದ್ದಮೆ ಪರ ವಾದ ಮಂಡಿಸಿದ ವಕೀಲ ಯಾಕೂಬ್ ಶರೀಫ್ ಮಾತನಾಡಿ ನಗರಸಭೆ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿದ್ದವರ ವಿರುದ್ಧ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಕೇಶವರೆಡ್ಡಿ ಹಾಗೂ ನಗರಸಭೆ ಅಧ್ಯಕ್ಷ ಆಕಾಂಕ್ಷಿಯಾಗಿದ್ದ ಅಂಬರೀಷ್ ಮೊಕದ್ದಮೆ ದಾಖಲು ಮಾಡಿದ್ದು, ಮೊಕದ್ದಮೆಯನ್ನು ಜಿಲ್ಲಾಧಿಕಾರಿ ನ್ಯಾಯಾಲಯ ಕೂಲಂಕುಷವಾಗಿ ಪರಿಶೀಲಿಸಿ ಮಹತ್ತ ತೀರ್ಪು ನೀಡಿದೆ ಈ ತೀರ್ಪು ಪಕ್ಷಾಂತರ ಮಾಡುವವರಿಗೆ ಉತ್ತಮವಾದ ಸಂದೇಶ ನೀಡಿದೆ. ಈ ತೀರ್ಪು ಪಕ್ಷದ ವಿರೋಧ ಚಟುವಟಿಕೆಯಲ್ಲಿ ತೊಡಗಿರುವವರಿಗೆ ಕ್ಷಮೆ ಇಲ್ಲ ಪಕ್ಷಾಂತರ ಮಾಡುವವರಿಗೆ ಒಂದು ಎಚ್ಚರಿಕೆಯ ಗಂಟೆ ಎಂದು ಸ್ಪಷ್ಟಪಡಿಸಿದೆ ಎಂದರು.

ಈ ಸಂದರ್ಭದಲ್ಲಿ ಗ್ಯಾರಂಟಿ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಎನ್.ರಮೇಶ್, ನಂದಿ ಆಂಜಿನಪ್ಪ,ವಿ. ಸುರೇಶ್, ಪಟ್ರೇನಹಳ್ಳಿ ಕೃಷ್ಣ,ಕಿಸಾನ್ ಕಾಂಗ್ರೆಸ್ನ ಕ್ರಿಷ್ಣಪ್ಪ,ನಗರಸಭೆ ಸದಸ್ಯರಾದ ರಫೀಕ್,ಅಂಬರೀಶ್, ನರಸಿಂಹಮೂರ್ತಿ,ಅಫ್ಜಲ್, ಮುಖಂಡರಾದ ಲಕ್ಷ್ಮಣ್,ಸುಧಾ ವೆಂಕಟೇಶ್, ಯಲುವಹಳ್ಳಿ ಜನಾರ್ದನ್,ಪೆದ್ದನ್ನ,ಮಂಗಳಪ್ರಕಾಶ್, ಅಣ್ಣಮ್ಮ,ನಾರಾಯಣಮ್ಮ,ಹಮೀಮ್,ಶಾಹಿದ್ ಅಬ್ಬಾಸ್, ಉಮೇಶ್.ಜಿ,ಡ್ಯಾನ್ಸ್ ಶ್ರೀನಿವಾಸ್, ನಂದಿ ಮಸೂದ್,ಹೆಚ್.ಎಂ.ಹರೀಶ್ ಮತ್ತು ಇತರರು ಉಪಸ್ಥಿತರಿದ್ದರು.

# ಸರ್ಕಾರಿ ಸ್ವತ್ತನ್ನು ಅಕ್ರಮವಾಗಿ ಬಳಕೆ: ನಾಗರೀಕರ ಟೀಕೆ

ವರದಿ: **ಪ್ರಕಾಶ್ ಕಾಮಗೆರೆ**

ಹನೂರು: ವಿಧಾನ ಸಭಾ ಕ್ಷೇತ್ರದ ಮಾಜಿ ಶಾಸಕ ಹಾಲಿ ಕಾಂಗ್ರೆಸ್ ಸರ್ಕಾರಕ್ಕೆ ಮಾತ್ರ ಹಾಲಿ ಶಾಸಕರೆಂಬಂತೆ ಬಿಂಬಿತವಾಗಿರುವ ಆರ್.ನರೇಂದ್ರ ಅವರು ಸರ್ಕಾರಿ ಸ್ವತ್ತನ್ನು ತನ್ನ ಖಾಸಗಿ ಸ್ವತ್ತೆಂಬಂತೆ ಅಕ್ರಮವಾಗಿ ಸ್ವಬಳಕೆಗೆ ಸಾಗಿಸಿಕೊಳ್ಳುವ ಮೂಲಕ ತೀವ್ರ ನಾಗರೀಕರ ಟೀಕೆಗೆ ಗುರಿಯಾಗಿ ನಾಗರೀಕರ ಆಕ್ರೋಶಕ್ಕೆ ಕಾರಣವಾಗಿದೆ.

ಸೋತು ಮೂಲೆಗುಂಪಾಗಿದ್ದರೂ ಸರ್ಕಾರಿ ಆಸ್ತಿ ಕಬಳಿಕೆಗೆ ಮುಂದಾಗುವ ಮಾಜಿ ಶಾಸಕರು ತಮ್ಮ ಲೂಟಿಯ ಛಾಳಿಯನ್ನು ಬಿಡದೆ ಹನೂರು ಪಟ್ಟಣದ ಮಹದೇಶ್ವರ ಬೆಟ್ಟ ಮುಖ್ಯ ರಸ್ತೆಯ ಸೇತುವೆ ನಿರ್ಮಾಣ ಕಾಮಗಾರಿಯ ವೇಳೆ ಕೆಡವಲಾಗಿರುವ ಹಳೆಯ ಸೇತುವೆ ಸೈಜುಗಲ್ಲುಗಳನ್ನು ಪೆಟ್ರೋಲ್ ಬಂಕ್ ಕಾಮಗಾರಿಗೆ ಬಳಸಿಕೊಂಡಿರುವುದು ಜಗಜ್ಜಾಹೀರಾಗಿದೆ.

ಹನೂರು ತಾಲೂಕಿನ ಕೇಂದ್ರದಿಂದ ಮಲೆ ಮಹದೇಶ್ವರ ಬೆಟ್ಟದ ರಸ್ತೆಯಲ್ಲಿ ನಡೆಯುತ್ತಿರುವ ಕೆಶಿಪ್ ರಸ್ತೆ ಕಾಮಗಾರಿ ಹಿನ್ನೆಲೆಯಲ್ಲಿ ಹೊಸ ಸೇತುವೆ ನಿರ್ಮಾಣಕ್ಕಾಗಿ ಶಿಥಿಲಗೊಳ್ಳದೆ ಗಟ್ಟಿಮುಟ್ಟಾಗಿದ್ದ ಹಳೆಯ ಸೇತುವೆಯನ್ನು ಕೆಡವಿ ಹೊಸ ಸೇತುವೆ ನಿರ್ಮಾಣ ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.

ಮಾಜಿ ಶಾಸಕ ಆರ್.ನರೇಂದ್ರ ಅಧಿಕಾರದಲ್ಲಿದ್ದಾಗ ಮಾಡಿದ ಅಪರಾ ತಪರಾ ಕೆಲಸಗಳು ಸಾಲದೆಂಬಂತೆ ತಮ್ಮದೇ ಪಕ್ಷವಾದ ಕಾಂಗ್ರೆಸ್ ಸರ್ಕಾರವಿದೆಯೆಂಬ ಹಮ್ಮಿನಲ್ಲಿ ಹಾಲಿ ಶಾಸಕರಂತೆ ವರ್ತಿಸಿ ಇಲ್ಲೂ



ಕರಾಮತ್ತು ನಡೆಸಿ ಗುತ್ತಿಗೆದಾರರಿಗೆ ಹುಕುಂ ಹೊರಡಿಸಿ ಸೇತುವೆಯ ಕಲ್ಲುಗಳನ್ನು ಆರ್. ಎಸ್.ದೊಡ್ಡಿ (ಹಲ್ಲೇಪುರ) ಬಳಿ ಇರುವ ತನ್ನ ಖಾಸಗಿ ಜಾಗದಲ್ಲಿ ನಿರ್ಮಾಣವಾಗುತ್ತಿರುವ ಪೆಟ್ರೋಲ್ ಬಂಕ್ ಕಾಮಗಾರಿಯ ಸ್ಥಳಕ್ಕೆ ಸಾಗಿಸುವಂತೆ ಆಜ್ಞಾಪಿಸಿದ್ದಾರೆ.

ಇವರ ಮಾತಿಗೆ ಮನ್ನಣೆ ನೀಡಿದ ಗುತ್ತಿಗೆದಾರರ ಕಡೆಯವರು ಕಮಕ್ ಕಿಮಕ್ ಎನ್ನದೆ ನರೇಂದ್ರರ ಆದೇಶವನ್ನು ಪಾಲಿಸುವ ಮೂಲಕ ಸೇತುವೆ ಕೆಡವಿದಾಗ ಸಿಕ್ಕ ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಹತ್ತಾರು ಸಾವಿರ ಸೈಜು ಕಲ್ಲುಗಳನ್ನು ರಾಜಾರೋಷವಾಗಿ ಟಿಪ್ಪರ್ ಗಳ ಮೂಲಕ ಅವರು ಸೂಚಿಸಿದ ಅವರ ಖಾಸಗಿ ಜಾಗಕ್ಕೆ ಸಾಗಿಸಿ ಕೃತಾರ್ಥರಾಗಿದ್ದಾರೆ. ಅಧಿಕಾರಿಗಳ ಈ ಅಸಂಬದ್ಧ ನಡೆ ಸಾರ್ವಜನಿಕರ ಕೆಂಗಣ್ಣಿಗೆ ಗುರಿಯಾಗಿದೆ.

ಯಾವುದೇ ಸರ್ಕಾರಿ ಸ್ವತ್ತನ್ನು ಕೆಡವಿದಾಗ ಅಲ್ಲಿನ ಸಂಪನ್ಮೂಲವನ್ನು ಉಪಯುಕ್ತವಾದರೆ ಮರು ಕಾಮಗಾರಿಗೆ ಬಳಸಿಕೊಳ್ಳಬಹುದು ಅಥವಾ ದಾಸ್ತಾನಿರಿಸಿ ಟೆಂಡರ್ ಮೂಲಕ ಹರಾಜು ಬಿಡುವುದು ನಿಯಮ. ಆದರೆ ಇದಾವುದರ ಪಾಲನೆಗೂ ಮುಂದಾಗದ ಕೆಶಿಪ್ ರಸ್ತೆ ಕಾಮಗಾರಿಯ ಗುತ್ತಿಗೆದಾರರ ನಡೆ ಹಲವು ಸಂಶಯಗಳಿಗೆ ಎಡೆ ಮಾಡಿ ಕೊಟ್ಟಿದೆ.

ಈ ಸೇತುವೆ ಲೋಕೋಪಯೋಗಿ ಇಲಾಖೆಯ ಆಸ್ತಿಯಾಗಿದ್ದು ಅನ್ಯ ಖಾಸಗಿ ವ್ಯಕ್ತಿಗಳ ಪಾಲಾಗುತ್ತಿದ್ದರೂ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಸಂರಕ್ಷಣೆಗೆ ಮುಂದಾಗದ ಪಿಡ್ಲ್ಯುಡಿ ಅಧಿಕಾರಿ ವರ್ಗ ಕತ್ತೆ ಕಾಯುತ್ತಿದ್ದಾರಾ..? ಎಂದು ಪ್ರಬುದ್ಧ ನಾಗರೀಕರು ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪಿಡ್ಲ್ಯುಡಿ ಎಸ್.ಸಿ ವಿನಯ್ ಕುಮಾರ್ ರವರನ್ನು ಸಂಪರ್ಕಿಸಿದಾಗ ಕಾಮಗಾರಿ ನಿರ್ವಹಣೆ ಮಾಡುತ್ತಿರುವ ಕೆಶಿಪ್ ಆಧಿಕಾರಿಗಳ ಗಮನಕ್ಕೆ ತಂದು ಕ್ರಮ ವಹಿಸಲು ಸೂಚಿಸುವುದಾಗಿ ತಿಳಿಸಿದ್ದಾರೆ. ಕೆಶಿಪ್ ಎಇಇ ಅವಿನಾಶ್ ರವರನ್ನು ಸಂಪರ್ಕಿಸಿದಾಗ ತಮಗೆ ಬರುವುದಿಲ್ಲ ಅದರದೇ ಬೇರೆ ವಿಭಾಗ ಹಾಗೆ ಹೀಗೆ ಎಂದು ಕತೆ ಹೊಡೆಯುತ್ತಾರೆ.

ಹಾಲಿ ಶಾಸಕರ ಆಡಳಿತ ವೈಖರಿ ಬಗ್ಗೆ ಹದ್ದಿನ ಕಣ್ಣಿಟ್ಟು ಲೋಪದೋಷಗಳನ್ನು ತಿದ್ದಿ ಬುದ್ಧಿ ಹೇಳುವ ಮೂಲಕ ಪ್ರಬಲ ವಿರೋಧ ಪಕ್ಷದಂತೆ ಕರ್ತವ್ಯ ನಿರ್ವಹಿಸಬೇಕಾದ ನರೇಂದ್ರ ತಾನು ಕಳ್ಳ ಪರರ ನಂಬ, ಬೇಲಿಯೇ ಎದ್ದು ಹೊಲವ ಮೇಯ್ದಂತೆ ತಾನೇ ಸರ್ಕಾರಿ ಸ್ವತ್ತಿನ ಕಬಳಿಗೆ ಮುಂದಾದರೆ ಅಕ್ರಮವನ್ನು ಪ್ರಶ್ನಿಸುವವರು ಯಾರು ಎಂಬುದು ಮತದಾರರ ಆಕ್ರೋಶ ಭರಿತಕ ನುಡಿಯಾಗಿದೆ.

# ನೀರಿನ ಸಮಸ್ಯೆ ಬಗೆಹರಿಸಿದ ಗ್ರಾ.ಪಂ ಅಧ್ಯಕ್ಷ ವಿನಯ್



**ಮಾಲೂರು:** ತಾಲ್ಲೂಕಿನ ನೊಸಗೆರೆ ಗ್ರಾ.ಪಂ.ವ್ಯಾಪ್ತಿಯ ಬ್ಯಾಲಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಸಲುವಾಗಿ ಹೊಸ ಪೈಪು, ಮೋಟಾರ್, ಕೇಬಲ್ ಅಳವಡಿಸಿ ಅನುಕೂಲ ಕಲ್ಪಿಸಲಾಗಿದೆ ಎಂದು ಗ್ರಾ.ಪಂ.ಅಧ್ಯಕ್ಷ ಪಿ.ಎಸ್.ವಿನಯ್ ಗೌಡ ಹೇಳಿದರು.

ಬ್ಯಾಲಹಳ್ಳಿ ಗ್ರಾಮದಲ್ಲಿ ಸುಮಾರು 20 ವರ್ಷಗಳ ಹಳೆಯ ಪಂಪು,ಮೋಟಾರ್, ಕೇಬಲ್ ಅಳವಡಿಸಿದ್ದು, ಪದೇ ಪದೇ ದುರಸ್ಥಿಯಾಗಿ ಗ್ರಾಮದಲ್ಲಿ ಕುಡಿಯುವ ನೀರಿಗೆ ಅಹಕಾರ ಉಂಟಾಗುತ್ತಿದ್ದು, ಸಾಮಾನ್ಯ ಸಭೆಯಲ್ಲಿ ಎಲ್ಲಾ ಸದಸ್ಯರು ಸರ್ವಾನುಮತದಿಂದ ತೀರ್ಮಾನಿಸಿ ನಿರ್ಣಯ ದಿಂದ ನೂತನ ಪೈಪು, ಮೋಟಾರ್, ಕೇಬಲ್ ಅಳವಡಿಸಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲಾಗಿದೆ ಎಂದರು.

ಈ ಸಂದರ್ಭದಲ್ಲಿ ಗ್ರಾ.ಪಂಚಾಯತಿ ಮಾಜಿ ಅಧ್ಯಕ್ಷ ಹಾಗೂ ಹಾಲಿ ಸದಸ್ಯ ಬ್ಯಾಲಹಳ್ಳಿ ಚಂದ್ರಶೇಖರ ಗೌಡ, ಅಭಿವೃದ್ಧಿ ಅಧಿಕಾರಿ ಸುರೇಶ್ ಬಾಬು, ಮುಖಂಡ ಚಂದ್ರಶೇಖರ್ ಸೇರಿದಂತೆ ಮುಖಂಡರು ಹಾಜರಿದ್ದರು.

# ಸರ್ಕಾರ ಮಹಿಳೆಯರಿಗೆ ಶಕ್ತಿ ತುಂಬುವ ಕೆಲಸ ಮಾಡುತ್ತಿದೆ: ಹೆಬ್ಬಾಳಕರ್

ಬೆಳಗಾವಿ: ಮಹಿಳೆಯರ ಸಬಲೀಕರಣಕ್ಕಾಗಿಯೇ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಪಂಚ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತಂದಿದೆ. ಮುಂದಿನ ಮಾರ್ಚ್ ತಿಂಗಳಿಗೆ ಪ್ರತಿಯೊಂದು ಜಿಲ್ಲೆಯಲ್ಲೂ ಸಾಮೂಹಿಕ ಸೀಮಂತ ಕಾರ್ಯಕ್ರಮ ಆಯೋಜಿಸಲು ಸರ್ಕಾರದಿಂದ ಆದೇಶ ಹೊರಡಿಸಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಚಿವರಾದ ಲಕ್ಷ್ಮೀ ಹೆಬ್ಬಾಳಕರ್ ಘೋಷಿಸಿದರು.

ಬೆಳಗಾವಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಸಿಪಿಎಡ್ ಮೈದಾನದಲ್ಲಿ ಸೋಮವಾರ ನಡೆದ 3000 ಮಹಿಳೆಯರಿಗೆ ಸಾಮೂಹಿಕ ಸೀಮಂತ ಕಾರ್ಯಕ್ರಮದಲ್ಲಿ ಮಾತನಾಡಿದ ಸಚಿವರು, ಗರ್ಭಿಣಿಯರಿಗೆ ಸೀಮಂತ ಮಾಡುವುದೆಂದರೆ ಅದು ನಮ್ಮ ಭಾರತೀಯ ಸಂಸ್ಕೃತಿಯ ಭಾಗವಾಗಿದೆ. ಭಾರತೀಯ ಸಂಸ್ಕೃತಿ ಮಹಿಳೆಗೆ ಅತ್ಯಂತ ಉನ್ನತ ಸ್ಥಾನವನ್ನು ಕೊಟ್ಟಿದೆ ಎಂದರು.

ಮಾತೃತ್ವ ಎನ್ನುವುದು ಅತ್ಯಂತ ಶ್ರೇಷ್ಟವಾದ ಮೌಲ್ಯ. ಹಿಂದಿನಿಂದಲೂ ಮಾತೃದೇವೋಭವ ಎನ್ನುತ್ತೇವೆ, ಜನನಿ ತಾನೆ ಮೊದಲ ಗುರುವು ಎನ್ನುತ್ತೇವೆ. ಅದು ಸೀಮಂತ ದಿಂದ ಆರಂಭವಾಗಿ ಮಗು ಬೆಳವಣಿಗೆ ಹೊಂದಿದಂತೆ ಮುಂದುವರಿಯುತ್ತ ಹೋಗುತ್ತದೆ. ಒಂದು ಮಗುವಿನ ಬೆಳವಣಿಗೆ ಎಂದರೆ ಅದು ಸಮಾಜದ ಬೆಳವಣಿಗೆ, ದೇಶದ



ಬೆಳವಣಿಗೆ, ಮಗುವನ್ನು ಸಮಾಜದ ಆಸ್ತಿಯಾಗಿ ಬೆಳೆಸಲು ಈ ಸಂಸ್ಕಾರಗಳು ಅತ್ಯಂತ ಅಗತ್ಯ. ಮಗು ನಾಳೆಯ ಉತ್ತಮ ಪ್ರಜೆಯಾಗಬೇಕು, ಸಮಾಜಕ್ಕೆ ಆಸ್ತಿಯಾಗಬೇಕು ಎಂದು ಸಚಿವರು ಕರೆ ನೀಡಿದರು.

ಅಂಗನವಾಡಿಗೆ ಹೈಟೆಕ್ ಸ್ಪರ್ಶ: ನಾನು ಮಂತ್ರಿಯಾದ ಬಳಿಕ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಹೊಸರೂಪ ಕೊಡುತ್ತಿದ್ದೇನೆ. ಅಂಗನವಾಡಿ ಇಲಾಖೆಗೆ ಹೈಟೆಕ್ ಸ್ಪರ್ಶ ಕೊಟ್ಟಿದ್ದು, ಸರ್ಕಾರಿ ಮಾಂಟೆಸರಿ ತರಗತಿಗಳನ್ನು ಆರಂಭಿಸಲಾಗಿದೆ. ಇದೀಗ ಇಲಾಖೆಯಿಂದ ಸಾಮೂಹಿಕ ಸೀಮಂತಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ಹೇಳಿದರು.

ಸೀಮಂತದ ಮೌಲ್ಯ ವಿವರಿಸಿದ ಸಚಿವರು: ತಾಯ್ತನದ ಜವಾಬ್ದಾರಿಯನ್ನು ಅತ್ಯಂತ ನಿಷ್ಠೆಯಿಂದ, ಎಚ್ಚರಿಕೆಯಿಂದ, ಜವಾಬ್ದಾರಿಯಿಂದ ನಿಭಾಯಿಸಿ, ಮಗುವಿಗೆ ಉತ್ತಮ ಸಂಸ್ಕಾರ ಕೊಟ್ಟು, ಬೆಳೆಸಿ ಎನ್ನುವುದನ್ನು ಹೇಳುವುದಕ್ಕಾಗಿ ಸೀಮಂತ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ. ಆಗ ಗರ್ಭದೊಳಗಿದ್ದ ಮಗು ಕಥೆ ಕೇಳುತ್ತ ಪ್ರತಿಕ್ರಿಯಸಲು ಆರಂಭಿಸುತ್ತದೆ. ಆಗ ಶ್ರೀಕೃಷ್ಣನಿಗೆ ಗೊತ್ತಾಗುತ್ತದೆ, ತನ್ನ ತಂಗಿಯ ಗರ್ಭದಲ್ಲಿರುವುದು ಸಾಮಾನ್ಯ ಮಗುವಲ್ಲ ಎಂದು. ಆಗಲೇ ಗರ್ಭದಲ್ಲಿರುವಾಗಲೇ ಅಭಿಮನ್ಯು ಶ್ರೀ ಕೃಷ್ಣ ಹೇಳಿದ ಕಥೆ ಕೇಳುತ್ತ ಚಕ್ರವ್ಯೂಹ ಭೇದಿಸುವಂತಹ ದೊಡ್ಡ ಯುದ್ಧ ವಿದ್ಯೆಯನ್ನು ಕಲಿತಿದ್ದ... ಹಾಗಾಗಿ, ಗರ್ಭಿಣಿಯಾಗಿದ್ದಾಗ ದೃಶ್ಯ ಮತ್ತು ಶ್ರವ್ಯ ಎರಡೂ ಉತ್ತಮವಾಗಿರಬೇಕು ಎಂದರು.

100 ವಿಕಲ ಚೇತನರಿಗೆ ವೀಲ್‌ಚೇರ್: ಕ್ಷೇತ್ರದ 100 ಮಂದಿಗೆ ವಿಕಲ ಚೇತನರಿಗೆ ಬ್ಯಾಟರಿ ಚಾಲಿತ ವೀಲ್‌ಚೇರ್, ಬ್ರೈಲ್ ವಾಚ್, ಲ್ಯಾಪ್‌ಟಾಪ್‌ಗಳನ್ನು ನೀಡಲಾಗಿದೆ. ಹೀಗೆಯೇ ಉತ್ತಮ ಕೆಲಸಗಳು ಮುಂದುವರಿಯಲಿ ಎಂದು ಸಚಿವರು ಹೇಳಿದರು.

ಜನರ ಹೃದಯದಲ್ಲಿ ಸರ್ಕಾರ: ಇಂಥ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಸರ್ಕಾರ ಜನರಿಗೆ ಮತ್ತಷ್ಟು ಹತ್ತಿರ ಆಗುತ್ತದೆ. ಜನರ ಹೃದಯದಲ್ಲಿ ಸರಕಾರ ಇರಬೇಕು. ಒಂದು ತಿಂಗಳು ಪೂರ್ತಿ ಮುಂದಿನ ವರ್ಷ ದಿಂದ ಎಲ್ಲ ಜಿಲ್ಲೆಗಳಲ್ಲೂ ಸಾಮೂಹಿಕ ಸೀಮಂತ ಕಾರ್ಯಕ್ರಮವನ್ನು ಆಯೋಜಿಸಲಾಗುವುದು ಎಂದು ಹೇಳಿದರು.

ಗರ್ಭಿಣಿಯರೊಂದಿಗೆ ಊಟ ಮಾಡಿದ ಸಚಿವರು ಕಾರ್ಯಕ್ರಮದ ಬಳಿಕ ಸಚಿವೆ ಲಕ್ಷ್ಮೀ ಹೆಬ್ಬಾಳಕರ್ ಅವರು ಗರ್ಭಿಣಿಯರಿಗೆ ಹೋಳಿಗೆ ಊಟ ಬಡಿಸಿದರು. ಬಳಿಕ ಅವರೊಂದಿಗೆ ಊಟ ಮಾಡುವ ಮೂಲಕ ಗಮನಸೆಳೆದರು. ಗರ್ಭಿಣಿಯರ ಜೊತೆ ಸೆಲ್ಫಿಗೂ ಪೋಸ್ ಕೊಟ್ಟರು.

ಮಳಿಗೆಗಳಿಗೆ ಸಚಿವರಿಂದ ಚಾಲನೆ: ಸಮಾರಂಭಕ್ಕೂ ಮುನ್ನ ಸ್ತ್ರೀಶಕ್ತಿ ಗುಂಪುಗಳನ್ನು ಉತ್ತೇಜಿಸಲು ವಿಭಾಗೀಯ ಮಟ್ಟದ ವಸ್ತು ಪ್ರದರ್ಶನ ಮತ್ತು ಮಾರಾಟ ಮಳಿಗೆಗಳನ್ನು ಉದ್ಘಾಟಿಸಿದರು.

ಇಲಾಖೆ ಸಿಬ್ಬಂದಿಗೆ ಶಹಬ್ಬಾಶ್ ಗಿರಿ ಕೊಟ್ಟ ಸಚಿವರು: ಇಲಾಖೆಯ ಉಪ ನಿರ್ದೇಶಕ ನಾಗರಾಜ್ ಅವರ ಸಾರಥ್ಯದಲ್ಲಿ ಈ ಬೃಹತ್ ಕಾರ್ಯಕ್ರಮ ಅತ್ಯಂತ ಅಚ್ಚುಕಟ್ಟಾಗಿ ನೆರವೇರಿದ್ದು, ಇದಕ್ಕಾಗಿ ಹಗಲಿರುಳು ಶ್ರಮಿಸಿದ ಇಲಾಖೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು. ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಚನ್ನರಾಜ್ ಹಟ್ಟಿಹೊಳಿ, ಸಚಿವರ ಸಹೋದರಿಯರು, ಜಿಲ್ಲಾ ಪಂಚಾಯತ್ ಸಿಇಒ ರಾಹುಲ್ ಶಿಂಧೆ, ಸಚಿವರ ಮಾಧ್ಯಮ ಸಲಹೆಗಾರ ಎಂ.ಕೆ.ಹೆಗಡೆ, ಇಲಾಖೆಯ ಉಪ ನಿರ್ದೇಶಕರಾದ ನಾಗರಾಜ್.ಆರ್, ದಲಿತ ಮುಖಂಡ ಮಲ್ಲೇಶ ಚೌಗಲೆ, ಜಯಶ್ರೀ ಮಾಳಗಿ, ಯುವರಾಜ ಕದಂ ಸೇರಿದಂತೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಡಿ.ಕೆ.ಶಿವಕುಮಾರ್ ಕೂಡಲೇ ರಾಜೀನಾಮೆ ಕೊಡಲಿ: ಎನ್.ಮಹೇಶ್ ಆಗ್ರಹ

**ಬೆಂಗಳೂರು:** ಸಂವಿಧಾನವಿರೋಧಿ ಧೋರಣೆ ಹೊಂದಿದ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಈ ಕ್ಷಣವೇ ರಾಜೀನಾಮೆ ಕೊಡಬೇಕು ಎಂದು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್ ಅವರು ಆಗ್ರಹಿಸಿದ್ದಾರೆ.

'ಸಂವಿಧಾನ ಬದಲಾಯಿಸಿ ಮುಸ್ಲಿಮರಿಗೆ ಮೀಸಲಾತಿ ನೀಡುತ್ತೇನೆ' ಎಂಬ ಡಿ.ಕೆ ಶಿವಕುಮಾರ್ ರವರ ಹೇಳಿಕೆಯ ವಿರುದ್ಧ ಬಿಜೆಪಿ ಎಸ್.ಸಿ ಮೋರ್ಚಾ ವತಿಯಿಂದ ಪ್ರತಿಭಟನೆಯು ಇಂದು ಬೆಂಗಳೂರಿನ ಫ್ರೀಡಂ ಪಾರ್ಕ್ ನಲ್ಲಿ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ಸಿನವರು ಯಾವತ್ತೂ ಸಂವಿಧಾನದ ಪರ ಹಾಗೂ ಡಾ. ಬಾಬಾಸಾಹೇಬ ಅಂಬೇಡ್ಕರರ ಪರ ಇಲ್ಲ ಎಂದು ಆಕ್ಷೇಪಿಸಿದರು. ಅವರು ಮಾತನಾಡಿದ್ದು ಸಂವಿಧಾನ ವಿರೋಧಿ ಮಾತುಗಳು ಎಂದು ಟೀಕಿಸಿದರು.

ಸನ್ಮಾನ್ಯ ಸಿದ್ದರಾಮಯ್ಯನವರು ಈಗ ಡಿ.ಕೆ.ಶಿವಕುಮಾರ್ ಅವರ ರಾಜೀನಾಮೆ ಪಡೆಯಬೇಕು ಎಂದು ಒತ್ತಾಯಿಸಿದರು. ಡಿ.ಕೆ.ಶಿವಕುಮಾರ್ ಅವರಿಗೆ ಸಂವಿಧಾನದ ಬಗ್ಗೆ ಸ್ವಲ್ಪವಾದರೂ ಗೌರವ ಇದ್ದಲ್ಲಿ, ಪ್ರಜಾಪ್ರಭುತ್ವದ ಬಗ್ಗೆ ಗೌರವ ಇದ್ದಲ್ಲಿ ಅವರು ರಾಜೀನಾಮೆ ಕೊಡಬೇಕು ಎಂದು ಆಗ್ರಹವನ್ನು ಮುಂದಿಟ್ಟರು. ಅಲ್ಲದೇ ಅವರು ದೇಶದ ಜನತೆಯ ಕ್ಷಮೆ ಕೇಳಬೇಕು ಎಂದರು. ಇದನ್ನು ಒಂದು ಜನಾಂದೋಲನವಾಗಿ ರೂಪಿಸಲು ಡಿ.ಕೆ.ಶಿವಕುಮಾರ್ ಅವರ ಪ್ರತಿಕೃತಿ ದಹನದ ಮೂಲಕ ಇವತ್ತು ಸಾಂಕೇತಿಕವಾಗಿ ಶುರು ಮಾಡಿದ್ದೇವೆ. ಇದು ನಾಳೆಯಿಂದ ಇಡೀ ರಾಜ್ಯದಲ್ಲಿ ಮುಂದುವರೆಯಲಿದೆ



ಎಂದು ಪ್ರಕಟಿಸಿದರು.

ಪಕ್ಷದ ರಾಜ್ಯ ಪ್ರ.ಕಾರ್ಯದರ್ಶಿ ಪಿ.ರಾಜೀವ್ ಅವರು ಮಾತನಾಡಿ, ಸಿದ್ದರಾಮಯ್ಯನವರ ಸಚಿವ ಸಂಪುಟದ ಮಂತ್ರಿ ಡಿ.ಕೆ.ಶಿವಕುಮಾರ್ ಅವರು ಅತ್ಯಂತ ಆಘಾತಕಾರಿ ಹೇಳಿಕೆ ಕೊಟ್ಟಿದ್ದಾರೆ. ಡಿ.ಕೆ.ಶಿವಕುಮಾರ್ ಅವರು ಸಂವಿಧಾನ ತಿದ್ದುಪಡಿ ಮಾಡುವುದಾಗಿ ಹೇಳಿದ್ದಲ್ಲ; ಸಂವಿಧಾನ ಬದಲಿಸುವುದಾಗಿ ಹೇಳಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಕಾಂಗ್ರೆಸ್ ಪಕ್ಷ ದೇಶವಿರೋಧಿ ಶಕ್ತಿಗಳ ಜೊತೆ ಸೇರಿದೆ. ಭಾರತ ದೇಶದಲ್ಲಿ ಅಭದ್ರತೆ ಸೃಷ್ಟಿಸುವ ಪಾತ್ರದಲ್ಲಿ ಕಾಂಗ್ರೆಸ್ ಇರುವುದಾಗಿ ಆರೋಪವಿದ್ದು, ಕಾಂಗ್ರೆಸ್ಸಿನ ಒಬ್ಬ ಶ್ರೀಮಂತ ಸದಸ್ಯನಾದ ಡಿ.ಕೆ.ಶಿವಕುಮಾರ್ ಅವರು ಹೇಳಿದ್ದೇನು? 'ನಾವು ಏನೋ ಒಂದು ಮಾಡ್ತಾ ಇದ್ದೇವೆ. ನೀವು ಗಮನಿಸಿ; ಮುಂದಿನ ದಿನಗಳಲ್ಲಿ ಸಂವಿಧಾನವನ್ನೇ ಕಿತ್ತು ಹಾಕುತ್ತೇವೆ' ಎಂಬ ಅರ್ಥದಲ್ಲಿ ಡಿ.ಕೆ.ಶಿವಕುಮಾರ್ ಅವರು ಹೇಳಿದ್ದಾರೆ ಎಂದು ಆರೋಪಿಸಿದರು.

ಜೈ ಭೀಮ್ ಎನ್ನುವ ಕಾಂಗ್ರೆಸ್ಸಿನವರ ಮುಖವಾಡ ಈಗ ಕಳಚಿಬಿದ್ದಿದೆ. ಜನತೆಯ ಮುಂದೆ ಕಾಂಗ್ರೆಸ್ ದಲಿತ ವಿರೋಧಿ, ಕಾಂಗ್ರೆಸ್ ಸಂವಿಧಾನ ವಿರೋಧಿ, ಈ ಸಂವಿಧಾನ ಬುಡಮೇಲು ಮಾಡಲು, ಬಾಬಾಸಾಹೇಬ ಡಾ. ಅಂಬೇಡ್ಕರ್ ಅವರು ಕನಸು ಕಂಡಂಥ ಅಖಂಡ ರಾಷ್ಟ್ರವನ್ನು ಛಿದ್ರಗೊಳಿಸಲು ಷಡ್ಯಂತ್ರದ ಭಾಗವಾಗಿ ಕಾಂಗ್ರೆಸ್ ಸಂಚನ್ನು ರೂಪಿಸುತ್ತಿದೆ ಎಂಬುದು ಡಿ.ಕೆ.ಶಿವಕುಮಾರ್ ಅವರ ಸಂದರ್ಶನದಿಂದ ಹೊರಬಂದಿದೆ ಎಂದು ವಿಶ್ಲೇಷಿಸಿದರು. ಸಿದ್ದರಾಮಯ್ಯನವರು ಈ ಕೂಡಲೇ ಡಿ.ಕೆ.ಶಿವಕುಮಾರ್ ಅವರನ್ನು ಸಚಿವಸಂಪುಟದಿಂದ ವಜಾ ಮಾಡಬೇಕು ಎಂದು ಆಗ್ರಹಿಸಿದರು.

ನಗರ ಜಿಲ್ಲಾ ಅಧ್ಯಕ್ಷರಾದ ಎಸ್.ಹರೀಶ್, ಸಪ್ತಗಿರಿ ಗೌಡ, ನಿವೃತ್ತ ಐಎಎಸ್ ಅಧಿಕಾರಿ ಅನಿಲ್ ಕುಮಾರ್, ಎಸ್.ಸಿ.ಮೋರ್ಚಾ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವೇಂದ್ರ ಕೌತಾ, ಮೋರ್ಚಾದ ಉಪಾಧ್ಯಕ್ಷ ಹೂಡಿ ಮಂಜುನಾಥ್, ಪಕ್ಷದ ಪ್ರಮುಖರು, ಕಾರ್ಯಕರ್ತರು ಭಾಗವಹಿಸಿದ್ದರು.

ಕ್ರೀಡೆ - ಸಿನಿಮಾ
ಮುಸ್ಸಂಜೆ



# ‘ರಶ್ಮಿಕಾ ಮತ್ತು ಅವರ ತಂದೆಗೇ ಸಮಸ್ಯೆಯಿಲ್ಲ ಅಂದ್ಮೇಲೆ ನಿಮಗ್ಯಾಕೆ’

ಬಹುನಿರೀಕ್ಷಿತ 'ಸಿಕಂದರ್', ಇದೇ ಭಾನುವಾರ ತೆರೆಗಪ್ಪಳಿಸಲಿದೆ. ಇದೇ ಮೊದಲ ಬಾರಿ, ಬಾಲಿವುಡ್ ಸೂಪರ್ ಸ್ಟಾರ್ ಸಲ್ಮಾನ್ ಖಾನ್ ಹಾಗೂ ಬಹುಭಾಷಾ ನಟಿ ರಶ್ಮಿಕಾ ಮಂದಣ್ಣ ಸ್ಕ್ರೀನ್ ಶೇರ್ ಮಾಡಿದ್ದಾರೆ. ಸಿನಿಮಾ ಘೋಷಣೆಯಾದಾಗಿನಿಂದಲೂ ಹಲವು ವಿಚಾರಗಳಿಂದ ಸಖತ್ ಸದ್ದು ಮಾಡುತ್ತಾ ಬಂದಿದೆ. ಮುಖ್ಯಭೂಮಿಕೆಯಲ್ಲಿರುವ ನಟ ನಟಿಯ ವಯಸ್ಸಿನ ಅಂತರ ಕೂಡಾ ನೆಟ್ಟಿಗರ ಚರ್ಚೆಯ ವಿಷಯಗಳಲ್ಲೊಂದಾಗಿದೆ. ಅದಕ್ಕೀಗ ಸ್ವತಃ ನಾಯಕ ನಟನೇ ಪ್ರತಿಕ್ರಿಯಿಸಿದ್ದಾರೆ.

'ಸಿಕಂದರ್' ಚಿತ್ರದ ಟ್ರೇಲರ್ ಬಿಡುಗಡೆಯಾಗಿದೆ. ಟ್ರೇಲರ್‌ಗೆ ಅಭಿಮಾನಿಗಳಿಂದ ಬಹುತೇಕ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗಿದೆ. ಟ್ರೇಲರ್ ರಿಲೀಸ್ ಈವೆಂಟ್‌ನಲ್ಲಿ, ಸಲ್ಮಾನ್ ಖಾನ್ ಮಾಧ್ಯಮದ ಹಲವು ಪ್ರಶ್ನೆಗಳಿಗೆ ಉತ್ತರಿಸಿದರು. ಈ ಸಂದರ್ಭ, ತಮ್ಮ ಮತ್ತು ರಶ್ಮಿಕಾ ಮಂದಣ್ಣ ನಡುವಿನ ಏಜ್ ಡಿಫ್ರೆನ್ಸ್ ಬಗ್ಗೆಯೂ ಮಾತನಾಡಿದ್ದಾರೆ.

ಸಲ್ಮಾನ್ ಪ್ರಶ್ನೆಗೆ ನಾಚಿ ನೀರಾದ ರಶ್ಮಿಕಾ: 31 ವರ್ಷ ಏಜ್ ಗ್ಯಾಪ್ ಇದ್ದು, ಚಿತ್ರದಲ್ಲಿ ರೊಮ್ಯಾನ್ಸ್ ಮಾಡಿರುವ ಬಗ್ಗೆ ಸಿಕ್ಕಾಪಟ್ಟೆ ಟ್ರೋಲ್‌ಗಳಾಗಿವೆ. ಈ ಬಗ್ಗೆ ಮಾತನಾಡುತ್ತಾ, 'ನಾಯಕಿಗೆ ಯಾವುದೇ ಸಮಸ್ಯೆ ಇಲ್ಲ, ನಾಯಕಿಯ ತಂದೆಗೆ ಯಾವುದೇ ಸಮಸ್ಯೆ ಇಲ್ಲ ಅಂದ ಮೇಲೆ ನಿಮಗೇಕೆ ಸಮಸ್ಯೆ' ಎಂದು ಸಲ್ಮಾನ್ ಪ್ರಶ್ನಿಸಿದರು. ರಶ್ಮಿಕಾ ಅವರ ಮದುವೆ ಆಗುತ್ತೆ, ಹೆಣ್ಣು ಮಗು ಜನಿಸುತ್ತದೆ, ಅವರು ದೊಡ್ಡವರಾದ ಮೇಲೆ ಅವರೊಂದಿಗೂ ಕೆಲಸ ಮಾಡುತ್ತೇನೆ. ತಾಯಿಯ ಅನುಮತಿ ಸಿಗುತ್ತಲ್ವಾ? ಎಂದು ರಶ್ಮಿಕಾ ಬಳಿ ನೋಡಿ ಪ್ರಶ್ನಿಸಿದಾಗ ನಟಿ ನಾಚಿ ನೀರಾದರು. ಈ ವಿಡಿಯೋ ಸೋಷಿಯಲ್ ಮೀಡಿಯಾದಲ್ಲಿ ಸಖತ್ ಸದ್ದು ಮಾಡುತ್ತಿದೆ. ಹೌದೌದು 200, 100 ಕೋಟಿ ಬಹಳ ಹಿಂದಿನ ವಿಚಾರ: 'ಸಿಕಂದರ್' ಚಿತ್ರದ ಕಲೆಕ್ಷನ್ ಬಗ್ಗೆ ಪ್ರಶ್ನೆಗಳು ಎದುರಾದವು. ಸಿನಿಮಾ ಒಳ್ಳೆಯದಾಗಲಿ ಅಥವಾ ಕೆಟ್ಟದ್ದಾಗಲಿ, ಜನರು ಅದನ್ನು 100 ಕೋಟಿ ದಾಟಿಸುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದರು. ಅಷ್ಟರಲ್ಲಿ ಒಬ್ಬರು, ಸರ್ 3–4 ದಿನಗಳಲ್ಲಿ 200 ಕೋಟಿ ಎಂದು ಹೇಳುತ್ತಿದ್ದಂತೆ ಸಲ್ಮಾನ್ ತಮ್ಮನ್ನು ಸರಿಪಡಿಸಿಕೊಂಡು, ಹೌದು 200 ಕೋಟಿ. 100 ಕೋಟಿ ಬಹಳ ಹಿಂದಿನ ವಿಚಾರ ಎಂದು ಹೇಳಿದರು.



2025ರ ಮಾಸ್ ಆ್ಯಕ್ಷನ್ ಎಂಟರ್‌ಟೈನರ್ ಮಾರ್ಚ್ 30ರಂದು, ಈದ್ ಉಡುಗೊರೆಯಾಗಿ ಅದ್ದೂರಿಯಾಗಿ ವಿಶ್ವಾದ್ಯಂತ ಚಿತ್ರಮಂದಿರಗಳಲ್ಲಿ ಬಿಡುಗಡೆ ಆಗಲಿದೆ. ಖ್ಯಾತ ನಿರ್ದೇಶಕ ಎ.ಆರ್. ಮುರುಗದಾಸ್ ನಿರ್ದೇಶನದ ಈ ಚಿತ್ರವನ್ನು ಸಾಜಿದ್ ನಾಡಿಯಾಡ್ವಾಲಾ ನಿರ್ಮಿಸಿದ್ದಾರೆ. ಕಂಪ್ಲೀಟ್ ಆ್ಯಕ್ಷನ್ ಎಂಟರ್‌ಟೈನರ್, ಜೊತೆಗೊಂದು ಲವ್ ಸ್ಟೋರಿ ಹೊಂದಿರುವ ಸಿನಿಮಾ ಪ್ರೇಕ್ಷಕರ ಗಮನ ಸೆಳೆಯುವಲ್ಲಿ ಈಗಾಗಲೇ ಯಶಸ್ವಿಯಾಗಿದೆ. ಸಿಕಂದರ್ ಇದೇ ಭಾನುವಾರ ತೆರೆಗಪ್ಪಳಿಸಲಿದ್ದು, ಎಷ್ಟರ ಮಟ್ಟಿಗೆ ಗೆಲುವು ಕಾಣಲಿದೆ ಅನ್ನೋದನ್ನು ಕಾದು ನೋಡಬೇಕಿದೆ.



# ಮಗಳಿಗೆ ಸಾಂಪ್ರದಾಯಿಕ ಹೆಸರಿಟ್ಟ ನೇಹಾ ಗೌಡ




ಇತ್ತೀಚೆಗೆ ಎಲ್ಲರೂ ತಮ್ಮ ಮಗುವಿಗೆ ನಾಮಕರಣ ಮಾಡುವಾಗ ಫ್ಯಾನ್ಸಿ ಹೆಸರನ್ನು ಹುಡಕಲು ಬಯಸುತ್ತಾರೆ. ಎಲ್ಲೂ ಕೇಳಿರದ ಹೆಸರುಗಳನ್ನು ಇಡಲು ಆದ್ಯತೆ ನೀಡುತ್ತಾರೆ. ಈಗ ನೇಹಾ ಗೌಡ ಅವರು ತುಂಬಾನೇ ಸಾಂಪ್ರದಾಯಿಕ ಹೆಸರಿಟ್ಟು ಗಮನ ಸೆಳೆದಿದ್ದಾರೆ.

ನೇಹಾ ಗೌಡ ಅವರು ತಮ್ಮ ಮಗಳಿಗೆ ಶಾರದಾ ಎಂದು ನಾಮಕರಣ ಮಾಡಿದ್ದಾರೆ. ಈ ಹೆಸರನ್ನು ಅನೇಕರು ಮೆಚ್ಚಿಕೊಂಡಿದ್ದಾರೆ. ಎಲ್ಲರೂ ಫ್ಯಾನ್ಸಿ ಹೆಸರಿನ ಹಿಂದೆ ಓಡೋ ಈ ಸಮಯದಲ್ಲಿ ನೇಹಾ ಗೌಡ ಅವರು ಸಾಂಪ್ರದಾಯಿಕ ಹೆಸರಿಟ್ಟಿದ್ದಾರೆ.

ಶಾರದೆ ಎಂಬುದು ವಿದ್ಯಾ ದೇವತೆಯ ಹೆಸರು. ಅವರು ಈ ಹೆಸರನ್ನು ಇಟ್ಟಿದ್ದಕ್ಕೆ ಅನೇಕರು ಖುಷಿಪಟ್ಟಿದ್ದಾರೆ. ‘ಹೆಸರು ಸಾಂಪ್ರದಾಯಿಕವಾಗಿದೆ’ ಎಂದು ಅನೇಕರು ಕಮೆಂಟ್ ಮಾಡಿದ್ದಾರೆ. ಈ ಬಗ್ಗೆ ಸೋಶಿಯಲ್ ಮೀಡಿಯಾದಲ್ಲಿ ಚರ್ಚೆ ಆಗುತ್ತಿದೆ.

‘ಎಲ್ಲರೂ ಫ್ಯಾನ್ಸಿ ಹೆಸರಿನ ಹಿಂದೆ ಓಡುತ್ತಿದ್ದಾರೆ. ಆದರೆ, ನೀವು ಮಾತ್ರ ಈ ರೀತಿಯ ಒಳ್ಳೆಯ ಹೆಸರನ್ನು ಇಟ್ಟಿದ್ದೀರಿ. ಇದು ನಿಜಕ್ಕೂ ಖುಷಿಯ ವಿಚಾರ’ ಎಂದು ಕೆಲವರು ಹೇಳಿದ್ದಾರೆ. ಇನ್ನೂ ಕೆಲವರು ಇನ್ನಷ್ಟು ಮಗಳ ಫೋಟೋ ಹಂಚಿಕೊಳ್ಳಲು ಕೋರಿದ್ದಾರೆ.

ನೇಹಾ ಗೌಡ ಅವರು ಕಿರುತೆರೆ ಮೂಲಕ ಫೇಮಸ್ ಆಗಿದ್ದಾರೆ. ಅವರು ಇತ್ತೀಚಿನ ವರ್ಷಗಳಲ್ಲಿ ನಟನೆಯಿಂದ ದೂರವೇ ಇದ್ದಾರೆ. ಅವರು ಮತ್ತೆ ಕಿರುತೆರೆಗೆ ಬರಲಿ ಎಂದು ಫ್ಯಾನ್ಸ್ ಬಯಸುತ್ತಾ ಇದ್ದಾರೆ.




# ‘ಟಾಕ್ಸಿಕ್’ ಚಿತ್ರಕ್ಕೆ ಠಕ್ಕರ್ ಕೊಡಲು ಬರ್ತಿದೆ ಮತ್ತೆರಡು ಬಿಗ್ ಬಜೆಟ್ ಸಿನಿಮಾ

‘ಟಾಕ್ಸಿಕ್’ ಸಿನಿಮಾ ಇದೇ ಏಪ್ರಿಲ್ 10ರಂದು ರಿಲೀಸ್ ಆಗಬೇಕಿತ್ತು. ಆದರೆ, ತಂಡದ ಪ್ಲ್ಯಾನ್ ಬದಲಾಗಿದೆ. ಶೂಟಿಂಗ್‌ಗೆ ಇನ್ನೂ ಸಾಕಷ್ಟು ಸಮಯ ಹಿಡಿಯಲಿರುವುದರಿಂದ ಚಿತ್ರದ ರಿಲೀಸ್ ದಿನಾಂಕವನ್ನು ಮುಂದಿನ ಮಾರ್ಚ್ 19ಕ್ಕೆ ಮುಂದೂಡಲಾಗಿದೆ. ಅಂದರೆ ಸಿನಿಮಾ ರಿಲೀಸ್‌ಗೆ ಇನ್ನೂ ಬರೋಬ್ಬರಿ 1 ವರ್ಷ ಕಾಯಬೇಕಿದೆ. ಸಾಕಷ್ಟು ಎಚ್ಚರಿಕೆಯಿಂದ ಕೆಲಸಗಳನ್ನು ಮಾಡಲಾಗುತ್ತಿರುವುದರಿಂದ ಸಿನಿಮಾದ ಶೂಟ್‌ಗೆ ಹೆಚ್ಚಿನ ಸಮಯದ ಅಗತ್ಯವಿದೆ ಎಂದು ಹೇಳಲಾಗುತ್ತಿದೆ. ಈಗ ಈ ಚಿತ್ರಕ್ಕೆ ಠಕ್ಕರ್ ಕೊಡಲು ಟಾಲಿವುಡ್‌ನ ಎರಡು ಸಿನಿಮಾಗಳು ರೆಡಿ ಆಗಿದೆ.

ಸಾಮಾನ್ಯವಾಗಿ ಬಿಗ್ ಬಜೆಟ್ ಚಿತ್ರ ಒಂದು ಪ್ಯಾನ್ ಇಂಡಿಯಾ ಮಟ್ಟದಲ್ಲಿ ರಿಲೀಸ್ ಆಗುತ್ತದೆ ಎಂದರೆ ಆ ಸಂದರ್ಭದಲ್ಲಿ ಮತ್ತೊಂದು ಬಿಗ್ ಬಜೆಟ್ ಚಿತ್ರವನ್ನು ತೆರೆಗೆ ತರುವ ಸಾಹಸವನ್ನು ನಿರ್ಮಾಕರು ಮಾಡುವುದಿಲ್ಲ. ಹಾಗೆ ಮಾಡಿದರೆ ಎರಡೂ ನಿರ್ಮಾಪಕರಿಗೆ ನಷ್ಟ ಆಗುವ ಸಾಧ್ಯತೆ ಇರುತ್ತದೆ. ಆದರೆ, ಟಾಲಿವುಡ್ ನಿರ್ಮಾಪಕರು ಈ ರೀತಿಯ ಸಾಹಸ ಮಾಡುವ ಕೆಲಸಕ್ಕೆ ಮುಂದಾಗುತ್ತಾ ಇದ್ದಾರೆ.

ಈ ರೀತಿ ಸಾಹಸಕ್ಕೆ ಮುಂದಾಗುತ್ತಿರುವುದು ರಾಮ್ ಚರಣ್ ಹಾಗೂ ಬುಚ್ಚಿ ಬಾಬು ಸನಾ ಒಟ್ಟಾಗಿ ಮಾಡುತ್ತಿರುವ ಸಿನಿಮಾ ತಂಡದವರು. ಸದ್ಯ ಈ ಚಿತ್ರಕ್ಕೆ ‘ಪೆಡ್ಡಿ’ ಎಂಬ ಟೈಟಲ್ ಇಡಲಾಗಿದೆ ಎನ್ನಲಾಗಿದೆ. ಮಾರ್ಚ್ 27ರಂದು ರಾಮ್ ಚರಣ್ ಜನ್ಮದಿನ. ಈ ವೇಳೆ ಈ ಬಗ್ಗೆ ಘೋಷಣೆ ಆಗೋ ಸಾಧ್ಯತೆ ಇದೆ.

ರಾಮ್ ಚರಣ್ ಅವರ ಮುಂದಿನ ಬರ್ತ್‌ಡೇ ಸಂದರ್ಭದಲ್ಲಿ ‘ಪೆಡ್ಡಿ’ ರಿಲೀಸ್ ಮಾಡುವ ಆಲೋಚನೆ ತಂಡಕ್ಕೆ ಬಂದಿದೆ. ರಾಮ್ ಚರಣ್ ಜನ್ಮದಿನ ಮಾರ್ಚ್ 27. ಹೀಗಾಗಿ, ಇದೇ ಸಮಯದ ಆಸುಪಾಸಿನಲ್ಲಿ ಚಿತ್ರ ರಿಲೀಸ್ ಆಗುವ ಸಾಧ್ಯತೆ ಹೆಚ್ಚಿದೆ. ನಾನಿ ನಟನೆಯ ‘ದಿ ಪ್ಯಾರಡೈಸ್’ ಸಿನಿಮಾ ಕೂಡ ಇದೇ ಸಂದರ್ಭದಲ್ಲಿ ಬಿಡುಗಡೆ ಆಗೋ ಸಾಧ್ಯತೆ ಇದೆ ಎಂದು ವರದಿ ಆಗಿದೆ. ಹೀಗಾಗಿ, ಬಾಕ್ಸ್ ಆಫೀಸ್‌ನಲ್ಲಿ ದೊಡ್ಡ ಕ್ಲ್ಯಾಶ್ ಏರ್ಪಡುವ ಸಾಧ್ಯತೆ ಇದೆ.

ಮಾರ್ಚ್ ಸಂದರ್ಭದಲ್ಲಿ ಎಲ್ಲರೂ ಶಾಲಾ ಪರೀಕ್ಷೆಯಲ್ಲಿ ಬ್ಯುಸಿ ಇರುತ್ತಾರೆ. ಐಪಿಎಲ್ ಅಬ್ಬರ ಕೂಡ ಶುರುವಾಗಿರುತ್ತದೆ. ಇವುಗಳ ಮಧ್ಯೆಯೂ ದೊಡ್ಡ ದೊಡ್ಡ ಬಿಗ್ ಬಜೆಟ್ ಚಿತ್ರಗಳು ರಿಲೀಸ್ ಆಗುತ್ತಿರುವುದು ನಿಜಕ್ಕೂ ವಿಶೇಷ.



# ಅಡ್ವಾನ್ಸ್ ಟಿಕೆಟ್‌ನಲ್ಲೇ 58 ಕೋಟಿ ರೂ.ವ್ಯವಹಾರ

ಮಲಯಾಳಂ ಸೂಪರ್ ಸ್ಟಾರ್ ಮೋಹನ್‌ಲಾಲ್ ಮುಖ್ಯಭೂಮಿಕೆಯ 'ಎಲ್2: ಎಂಪುರಾನ್' ತನ್ನ ಪ್ರಿ–ಸೇಲ್ ಸಲುವಾಗಿ ಸಖತ್ ಸದ್ದು ಮಾಡುತ್ತಿದೆ. ಸೌತ್ ಸೂಪರ್ ಸ್ಟಾರ್ ಪೃಥ್ವಿರಾಜ್ ಸುಕುಮಾರನ್ ನಿರ್ದೇಶನದ ಬಹು ನಿರೀಕ್ಷಿತ ಆ್ಯಕ್ಷನ್ ಥ್ರಿಲ್ಲರ್, ಅಡ್ವಾನ್ಸ್ ಬುಕಿಂಗ್‌ನಲ್ಲಿ ಹೊಸ ದಾಖಲೆ ಸೃಷ್ಟಿಸಿದೆ. ಬಾಲಿವುಡ್ ಮತ್ತು ಟಾಲಿವುಡ್ ರೆಕಾರ್ಡ್‌ಗಳನ್ನು ಮೀರಿಸಿದೆ.

ಎಂಪುರಾನ್, ಮುರಳಿ ಗೋಪಿ ಬರೆದ ಲೂಸಿಫರ್ ಚಿತ್ರದ ಸೀಕ್ವೆಲ್ ಆಗಿದ್ದು, ಬಹಳ ದೊಡ್ಡ ಪ್ರಮಾಣದಲ್ಲಿ ನಿರ್ಮಿಸಲಾಗಿದೆ. ನಿರ್ಮಾಪಕರು ಬಜೆಟ್ ಬಿಟ್ಟುಕೊಟ್ಟಿಲ್ಲವಾದರೂ, ಇದು ಮಲಯಾಳಂ ಚಿತ್ರರಂಗದಲ್ಲೇ ಈವರೆಗಿನ ಅತ್ಯಂತ ದುಬಾರಿ ಚಿತ್ರ ಎಂದು ಹೇಳಲಾಗಿದೆ.

ಕೇರಳದಲ್ಲಿ ಟಿಕೆಟ್‌ಗಳಿಗೆ ಭಾರಿ ಬೇಡಿಕೆಯಿದೆ. ಅಡ್ವಾನ್ಸ್ ಬುಕಿಂಗ್‌ನಲ್ಲಿ ಮೊದಲ ದಿನವೇ ದಾಖಲೆ ನಿರ್ಮಿಸಿದೆ. ಸಿನಿಮಾದ ಪ್ರೀ ಸೇಲ್ಸ್ ಮಾರ್ಚ್ 21ರಂದು ಪ್ರಾರಂಭವಾಯಿತು. ಕೇವಲ 24 ಗಂಟೆಗಳಲ್ಲಿ, ಟಿಕೆಟ್ ಪ್ಲ್ಯಾಟ್‌ಫಾರ್ಮ್ ಆದ ಬುಕ್‌ಮೈಶೋನಲ್ಲಿ 6,28,000 ಟಿಕೆಟ್ಸ್ ಮಾರಾಟವಾಗಿವೆ ಎಂದು ಚಿತ್ರತಯಾರಕರು ಸಾಮಾಜಿಕ ಮಾಧ್ಯಮದಲ್ಲಿ ಮಾಹಿತಿ ಹಂಚಿಕೊಂಡಿದ್ದಾರೆ. ಒಟ್ಟು ಅಡ್ವಾನ್ಸ್ ಕಲೆಕ್ಷನ್ ವಿಷಯವನ್ನು ಗಮನಿಸೋದಾದರೆ, ಎಂಪುರಾನ್ ಈಗಾಗಲೇ ಭಾರತದಲ್ಲಿ ತನ್ನ ಮೊದಲ ದಿನ ಸರಿ–ಸುಮಾರು 12.43 ಕೋಟಿ ರೂಪಾಯಿ (ಫ್ಯಾನ್ಸ್ ಶೋ ಸೇರಿ) ಕಲೆಕ್ಷನ್ ಮಾಡಿದೆ. ಚಿತ್ರತಂಡದ ಪ್ರಕಾರ, ವಿಶ್ವಾದ್ಯಂತ ಪ್ರೀ ಸೇಲ್ಸ್ ವ್ಯವಹಾರದಲ್ಲಿ 58 ಕೋಟಿ ರೂಪಾಯಿ ದಾಟಿದೆ. ಇದು ಮಾಲಿವುಡ್ ಚಿತ್ರವೊಂದಕ್ಕೆ ಮೊದಲ ದಿನದ ಅತಿ ಹೆಚ್ಚು ಕಲೆಕ್ಷನ್ ಮಾಡಿಕೊಟ್ಟ ಸಿನಿಮಾ. ಇದೇ ಗುರುವಾರ ಸಿನಿಮಾ ಬಿಡುಗಡೆ ಆಗಲಿದ್ದು, ಅಂಕಿ – ಅಂಶ ಮತ್ತಷ್ಟು ಏರಿಕೆ ಕಾಣುವ ಭರವಸೆ ಇದೆ.

ಪೃಥ್ವಿರಾಜ್ ಸುಕುಮಾರನ್ ಆ್ಯಕ್ಷನ್ ಕಟ್ ಹೇಳಿರುವ ಎಂಪುರಾನ್ ಮಾರ್ಚ್ 27, ಗುರುವಾರದಂದು ಮಲಯಾಳಂ, ಹಿಂದಿ, ತೆಲುಗು, ಕನ್ನಡ ಮತ್ತು ತಮಿಳು ಭಾಷೆಗಳಲ್ಲಿ ವಿಶ್ವಾದ್ಯಂತ ಚಿತ್ರಮಂದಿರಗಳಲ್ಲಿ ತೆರೆಕಾಣಲಿದೆ. ಕರ್ನಾಟಕದಲ್ಲಿ ಹೊಂಬಾಳೆ ಫಿಲ್ಮ್ಸ್ ಈ ಚಿತ್ರವನ್ನು ವಿತರಿಸಲಿದೆ. ಎಂಪುರಾನ್, ಲೂಸಿಫರ್‌ನ 2ನೇ ಭಾಗವಾಗಿದ್ದು, ಮೋಹನ್‌ಲಾಲ್ ಜೊತೆಗೆ ಪೃಥ್ವಿರಾಜ್ ಸುಕುಮಾರನ್, ಕಾರ್ತಿಕೇಯ ದೇವ್, ಟೊವಿನೋ ಥಾಮಸ್, ಇಂದ್ರಜಿತ್ ಸುಕುಮಾರನ್, ಮಂಜು ವಾರಿಯರ್ ಮತ್ತು ಅಭಿಮನ್ಯು ಸಿಂಗ್, ಎರಿಕ್ ಎಬೌನಿ, ಜೆರೋಮ್ ಫ್ಲಿನ್, ಆಂಡ್ರಿಯಾ ತಿವಾದರ್, ಸೂರಜ್ ವೆಂಜರಮೂಡು ಅಭಿನಯಿಸಿದ್ದಾರೆ. ಮೋಹನ್ ಲಾಲ್ ಅವರ ಆಶೀರ್ವಾದ್ ಸಿನಿಮಾಸ್, ಶ್ರೀ ಗೋಕುಲಂ ಮೂವೀಸ್ ಮತ್ತು ಲೈಕಾ ಪ್ರೊಡಕ್ಷನ್ಸ್ ಜಂಟಿಯಾಗಿ ನಿರ್ಮಿಸಿರುವ ಈ ಚಿತ್ರದಲ್ಲಿ ಸುಜಿತ್ ವಾಸುದೇವ್ ಅವರ ಕ್ಯಾಮರಾ ವರ್ಕ್ ಇದೆ.

Edited, Published and Owned by Laxmiprasanna R.H, #1652/6, 20th Cross, 8th Main, C Block, SahakarNagar, Bangalore-560092. Printed by P N Printers, Narasipalya, Arishinakunte(Post), Kasaba(hobali), Nelamangala, Bengaluru-562123
Email-mussanje2010@gmail.com, Phone: 9448074878